UNIVERSAL
LIBRARY
OU_198711
UNIVERSAL
LIBRARY

ಶ್ರೀ ರಾಮಕೃಷ್ಣಾಶ್ರಮ ಗ್ರಂಥಮಾಲಾ ೩

OSMANIA UNIVERSITY
COLLEGE LIBRARY.

ಶ್ರೀ

# ಶ್ರೀರಾಮಕೃಷ್ಣ ಪರಮಹಂಸರ ಚರಿತ್ರೆ

ಶ್ರೀ ರಾಮಕೃಷ್ಣ ಪರಮಹಂಸ

ಟಿ. ಎಸ್. ವೆಂಕಣ್ಣಯ್ಯ, ಎಂ. ಎ.

ಮತ್ತು

ಎ. ಆರ್. ಕೃಷ್ಣಶಾಸ್ತ್ರೀ, ಬಿ. ಎ.

ಇವರಿಂದ ರಚಿಸಲ್ಪಟ್ಟಿದೆ.

ಪ್ರಥಮ ಮುದ್ರಣ ೧,೦೦೦ ಪ್ರತಿಗಳು

ಬೆಂಗಳೂರು

೧೯೧೯

ರಿಜಿಸ್ಟರ್ಡ್ ಕಾಪಿರೈಟ್] [ಕ್ರಯ ೮ ಆಣೆ

ಶ್ರೀ ರಾಮಕೃಷ್ಣಾಶ್ರಮ ಗ್ರಂಥಮಾಲಾ

೨೬

ಶ್ರೀ

# ಶ್ರೀರಾಮಕೃಷ್ಣ ಪರಮಹಂಸರ ಚರಿತ್ರೆ

**ಟಿ. ಎಸ್. ವೆಂಕಣ್ಣಯ್ಯ, ಎಂ. ಎ.**

ಮತ್ತು

**ಎ. ಆರ್. ಕೃಷ್ಣಶಾಸ್ತ್ರೀ, ಬಿ. ಎ.**

ಇವರಿಂದ ರಚಿಸಲ್ಪಟ್ಟಿದೆ.

ಪ್ರಥಮ ಮುದ್ರಣ ೧,೦೦೦ ಪ್ರತಿಗಳು

**ಬೆಂಗಳೂರು**

೧೯೧೯

ರಿಜಿಸ್ಟರ್ಡ್ ಕಾಪಿರೈಟ್]

[ಕ್ರಯ ೮ ಅಣೆ

**ಎಂ. ಎಸ್. ರಾವ್ ಕಂಪೆನಿ,**

[illegible]

# ವಿಜ್ಞಾಪನೆ.

ಶ್ರೀ ಶ್ರೀರಾಮಕೃಷ್ಣಪರಮಹಂಸರವರು, “ ಬ್ರಹ್ಮಸಾಕ್ಷಾತ್ಕಾರ ವಾಗದೆ ವೇದಾಂತ ವಿಚಾರವನ್ನು ಗ್ರಂಥಗಳಲ್ಲಿ ಓದಿಕೊಂಡು ಪರಮಾತ್ಮನ ಸ್ವರೂಪವನ್ನು ಕುರಿತು ವಿಚಾರಮಾಡುವುದು, ಭೂಪಠದಲ್ಲಿ ಕಾಶೀಪಟ್ಟಣವನ್ನು ನೋಡಿ ಅದನ್ನು ವರ್ಣನೆ ಮಾಡುವಹಾಗೆ” ಎಂದು ಹೇಳುತ್ತಿದ್ದರು. ನಾವು ಅವರ ಜೀವನ ಚರಿತ್ರೆಯನ್ನು ಬರೆಯುವುದಕ್ಕೆ ಹೊರಟಿರುವುದೂ ಸ್ವಲ್ಪಮಟ್ಟಿಗೆ ಹಾಗೆಯೇ ಆಗಿದೆ. ನಮಗೆ ಆ ಮಹಾನುಭಾವರ ಸಾನ್ನಿಧ್ಯದಲ್ಲಿಯೇ ಇದ್ದುಕೊಂಡು ಅವರ ಸಂಗತಿಗಳನ್ನು ಪ್ರತ್ಯಕ್ಷವಾಗಿ ತಿಳಿದುಕೊಳ್ಳುವ ಪುಣ್ಯವು ಲಭಿಸಲಿಲ್ಲ. ಅವರು ಹೇಳಿರುವ ವಿಚಾರಗಳನ್ನು ಪೂರ್ಣವಾಗಿ ಗ್ರಹಿಸುವ ಶಕ್ತಿಯಂತೂ ಇಲ್ಲವೇ ಇಲ್ಲ. ಆದರೂ ಬೆಂಗಳೂರಿನ ಶ್ರೀರಾಮಕೃಷ್ಣ ಮಠದಲ್ಲಿರುವ ಶ್ರೀನಿರ್ಮಲಾನಂದ ಸ್ವಾಮಿಗಳ ಆಜ್ಞೆಯಂತೆ ಈ ಕೆಲಸವನ್ನು ಕೈಗೊಂಡು ಪರಮಹಂಸರ ಶಿಷ್ಯಮಂಡಲಿಗೆ ಸೇರಿದ ಶಾರದಾನಂದ ಸ್ವಾಮಿಗಳಿಂದ ಬಂಗಾಳೀ ಭಾಷೆಯಲ್ಲಿ ರಚಿತವಾದ “ಶ್ರೀರಾಮಕೃಷ್ಣ ಲೀಲಾಪ್ರಸಂಗ” ಎಂಬ ಗ್ರಂಥದ ಆಧಾರದ ಮೇಲೆ ಈ ಸಣ್ಣಪುಸ್ತಕವನ್ನು ಬರೆದಿದ್ದೇವೆ. “ಶ್ರೀರಾಮಕೃಷ್ಣ ಲೀಲಾಪ್ರಸಂಗವು” ಬಹು ದೊಡ್ಡಗ್ರಂಥ; ಇದುವರಿಗೆ ಪ್ರಕಟವಾಗಿರುವ ಆ ಗ್ರಂಥವು ಸುಮಾರು ೧,೫೦೦ ಪುಟಗಳವರೆಗೆ ಬಂದಿದೆ. ಆದರೂ ಅದು ಅಷ್ಟಕ್ಕೇ ಮುಗಿಯುವಂತಿಲ್ಲ. ಇದೇ ಬೆಂಗಳೂರು ಮಠದಲ್ಲಿಯೇ ಇದ್ದು ಈಗ ಮದರಾಸಿಗೆ ದಯಮಾಡಿರುವ ವಿದೇಹಾನಂದ ಸ್ವಾಮಿಗಳು ಅದಷ್ಟನ್ನೂ ನಮಗೆ ಓದಿತಿಳಿಸಿದರು. ಆದ್ದರಿಂದ ಈ ಗ್ರಂಥರಚನೆಗೆ ಅವರಿಂದಾದ ಸಹಾಯವು ಇಷ್ಟೆಂದು

ಹೇಳುವ ಹಾಗಿಲ್ಲ. ಇದಕ್ಕಾಗಿ ನಾವು ಅವರಿಗೆ ಬಹಳವಾಗಿ ಕೃತಜ್ಞರಾಗಿರುವೆವು.

ಜ್ಞಾನಸಂಪಾದನೆಗೆ ಸತ್ಸಂಗವೇ ಮುಖ್ಯ ಸಾಧನವೆಂದು ಕೇಳಿದ್ದೇವೆ. ರಾಮಕೃಷ್ಣ ಪರಮಹಂಸರಂಥ ಮಹಾನುಭಾವರ ಸಂಗವು ಲಭಿಸದಿದ್ದ ಪಕ್ಷದಲ್ಲಿ ಅವರ ಚರಿತಾಮೃತ ಶ್ರವಣ ಉಪದೇಶ ಮನನ ಇವುಗಳಿಂದ ಬಹುಮಟ್ಟಿಗೆ ಅವರ ಸಂಗಫಲವನ್ನು ಪಡೆಯಬಹುದು. ಆದರೆ ನಮ್ಮಂಥ ಅಲ್ಪಮತಿಗಳಿಂದ ರಚಿತವಾದ ಈ ಸಣ್ಣಪುಸ್ತಕವನ್ನು ಓದಿ ಪಾಠಕರು ಪರಮಹಂಸರ ವಿಚಾರಗಳೆಲ್ಲವೂ ತಿಳಿದುವೆಂದೂ ಅವರ ಮಾಹಾತ್ಮ್ಯವು ಇಷ್ಟೇಯೆಂದೂ ನಿರ್ಧರಿಸಲಾಗದು. ಏಕೆಂದರೆ ಅವರ ವಿಚಾರವಾಗಿ ಸುಮಾರು ೧,೫೦೦ ಪುಟಗಳುಳ್ಳ ಗ್ರಂಥವನ್ನು ಓದಿದ್ದರೂ ಅವರ ಜೀವನದ ಸಂಗತಿಗಳನ್ನೆಲ್ಲ ತಿಳಿದುಕೊಂಡಿದ್ದೇವೆಂಬ ನಂಬುಗೆಯು ನಮಗೇ ಹುಟ್ಟಲೊಲ್ಲದು. ಆದ್ದರಿಂದ 'ಶ್ರೀರಾಮಕೃಷ್ಣ ಲೀಲಾಪ್ರಸಂಗ', 'ಶ್ರೀರಾಮಕೃಷ್ಣ ಕಥಾಮೃತ' ಮುಂತಾದ ಗ್ರಂಥಗಳನ್ನು ಕನ್ನಡಿಗರು ಓದಬೇಕೆಂದು ಪ್ರಾರ್ಥಿಸುವೆವು. ಈ ಗ್ರಂಥಗಳಲ್ಲಿ ಶ್ರೀ ರಾಮಕೃಷ್ಣ ಕಥಾಮೃತದ ಸ್ವಲ್ಪಭಾಗವು ಇಂಗ್ಲೀಷಿಗೆ ತರ್ಜಮೆಯಾಗಿ "The Gospel of Sri Ramakrishna" ಎಂಬ ಹೆಸರಿನಿಂದ ಪ್ರಕಟವಾಗಿದೆ. ಶ್ರೀರಾಮಕೃಷ್ಣ ಲೀಲಾಪ್ರಸಂಗವು ಇನ್ನೂ ಇಂಗ್ಲೀಷಿಗೆ ತರ್ಜಮೆಯಾಗಿಲ್ಲ. ಸದ್ಯಕ್ಕೆ ಆಗುವ ಸಂಭವವೂ ಇಲ್ಲ. ಆದರೆ ನಾವು ಅದನ್ನೇಕೆ ಕಾದುಕೊಂಡಿರಬೇಕು? "ಸುಲಿದ ಬಾಳೆಯ ಹಣ್ಣಿನಂದದಿ......" ಇರುವ ನಮ್ಮ ಕನ್ನಡನುಡಿಯಲ್ಲಿಯೇ ಅವನ್ನು ಏಕೆ ಓದಬಾರದು? ಭಕ್ತಶಿರೋಮಣಿಗಳ ಉದಾರಾಶ್ರಯವು ದೊರೆತರೆ ಈ ಗ್ರಂಥಗಳನ್ನೂ ವಿವೇಕಾನಂದ ಸ್ವಾಮಿಗಳು ಶಿಷ್ಯರೊಡನೆ ಮಾಡಿದ ಸಂಭಾಷಣೆಗಳನ್ನೂ, ಧರ್ಮವೀರರಾದ ಆಚಾರ್ಯ ಪುರುಷರ ಚರಿತ್ರೆಗಳನ್ನೂ ಧಾರಾವಾಹಕವಾಗಿ ಮಾಸಪತ್ರಿಕೆಯ ರೂಪದಲ್ಲಿ ಕನ್ನಡಿಸಿ ಸಮರ್ಪಿಸಬೇಕೆಂಬ ಉದ್ದೇಶ

ವಿದೆ. ಶ್ರೀ ಶ್ರೀಪರಮಹಂಸರವರ ವರಪ್ರಸಾದಬಲದಿಂದಲೂ, ಭಕ್ತ ರಾದ ಕನ್ನಡಿಗರ ಉತ್ಸಾಹಾಶ್ರಯಗಳಿಂದಲೂ ಆ ಉದ್ದೇಶವು ಸದ್ಯ ದಲ್ಲಿಯೇ ನೆರವೇರೀತೆಂದು ನಂಬಿದ್ದೇವೆ.

ಕ್ರಯವು ಸುಲಭವಾಗಿ ಪುಸ್ತಕವು ಎಲ್ಲರಿಗೂ ಕೊಳ್ಳುವು ದಕ್ಕೆ ಸಾಧ್ಯವಾಗಿರಬೇಕೆಂಬ ಉದ್ದೇಶದಿಂದ ಮುಖ್ಯ ಮುಖ್ಯವಾದ ವಿಷಯುಗಳನ್ನೇ ಸಂಗ್ರಹಿಸಿ ಗ್ರಂಥವನ್ನು ಸಣ್ಣದಾಗಿ ಬರೆದಿದ್ದೇವೆ. ಆದ್ದರಿಂದ ಪರಮಹಂಸರ ಉಪದೇಶಗಳನ್ನೆಲ್ಲ ಇಲ್ಲಿ ತರಲು ಅವ ಕಾಶವಾಗಲಿಲ್ಲ. ಪಾಠಕರೆಲ್ಲರೂ ಮ॥ ರಾ॥ ಎನ್. ವೆಂಕಟೇ ಶಯ್ಯಂಗಾರ್ಯರಿಂದ ರಚಿತವಾದ "ಶ್ರೀರಾಮಕೃಷ್ಣ ಪರಮಹಂಸರ ಉಪದೇಶವಾಕ್ಯಾವಳಿ" ಯನ್ನು ಓದಿ ಈ ಕೊರತೆಯನ್ನು ಪರಿ ಹಾರಮಾಡಿಕೊಳ್ಳಬೇಕೆಂದು ಪ್ರಾರ್ಥಿಸುವೆವು.

ಈ ಗ್ರಂಥದ ಸಮಸ್ತಹಕ್ಕು ಬಾಧ್ಯತೆಗಳೂ ಶ್ರೀ ಶ್ರೀರಾಮ ಕೃಷ್ಣ ಮಠದವುಗಳಾಗಿರುತ್ತವೆ.

ಬೆಂಗಳೂರು,
ಜನವರಿ 1919.

**ಗ್ರಂಥಕರ್ತರು.**

# ವಿಷಯಸೂಚಿಕೆ


| | ಪುಟ |
|---|---|
| ಅವತರಣಿಕೆ ... ... ... | ೧ |
| ರಾಮಕೃಷ್ಣಪರಮಹಂಸರ ತಾಯಿತಂದೆಗಳು ... | ೯ |
| ಜನನ ಮತ್ತು ಬಾಲ್ಯ ... ... ... | ೧೯ |
| ದಕ್ಷಿಣೇಶ್ವರದ ಕಾಳೀದೇವಸ್ಥಾನ ... ... | ೩೬ |
| ಪರಮಹಂಸರು ಕಾಳಿಯ ಅರ್ಚಕರಾಗಿ ನಿಂತದ್ದು ... | ೪೦ |
| ಸಾಧನಾ ... ... ... | ೪೬ |
| ಸಾಧನಗಳು : ಮೊದಲನೆಯಭಾಗ : ೧೮೫೫—೧೮೫೮ ... | ೫೦ |
| ಸಾಧನಗಳು : ಎರಡನೆಯಭಾಗ : ೧೮೫೯—೧೮೬೨ ... | ೬೧ |
| ಸಾಧನಗಳು : ಮೂರನೆಯಭಾಗ : ೧೮೬೩—೧೮೬೬ ... | ೬೬ |
| ಕಾಮಾರಪುಕುರಕ್ಕೆ ಹೋಗಿ ಬಂದದ್ದು : ತೀರ್ಥಯಾತ್ರೆ ... | ೭೩ |
| ಸಾಧಕಭಾವ ಸಮಾಲೋಚನೆ ... ... | ೭೯ |
| ಶ್ರೀ ಶ್ರೀರಾಮಕೃಷ್ಣಪರಮಹಂಸರ ಗುರುಭಾವ ... | ೮೩ |
| ಮಹಾಸಮಾಧಿ ... ... ... | ೧೦೮ |


——:o:——



Bhagavan Sri Ramakrishna.

ಶ್ರೀಃ

ಓಂನಮೋ ಭಗವತೇ ರಾಮಕೃಷ್ಣಾಯ.

# ಶ್ರೀರಾಮಕೃಷ್ಣ ಪರಮಹಂಸರ ಚರಿತ್ರೆ.

---

## ಅವತರಣಿಕೆ.

ಯದಾಯದಾ ಹಿ ಧರ್ಮಸ್ಯ ಗ್ಲಾನಿರ್ಭವತಿ ಭಾರತ।
ಅಭ್ಯುತ್ಥಾನ ಮಧರ್ಮಸ್ಯ ತದಾತ್ಮಾನಂಸೃಜಾಮ್ಯಹಂ।
. . . . . . . .
ಧರ್ಮಸಂಸ್ಥಾಪನಾರ್ಥಾಯ ಸಂಭವಾಮಿ ಯುಗೇಯುಗೇ॥

ಧರ್ಮವೇ ಭಾರತೀಯರ ಸರ್ವಸ್ವ. ಹಿಂದೂಸಮಾಜ ನಿಲಯಕ್ಕೆ ಧರ್ಮವೇ ತಳಹದಿ. ಈ ಸುದೃಢವಾದ ತಳಹದಿಯ ಮೇಲೆ ಆರ್ಯ ಮಹನೀಯರು ಸಾವಿರಾರು ವರ್ಷಗಳಿಂದ ಸುಂದರವಾದ ಕಟ್ಟಡವನ್ನು ಕಟ್ಟಿಕೊಂಡು ಬಂದಿದ್ದಾರೆ. ನಮ್ಮ ಜನಾಂಗವನ್ನು ಒಂದು ದೊಡ್ಡ 'ಧರ್ಮಸಂಸಾರ' ವೆಂದು ಹೇಳಬಹುದು. ನಮ್ಮಲ್ಲಿ ನಿಂತರೆ ಧರ್ಮ, ಕುಳಿತರೆ ಧರ್ಮ; ಬೆಳಗೆದ್ದರೆ ರಾತ್ರಿ ಮಲಗುವ ವರೆಗೂ ನಾವು ಮಾಡಬೇಕಾದ ಪ್ರತಿಯೊಂದು ಕರ್ಮವೂ ಧರ್ಮ ಮಯ. ಒಂದೊಂದು ವಿಧಿಯೂ, ಒಂದೊಂದು ನಿಯಮವೂ,

ಒಂದೊಂದು ಪದ್ಧತಿಯೂ, ಒಂದೊಂದು ಆಚಾರವೂ ಧರ್ಮ ಮೂಲವಾಗಿದೆ.

'ಧರ್ಮ' ವೆಂದರೇನು? ಯಾವುದು ಈಶ್ವರಸಾಕ್ಷಾತ್ಕಾರಕ್ಕೆ ಸಹಕಾರಿಯಾಗುವುದೋ ಅದೇ ಧರ್ಮ. ಈ ಈಶ್ವರಸಾಕ್ಷಾತ್ಕಾರವು ಇಂದ್ರಿಯಗಳ ಮೂಲಕ ಆಗತಕ್ಕದ್ದಲ್ಲವೆಂದು ವೇದಗಳಿಂದ ಗೊತ್ತಾಗುತ್ತದೆ. ಇಂದ್ರಿಯಾತೀತವಾದ ಆಧ್ಯಾತ್ಮಿಕಅನುಭವವನ್ನು ಪಡೆಯುವುದು ಬಹುಕಠಿಣ. ಮೇಲಿನಿಂದ ಕೆಳಕ್ಕೆ ಉರುಳುವುದು ಹೇಗೆ ಸುಲಭವೋ ಹಾಗೆ ಇಂದ್ರಿಯಪರವಶರಾಗಿ ಆ ಮೂಲಕ ಸುಖವನ್ನು ಪಡೆಯುವದು ಅತಿಸುಲಭ. ಆದರೆ ಇಂದ್ರಿಯ ನಿಗ್ರಹವನ್ನುಮಾಡಿ ತನ್ಮೂಲಕ ಈಶ್ವರ ಸಾಕ್ಷಾತ್ಕಾರ ಮಾಡಿಕೊಳ್ಳುವುದು ಕಡಿದಾದ ಬೆಟ್ಟವನ್ನು ಏರುವಂತೆ ಬಹುಕಷ್ಟ ಸಾಧ್ಯವಾದ ಕೆಲಸ. ಆದರೆ ಇದು ಅಸಾಧ್ಯವಲ್ಲವೆಂದೂ ಪ್ರಯತ್ನಮಾಡಿದರೆ ಸಾಧ್ಯವೆಂದೂ ಅನಾದಿಕಾಲದಿಂದ ಈಗಿನ ವರೆಗೂ ಅವತಾರಮಾಡಿದ ಮಹಾಪುರುಷರು ತಮ್ಮ ಜೀವನ ಚರಿತ್ರೆಯಿಂದ ಬೋಧಿಸಿದ್ದಾರೆ. ವೇದಕಾಲದಲ್ಲಿ ಹೀಗೆ ಈಶ್ವರ ಸಾಕ್ಷಾತ್ಕಾರ ಮಾಡಿಕೊಂಡವರನ್ನು ಋಷಿಗಳೆಂದು ಕರೆಯುತ್ತಿದ್ದರು. ಅವರ ಮಾತೇ ವೇದಗಳು; ಅವರ ಅನುಭವವೇ ಉಪನಿಷತ್ತು; ಅವರು ವಿಧಿಸಿದ ವಿಧಿಗಳೇ ಶಾಸ್ತ್ರ. ಇವರಿಗೆ 'ಆಪ್ತ' ರೆಂದು ಹೆಸರು. ಇಂಥ 'ಆಪ್ತವಾಕ್ಯ' ವೇ ಆಧ್ಯಾತ್ಮಿಕ ವಿಚಾರಗಳಲ್ಲಿ ಪ್ರಮಾಣ. 'ಆಪ್ತ' ರೆಂದರೆ ಪಡೆದವರೆಂದರ್ಥ. ಇಂಥವರೇ ಪ್ರಪಂಚದ ತತ್ವವನ್ನು ಸ್ವಾನುಭವದಿಂದ ತಿಳಿದುಕೊಂಡವರಾದ್ದರಿಂದ ಆಧ್ಯಾತ್ಮಿಕ ಧರ್ಮಕ್ಕೆ ಮೂಲಾಧಾರ. ಅಂಥವರನ್ನೇ ಷಡ್ದರ್ಶನ ಕಾಲದಲ್ಲಿ ಅಧಿಕಾರಿಕ ಪುರುಷರು, ಪ್ರಕೃತಿಲೀನರು, ಈಶ್ವರಕೋಟಿಗಳೆಂದು ಮುಂತಾಗಿ ಕರೆಯುತ್ತಿದ್ದರು. ಅದಾದ ಮೇಲೆ ಪುರಾಣಗಳ ಕಾಲದಲ್ಲಿ ಅಂಥವರನ್ನು ಅವತಾರ ಪುರುಷರೆಂದು ಕರೆಯುತ್ತಿದ್ದರು. ಇಂಥ ಮಹಾ ಪುರುಷರು ಧರ್ಮಕ್ಷೇತ್ರವಾದ ಈ ಭರತ ಖಂಡದಲ್ಲಿ ಪುನಃಪುನಃ ಜನ್ಮ

ಗ್ರಹಣಮಾಡಿ ಈಶ್ವರ ಸಾಕ್ಷಾತ್ಕಾರವೇ ಮನುಷ್ಯನಿಗೆ ಮುಖ್ಯಲಕ್ಷ್ಯ ವಾಗಿರಬೇಕೆಂದೂ ಇದು ಪ್ರತಿಯೊಬ್ಬನಿಗೂ ಸಾಧ್ಯವೆಂದೂ ತೋರಿಸಿ ಈ ಲಕ್ಷ್ಯವೂ ತಪ್ಪದಂತೆ ಕಾಪಾಡಿಕೊಂಡು ಬಂದಿದ್ದಾರೆ.

ಎಂಥ ಸರ್ವೋತ್ತಮವಾದ ವಸ್ತುವಾದರೂ ಕಾಲಕ್ರಮದಲ್ಲಿ ಬದಲಾವಣೆಯನ್ನು ಹೊಂದಿ ಕೆಟ್ಟುಹೋಗುವುದು. ತಳತಳನೆ ಹೊಳೆಯುವ ಬೆಳ್ಳಿಬಂಗಾರಗಳಾದರೂ ಬಹಳಕಾಲ ಹಾಗೇಬಿಟ್ಟರೆ ಮಲಿನವಾಗುವುವು. ಅಂಥದರಲ್ಲಿ ಕೋಳಕಾಗುವುದಕ್ಕೆ ಪ್ರಬಲ ವಾದ ಇತರ ಕಾರಣಗಳಿದ್ದರಂತೂ ಹೇಳಬೇಕಾಗಿಯೇ ಇಲ್ಲ. ಧರ್ಮದ ಸ್ಥಿತಿಯೂ ಹೀಗೆಯೇ. ಮಾಲಿನ್ಯಕ್ಕೆ ಇತರ ಯಾವ ಕಾರಣವಿಲ್ಲ ದಿದ್ದರೂ ಕಾಲಕ್ರಮದಲ್ಲಿ ಜನರು ಧರ್ಮದ ಸಾರವನ್ನು ಮರೆತು ಮುಖ್ಯವಾದದ್ದನ್ನು ತಾತ್ಸಾರಮಾಡಿ ಗೌಣವಾದದ್ದನ್ನೇ ಮುಖ್ಯವಾಗಿ ಮಾಡಿಕೊಂಡು, ಮೌಢ್ಯದಲ್ಲಿ ಮುಳುಗಿ ಹೋಗುವರು. ಅದರಿಂದ ಧರ್ಮಗ್ಲಾನಿಯೂ ಅಧರ್ಮದ ಅಭ್ಯುತ್ಥಾನವೂ ಉಂಟಾಗುವುವು. ಜನರಿಗೆ ನಾನಾವಿಧದಲ್ಲಿ ಮೋಸವಾಗಿ ಎಲ್ಲೆಲ್ಲಿಯೂ ಅಶಾಂತಿಯೂ ಹಾಹಾಕಾರವೂ ಹುಟ್ಟುವುವು. ಆಗ ಈಶ್ವರನು ಅವತಾರಮಾಡಿ ಧರ್ಮಸಂಸ್ಥಾಪನೆಮಾಡಿ ಶಾಂತಿಯನ್ನು ನೆಲೆಗೊಳಿಸುವನು. ಆದರೆ ಕಾರಣವಿಲ್ಲದೆ ಕಾರ್ಯವಿರುವುದಿಲ್ಲ. ಅವತಾರಕ್ಕೆ ಆವಶ್ಯಕತೆ ಇಲ್ಲ ದಿದ್ದರೆ ಪರಮಾತ್ಮನೆಂದಿಗೂ ಅವತಾರಮಾಡುವುದಿಲ್ಲ. ಆವಶ್ಯಕತೆ ಇದ್ದರೆ ಎಂದಿಗೂ ಕಣ್ಣುಮುಚ್ಚಿಕೊಂಡು ಸುಮ್ಮನೆ ಇರುವುದಿಲ್ಲ. ಶ್ರೀಕೃಷ್ಣ, ಬುದ್ಧ, ಶಂಕರಾಚಾರ್ಯ ಮುಂತಾದವರು ಜನಿಸಿದ ಸಂದರ್ಭಗಳನ್ನೂ ಅವರ ಚರಿತ್ರೆಯನ್ನೂ ನೋಡಿದರೆ ಇದು ವಿಶದ ವಾಗುವುದು.

ಮೇಲೆ ಹೇಳಿದ ಮೌಢ್ಯಕ್ಕೆ ನಮ್ಮ ಈಗಿನ ಸ್ಥಿತಿಯಿಂದ ಬೇಕಾದಷ್ಟು ಉದಾಹರಣೆಗಳನ್ನು ಕೊಡಬಹುದು. ನಮಗೆ ಈಗ ಸಂಧ್ಯಾವಂದನೆಯು ನಿರರ್ಥಕವಾದ, ಉಚ್ಚಾರವನ್ನು ಮಾಡ ಲಾರದ, ಹಿರಿಯರು ಹೊರೆಸಿದ ಒಂದು ಭಾರವಾಗಿದೆ. ಅವರ

ಅರ್ಥವಾಗಲಿ ಉದ್ದೇಶವಾಗಲಿ ಏನು ಎಂಬುದೇ ಮರೆತು ಹೋಗಿದೆ. ಪ್ರಾಣಾಯಾಮವು ಮೂರು ಬೆಟ್ಟುಗಳಿಂದ ಮೂಗಿನ ತುದಿಯನ್ನು ಹಿಡಿಯುವುದರಲ್ಲಿ ಪರಿಣಮಿಸಿದೆ. ದೇವರ ಪೂಜೆಯು ಮನೆ ತುಂಬ ಮೂರ್ತಿಗಳನ್ನು ಇಟ್ಟುಕೊಂಡು ಅವುಗಳ ಮೇಲೆ ಕಾಟಾಚಾರಕ್ಕೆ ಹೂವು ತಂದು ಹಾಕುವುದರಲ್ಲಿ ಪರಿಣಮಿಸಿದೆ. ಇತ್ಯಾದಿ. ಹೀಗಿರಲು, ಕಾಲಕ್ರಮೇಣ ಸೇರಿದ ಕೊಳೆಯ ಮೇಲೆ ಮಳೆ ಸುರಿಯಿತು. ಆಗಲೋ ಈಗಲೋ ಬಿದ್ದುಹೋಗುವಂತಿರುವ ಮನೆಯ ಮೇಲೆ ಬಿರುಗಾಳಿ ಬೀಸಿದಂತೆ ನಮ್ಮ ಪುರಾತನ ಧರ್ಮ ಗೃಹದ ಮೇಲೆ ಇಂಗ್ಲಿಷರ ಜೊತೆಯಲ್ಲಿ ಪಾಶ್ಚಿಮಾತ್ಯ ನಾಗರಿಕತೆ ಯೆಂಬ ಬಿರುಗಾಳಿ ಬೀಸಿ ಅದನ್ನು ಬುಡಮುಟ್ಟ ಅಲ್ಲಾಡಿಸಿ ಬಿಟ್ಟಿತು.

ಇದಕ್ಕೆ ಕಾರಣವೇನು ? ಬೇರೆ ಬೇರೆ ಸ್ವಭಾವವೂ ಲಕ್ಷ್ಯವೂ ಉಳ್ಳ ಎರಡು ಜನರು ಸೇರಿದರೆ ಆಗುವುದು ಹೀಗೆತಾನೆ. ಹಾಲಿಗೆ ಹುಳಿ ಬಿದ್ದರೆ ಅದು ಒಡೆಯುವುದು ಏನಾಶ್ಚರ್ಯ? ನಮ್ಮವರಿಗೆ ಧರ್ಮವೂ ಪರಲೋಕವೂ ಮುಖ್ಯಲಕ್ಷ್ಯ. ಪಾಶ್ಚಿಮಾತ್ಯರಿಗೆ ಐಹಿಕಸುಖವೇ ಮುಖ್ಯಲಕ್ಷ್ಯ. ಇದಕ್ಕೆ ಅವರ ಸ್ಥಿತಿಸ್ವಭಾವಗಳೂ ಭೌತಿಕ ಮುಂತಾದ ಶಾಸ್ತ್ರಗಳೂ ಸಹಕಾರಿಗಳಾದುವು. ಇದರಿಂದ ಅವರು ಸ್ಥಲಜಲಾಂತರಿಕ್ಷಗಳಲ್ಲಿ ನಿರಾಯಾಸವಾಗಿ ಸಂಚಾರ ಮಾಡಬಲ್ಲವರಾದರು. ಅಗ್ನಿಪರ್ವತಗಳೂ ಸೂರ್ಯ ಚಂದ್ರರೂ ಗ್ರಹನಕ್ಷತ್ರಗಳೂ ತಮ್ಮ ಗುಟ್ಟನ್ನು ಬಿಟ್ಟುಕೊಟ್ಟುವು. ಅವರು ತಮ್ಮ ವಾಸಕ್ಕಾಗಿ ಇಹಲೋಕದಲ್ಲಿಯೇ ಇಂದ್ರಭವನಗಳನ್ನು ಕಲ್ಪಿಸಿಕೊಂಡರು. ವಿಸ್ತಾರವಾದ ರಾಜ್ಯವನ್ನು ಕಟ್ಟಿದರು. ಅಪಾರವಾದ ಸಂಪತ್ತನ್ನು ಪಡೆದರು. ಆದರೆ ಈ ಸುಖಸಾಧನಗಳಿಂದಲೇ ಅತೃಪ್ತಿಯೂ ಅಶಾಂತತೆಯೂ ಹೆಚ್ಚಿದುವು. ಆತ್ಮ, ಈಶ್ವರ, ಮುಕ್ತಿ ಮುಂತಾದ ವಿಷಯಗಳು ಭ್ರಮೆ ಯೆನ್ನುವ ಹಾಗಾಯಿತು. ಪಾಶ್ಚಿಮಾತ್ಯನು ಬಹಿರ್ಮುಖನಾಗಿ ನಾಸ್ತಿಕನೂ ಜಡವಾದಿಯೂ ಆದನು. ಅವನಿಗೆ ಇಹಲೋಕ ಭೋಗವೇ ಭೋಗವಾಯಿತು.

ಬಾಹ್ಯಜ್ಞಾನಕ್ಕೆಲ್ಲಾ ಇದೊಂದೇ ಉಪಯೋಗವಾಯಿತು. ದಾಂಭಿಕ ತನ, ಸ್ವಾರ್ಥ, ದುರಾಶೆ ಇವೇ ಇವರ ಫಲವಾದುವು. ನಾವು ಪಾಶ್ಚಿಮಾತ್ಯರೊಡನೆ ಬೆರೆತಂದಿನಿಂದ ಅವರ ಐಶ್ವರ್ಯವನ್ನೂ ಐಹಿಕ ಭೋಗಸಾಧನಗಳನ್ನೂ ಮೆಚ್ಚುತ್ತ ಬಂದೆವು. ಇಂದ್ರಿಯಾತೀತ ವಾದ ಆಧ್ಯಾತ್ಮಿಕ ವಿಚಾರವನ್ನು ಆಗಲೇ ಮರೆಯುತ್ತ ಬಂದಿದ್ದರಿಂದ ವಿಜ್ಞಾನ ಶಾಸ್ತ್ರವೇ ಶಾಸ್ತ್ರವೆಂದೂ, ಇಂದ್ರಿಯ ಸುಖವೇ ಸುಖ ವೆಂದೂ ಭ್ರಮೆಯುಂಟಾಯಿತು. ಯಾವಾಗಲೂ ಪಾಶ್ಚಿಮಾತ್ಯ ರನ್ನು ನೋಡಿ ಬೆರಗಾಗುತ್ತಿದ್ದದ್ದರಿಂದ ಅವರ ಭೌತಿಕ ಶಾಸ್ತ್ರವು ಆಧ್ಯಾತ್ಮಿಕ ವಿಚಾರಗಳಲ್ಲಿ ಪ್ರಮಾಣವಾಗಲಾರದೆಂಬುದನ್ನೂ, ಸಾವಿರಾರು ವರ್ಷಗಳಕಾಲ ಸಂಸಾರತ್ಯಾಗಮಾಡಿ ಪರಮಾತ್ಮ ಧ್ಯಾನದಲ್ಲಿ ನಿರತರಾಗಿದ್ದು ಜ್ಞಾನಸಂಪಾದನೆ ಮಾಡಿದ ಋಷಿ ಗಳೇ ಪ್ರಮಾಣ ವೆಂಬುವನ್ನೂ ನಾವು ನಂಬಲಾರದೇ ಹೋದೆವು. ವಿಜ್ಞಾನಬಲದಿಂದ ಪಂಚ ಭೂತಗಳನ್ನು ವಶಮಾಡಿಕೊಂಡು ಇಷ್ಟು ಸಾಮರ್ಥ್ಯವನ್ನೂ ಸಂಪತ್ತನ್ನೂ ಪಡೆದಿರುವ ಪಾಶ್ಚಿಮಾ ತ್ಯರು "ಧರ್ಮವೆಂಬುದು ವೈದಿಕರೂ ಪುರೋಹಿತರೂ ತಮ್ಮ ಹೊಟ್ಟೆ ತುಂಬಿಕೊಳ್ಳುವುದಕ್ಕಾಗಿ ಮಾಡಿದ ಒಂದು ಕಟ್ಟು. ಪರಲೋಕ, ಪರಬ್ರಹ್ಮ, ಪರಮಾತ್ಮ ಇವೆಲ್ಲಾ ಒಂದು ದೊಡ್ಡ ಕಪಿಕಲ್ಪನೆ. ಎಷ್ಟು ಐಶ್ವರ್ಯವನ್ನು ಸಂಪಾದಿಸಿದರೂ ಹುಟ್ಟಿದಂದಿ ನಿಂದ ಸಾಯುವವರೆಗೂ ಕೀಳುಜಾತಿಯವರು ಕೀಳುಜಾತಿ ಯಲ್ಲಿಯೇ ಇರುವುದೆಂದರೆ ಯಾವನ್ಯಾಯ? " ಎಂದು ಮುಂತಾಗಿ ಹೇಳಿದ್ದರಿಂದ ಅದೇ ವೇದವಾಕ್ಯವಾಯಿತು. ನಾವು ಅವರ ಉಪದೇಶವನ್ನು ಸ್ವೀಕರಿಸಿ ಅವರು ಹೇಳಿಕೊಟ್ಟ ಮಂತ್ರವನ್ನೇ ಜಪಿಸುತ್ತಾ, ಅವರು ತೋರಿಸಿದ ದಾರಿಯನ್ನೇ ಹಿಡಿದೆವು. ಅದಕ್ಕೆ ಫಲವಾಗಿ ಅವರಂತೆ ನಾವೂ ಸ್ವಲ್ಪ ಐಹಿಕ ಭೋಗದ ರುಚಿಯನ್ನು ನೋಡಿದೆವು. ಜೊತೆಯಲ್ಲಿಯೇ ಅವರಂತೆ ಸ್ವಾರ್ಥ ಪರತೆ ಧರ್ಮದಲ್ಲಿ ಅಪನಂಬುಗೆ, ಅತೃಪ್ತಿ, ಅಶಾಂತತೆ ಇವು ಗಳನ್ನು ಯಥೇಚ್ಛವಾಗಿ ಸಂಪಾದನೆ ಮಾಡಿಕೊಂಡೆವು.

ಪ್ರಾಚೀನಕಾಲದಲ್ಲಿ ನಮ್ಮ ಜೀವನವು ಧರ್ಮದ ಆಧಾರದ ಮೇಲೆ ಬೆಳೆದಿದ್ದದ್ದರಿಂದ ಆಗಿನ ನಾಗರಿಕತೆಯು ಈಗಿನ ನವನಾಗರಿಕತೆಗೆ ಪೂರ್ತಿಯಾಗಿ ವಿರೋಧವಾಗಿತ್ತು. ಸಂಯಮವೇ ಮೂಲಮಂತ್ರ, ವೈರಾಗ್ಯಕ್ಕೋಸ್ಕರ ಸುಖ, ತ್ಯಾಗಕ್ಕೋಸ್ಕರ ಭೋಗ, ಪರಕ್ಕೋಸ್ಕರ ಇಹ. ಈಶ್ವರ ಸಾಕ್ಷಾತ್ಕಾರವೇ ಮುಖ್ಯೋದ್ದೇಶ್ಯ, ಹೀಗಿದ್ದದ್ದರಿಂದ ನಮ್ಮವರು ಉನ್ನತೋನ್ನತವಾದ ಲಕ್ಷ್ಯವನ್ನು ಸಾಧಿಸುತ್ತಿದ್ದರು. ವರ್ಣಜಾತಿ ವಿಭಾಗಗಳಿದ್ದರೂ ಯಾವ ವಿಧವಾದ ಅಸಮಾಧಾನವೂ ಇರಲಿಲ್ಲ. ಸಮಾಜದ ಯಾವಶ್ರೇಣಿಯಲ್ಲಿದ್ದರೂ, ಯಾವಜಾತಿಯಲ್ಲಿ ಹುಟ್ಟಿದ್ದರೂ ನಿಷ್ಕಾಮಕರ್ಮವನ್ನು ಮಾಡಿದರೆ ಮೋಕ್ಷವನ್ನು ಪಡೆಯುವನೆಂದೂ ಅದೇ ಮುಖ್ಯವೆಂದೂ ಐಹಿಕ ಭೋಗವು ತುಚ್ಛವೆಂದೂ ಎಲ್ಲರೂ ನಂಬಿದ್ದರು. ಹೀಗಿದ್ದರೆ ಅಸಮಾಧಾನ ಹೇಗೆಬಂದೀತು? ಅಲ್ಲದೆ, ಹಿಂದಿನ ಕಾಲದಲ್ಲಿ ಹಿಮಾಚಲದಿಂದ ರಾಮೇಶ್ವರದ ವರೆಗೂ ಭರತ ಖಂಡವೆಲ್ಲವೂ ಒಂದೇ ಧರ್ಮಸೂತ್ರದಿಂದ ಕಟ್ಟಲ್ಪಟ್ಟಿತ್ತು. ಎಲ್ಲಿರಲ್ಲಿಯೂ ದೈವಭಕ್ತಿ, ವೇದ, ರಾಮಾಯಣ ಮಹಾಭಾರತ ಮುಂತಾದ ಧರ್ಮಗ್ರಂಥಗಳಲ್ಲಿ ಪೂರ್ಣವಾದ ನಂಬುಗೆ, ಗೀತಾ, ಗಂಗಾ, ಗಾಯತ್ರೀ ಇವುಗಳಲ್ಲಿ ಶ್ರದ್ಧಾಭಕ್ತಿ, ತೀರ್ಥಯಾತ್ರೆಗಳಲ್ಲಿ ವಿಶ್ವಾಸ ಇವುಗಳೆಲ್ಲವೂ ಒಂದೇಯಾಗಿದ್ದುವು. ಆದ್ದರಿಂದ ಜನಗಳಲ್ಲಿ ಒಂದು ವಿಧವಾದ ಐಕಮತ್ಯವೂ ಪರಸ್ಪರ ವಾತ್ಸಲ್ಯವೂ ಇದ್ದುವು. ಧರ್ಮವೇ ಅವರ ಜೀವನವಾಗಿತ್ತು.

ಪಾಶ್ಚಿಮಾತ್ಯರ ಪ್ರಾಬಲ್ಯದಿಂದ ಐಹಿಕ ಸುಖಕ್ಕೆ ಪ್ರಾಶಸ್ತ್ಯ ಉಂಟಾಯಿತು. ಐಶ್ವರ್ಯವಂತನನ್ನು ಬಡವನು ನೋಡಿ ಅಸೂಯೆ ಪಡುವಂತಾಯಿತು. ವರ್ಣ ಜಾತಿ ಭೇದಗಳಿಂದ ಅತೃಪ್ತಿಯು ಹೆಚ್ಚಿತು. ಇಂದ್ರಿಯ ಸುಖವು ತಾನೇ ತಾನಾಗಿ ಸಂಯಮವನ್ನು ಓಡಿಸಿ ಬಿಟ್ಟಿತು. ಹಿಂದಿನ ಶಿಕ್ಷಾಫಲವೆಲ್ಲಾ ಹೋಗಿ ನಾಸ್ತಿಕ್ಯವುಂಟಾಯಿತು. ಆವಶ್ಯಕತೆ ಇರಲಿ, ಇಲ್ಲದಿರಲಿ, ನಾವು ಮೂಗ

ಜಂತುಗಳಂತೆ ಪಾಶ್ಚಿಮಾತ್ಯರನ್ನು ಅನುಸರಿಸುತ್ತ ಬಂದೆವು. ಇದರಿಂದ ಪ್ರತಿಯೊಂದಕ್ಕೂ ಅವರನ್ನೇ ನೆಚ್ಚಿಕೊಳ್ಳಬೇಕಾಯಿತು. ಭಾರತೀಯರು ಯೋಗಭೋಗಭ್ರಷ್ಟರಾಗಿ ನಾವಿಕನಿಲ್ಲದ ನಾವೆಯಂತೆ ಐಹಿಕಾಮುಷ್ಮಿಕಗಳೆರಡರಲ್ಲಿಯೂ ಕೇವಲ ಅಸಹಾಯರಾದರು.

ಈ ಸಮಯದಲ್ಲಿಯೇ ಪಾದ್ರಿಗಳು ಬಂದು ನಮ್ಮ ಕೊಟ್ಯನುಕೋಟಿ ದೇವತೆಗಳೂ ವಿಗ್ರಹಾರಾಧನೆಯೂ ಅಸಂಖ್ಯಾತವಾದ ಜಾತಿ ಭೇದಗಳೂ ಅನರ್ಥಕಾರಿಗಳೆಂದೂ ಇವೆಲ್ಲಾ ಹಾಳಾದರೆ ಈ ಅರ್ಧಬರ್ಬರ (half-barbarous) ಭಾರತ ದೇಶವು ನಾಗರಿಕತೆಯನ್ನು ಪಡೆದು ಉದ್ಧಾರವಾದೀತೆಂದೂ ಉದ್ಘೋಷಿಸುತ್ತಾ ಬಂದರು. ಅಲ್ಲಲ್ಲೇ ಸಮಾಜಗಳನ್ನೂ ಸಭೆಗಳನ್ನೂ ಏರ್ಪಾಡುಮಾಡಿ ಸ್ತ್ರೀ ಸ್ವಾತಂತ್ರ್ಯ ವಿಧವಾವಿವಾಹ ಮುಂತಾದ ಸಮಾಜ ಸಂಸ್ಕಾರಗಳನ್ನು ಪ್ರಚಾರಕ್ಕೆ ತಂದು ನಿರ್ಜೀವವಾದ ಭರತ ಖಂಡಕ್ಕೆ ಜೀವವನ್ನು ತುಂಬುತ್ತೇವೆಂದು ತಿಳಿದುಕೊಂಡರು. ಆದರೆ ರೋಗಿಯ ರೋಗವನ್ನು ಪರೀಕ್ಷೆ ಮಾಡದೆ ಔಷಧಿಯನ್ನು ಕೊಟ್ಟರೆ ರೋಗ ಗುಣವಾಗುವುದು ಹೇಗೆ? ಹೋಗುತ್ತಿದ್ದ ಜೀವವು ಪುನಃ ಬರುವುದು ಹೇಗೆ? ಜಡವಾದಿಗಳಾದ ಪಾಶ್ಚಿಮಾತ್ಯರು ಈ ರೋಗವನ್ನು ಹೇಗೆತಾನೇ ಗುರುತಿಸ ಬಲ್ಲರು? ಧರ್ಮವೇ ಭಾರತದ ಜೀವ. ಆ ಜೀವವನ್ನು ಪೋಷಿಸದಿದ್ದರೆ ಅದುಹೇಗೆ ಉದ್ಧಾರವಾದೀತು? ನಾಸ್ತಿಕ ಪಾಶ್ಚಾತ್ಯರಿಂದ ಧರ್ಮಗ್ಲಾನಿ ಹೇಗೆ ಗುಣವಾದೀತು? ಧರ್ಮಗ್ಲಾನಿಯು ಪಶ್ಚಿಮದಿಂದ ಪ್ರವಹಿಸಿ ಎಲ್ಲೆಲ್ಲಿಯೂ ಹರಡಿ ಹೋಯಿತು. ಜನರು ಐಹಿಕ ಸುಖವೆಂಬ ಬಿಸಿಲ್ಗುದುರೆಯನ್ನು ಬೆನ್ನು ಹತ್ತಿ ಬಳಲಿ ಬೇಸತ್ತು ಹೋದರು. ಈ ನಮ್ಮ ವೇದನೆಯನ್ನೂ ಅಶಾಂತಿಯನ್ನೂ ನಮ್ಮ ಸಮಕ್ಕೆ ಅನುಭವಿಸಿ ಮರುಕಪಟ್ಟು, ಸರಿಯಾದ ಧರ್ಮವನ್ನು ಬೋಧಿಸ ಬಲ್ಲ ಮಹಾನುಭಾವನಾವನು? ಪಾಶ್ಚಿಮಾತ್ಯರ ಸಂಯೋಗ

ದಿಂದ ಬಂದ ಭಯಂಕರವಾದ ಧರ್ಮಗ್ಲಾನಿಯನ್ನು ನಿಗ್ರಹ
ಮಾಡಿ ಶಾಂತಿಯನ್ನು ನೆಲೆಗೊಳಿಸುವರಾರು? ಈ ದುಸ್ಥಿತಿಯು
ಆ ಕರುಣಾಸಾಗರನಾದ ಭಗವಂತನ ಕಣ್ಣಿಗೆ ಬೀಳಲಾರದೇ? ಅವ
ನನ್ನು ಬಿಟ್ಟರೆ ಇದು ಮತ್ತಾರಿಂದ ತಾನೇ ಸಾಧ್ಯ? ಆಯಾ
ಕಾಲಕ್ಕೆ ತಕ್ಕಂತೆ ಮನುಷ್ಯರೂಪದಿಂದ ಅವತಾರಮಾಡಿ ಗೋಳಾ
ಡುತ್ತಿರುವ ಪ್ರಾಣಿಗಳನ್ನು ಕೈ ಹಿಡಿದು ಮೇಲಕ್ಕೆತ್ತಿ ಉದ್ಧಾರ
ಮಾಡುವನು ಭಗವಂತನಲ್ಲವೇ! ಇಲ್ಲದಿದ್ದರೆ ಶ್ರೀ ಕೃಷ್ಣನು "ಯದಾ
ಯದಾಹಿ ಧರ್ಮಸ್ಯ ಗ್ಲಾನಿರ್ಭವತಿ ಭಾರತ। ಅಭ್ಯುತ್ಥಾನಮ
ಧರ್ಮಸ್ಯ ತದಾತ್ಮಾನಂ ಸೃಜಾಮ್ಯಹಂ" ಎಂದು ಹೇಳಿರುವ
ಮಾತುಸುಳ್ಳೇ? ಭಗವದ್ವಾಕ್ಯವು ಎಂದಿಗೂ ಸುಳ್ಳಾಗದು. ಅದ
ರಂತೆ ಈಗಲೂ ಭಾರತೀಯಧರ್ಮವು ಸಂಪೂರ್ಣವಾಗಿ ಗ್ಲಾನಿ
ಹೊಂದಲು ಮೊದಲು ಮಾಡಿದೊಡನೆಯೇ ಈಶ್ವರನು ಧರ್ಮೋ
ದ್ಧಾರಕ್ಕಾಗಿ ಯಾವಪುಣ್ಯ ಪುರುಷನಾಗಿ ಅವತರಿಸಿದನೋ ಆ
ಮಹಾತ್ಮನ ಪವಿತ್ರ ಚರಿತ್ರೆಯನ್ನು ಭಕ್ತಿಯಿಂದ ಓದೋಣ.

---

# ಮೊದಲನೆಯ ಅಧ್ಯಾಯ.

## ರಾಮಕೃಷ್ಣ ಪರಮಹಂಸರ ತಾಯಿತಂದೆಗಳು.

ಬಂಗಾಳಾದೇಶದ ಬರ್ದವಾನ್ ಡಿಸ್ಟ್ರಿಕ್ಟಿಗೆ ಸೇರಿದ 'ದೇರೆ' ಎಂಬ ಗ್ರಾಮದಲ್ಲಿ ಸುಮಾರು ನೂರೈವತ್ತು ವರ್ಷಗಳಹಿಂದೆ ಮಾಣಿಕರಾಮಚಟ್ಟೋಪಾಧ್ಯಾಯನೆಂಬ ಒಬ್ಬವೈದಿಕ ಬ್ರಾಹ್ಮಣನಿದ್ದನು. ಆತನಿಗೆ ಖುಧಿರಾಮ, ನಿಧಿರಾಮ, ಕನ್ಹೈರಾಮ ಎಂಬ ಮೂರುಜನ ಗಂಡುಮಕ್ಕಳೂ, ರಾಮಶೀಲಾ ಎಂಬ ಒಬ್ಬಹೆಣ್ಣು ಮಗಳೂ ಇದ್ದರು. ಹಿರಿಯಮಗನಾದ ಖುದಿರಾಮನು ಕ್ರಿ. ಶ. ೧೭೭೫ ರಲ್ಲಿ ಹುಟ್ಟಿದನು. ಆತನು ಜೀವನೋಪಾಯಕ್ಕೆ ಅನುಕೂಲವಾದ ಯಾವುದಾದರೂ ಲೌಕಿಕವಿದ್ಯೆಯನ್ನು ಕಲಿತಿದ್ದನೋ ಇಲ್ಲವೋ ತಿಳಿಯದು. ಆದರೆ ಶಾಸ್ತ್ರದಲ್ಲಿ ಸದ್ಬ್ರಾಹ್ಮಣರಿಗೆ ಸ್ವಭಾವಸಿದ್ಧವಾಗಿ ಇರಬೇಕೆಂದು ಹೇಳಿರುವ ಸತ್ಯನಿಷ್ಠೆ, ತೃಪ್ತಿ, ತಾಳ್ಮೆ, ವೈರಾಗ್ಯ ಮುಂತಾದ ಗುಣಗಳನ್ನು ವಿಧಾತನು ಆತನಿಗೆ ಯಥೇಚ್ಛವಾಗಿ ಕೊಟ್ಟಿದ್ದನು. ಪ್ರತಿನಿತ್ಯವೂ ಸಂಧ್ಯಾವಂದನಾದಿ ನಿತ್ಯಕರ್ಮಗಳನ್ನು ಮುಗಿಸಿಕೊಂಡು ಮನೆದೇವರಾದ ಶ್ರೀರಾಮಚಂದ್ರನನ್ನು ಭಕ್ತಿಪೂರ್ವಕವಾಗಿ ಪೂಜೆಮಾಡಿದಹೊರತು ಒಂದು ತೊಟ್ಟು ನೀರನ್ನುಸಹ ಕುಡಿಯುತ್ತಿರಲಿಲ್ಲ. ಶೂದ್ರರ ಮನೆಯಲ್ಲಿ ದಾನವನ್ನು ತೆಗೆದುಕೊಳ್ಳುತ್ತಿರಲಿಲ್ಲ. ಶೂದ್ರರ ಮನೆಯಲ್ಲಿ ಪೌರೋಹಿತ್ಯ, ಪೂಜೆಮುಂತಾದದ್ದನ್ನು ಮಾಡಿಸುತ್ತಿದ್ದ ಬ್ರಾಹ್ಮಣರ ಮನೆಗೆ ಊಟ ಉಪಚಾರಗಳಿಗೆ ಹೋಗುತ್ತಿರಲಿಲ್ಲ. ಈ ವಿಧವಾದ ನಿಷ್ಠೆ ಮತ್ತು ಸದಾಚಾರವನ್ನು ನೋಡಿ ಆಗ್ರಾಮದವರೆಲ್ಲರೂ ಅವನಲ್ಲಿ ವಿಶೇಷ ಭಕ್ತಿಯನ್ನೂ ಗೌರವವನ್ನೂ ಇಟ್ಟುಕೊಂಡಿದ್ದರು.

ತಂದೆಯ ಮರಣಾನಂತರ ಸಂಸಾರದ ಭಾರವೆಲ್ಲ ಖುದಿರಾಮನಮೇಲೆ ಬಿತ್ತು. ಆತನು ಧರ್ಮಮಾರ್ಗವನ್ನು ಬಿಡದೆ ಸಾಧ್ಯವಾದ ಮಟ್ಟಿಗೆ ಸಂಸಾರವನ್ನು ಅನುಕೂಲವಾದ ರೀತಿಯಲ್ಲಿ ನಡೆಸಿಕೊಂಡು ಹೋಗುತ್ತಿದ್ದನು. ಇದಕ್ಕೆ ಮುಂಚೆಯೇ ಆತನಿಗೆ ಮದುವೆಯಾಗಿ ಹೆಂಡತಿ ತೀರಿಹೋಗಿದ್ದಳು. ಕ್ರಿ. ಶ. ೧೭೯೯ ರಲ್ಲಿ ಮತ್ತೆ ಮದುವೆಯಾಯಿತು. ಆಗ ಆತನಿಗೆ ಸುಮಾರು ೨೫ ವರ್ಷ. ಈ ಎರಡನೆಯ ಹೆಂಡತಿಯಾದ ಶ್ರೀಮತೀ ಚಂದ್ರಾದೇವಿಗೆ ಎಂಟು ವರ್ಷ. ಆಕೆಯು ಚಿಕ್ಕ ವಯಸ್ಸಿನಿಂದಲೂ ಸರಳಸ್ವಭಾವವುಳ್ಳವಳಾಗಿಯೂ ದೇವಬ್ರಾಹ್ಮಣರಲ್ಲಿ ಭಕ್ತಿಯುಳ್ಳವಳಾಗಿಯೂ ಪ್ರೇಮಮಯಿಯಾಗಿಯೂ ಇದ್ದಳು. ಆದ್ದರಿಂದ ಈಕೆಯನ್ನು ಕಂಡರೆ ಮನೆಯಲ್ಲಿ ಎಲ್ಲರಿಗೂ ಕೇವಲವಿಶ್ವಾಸ. ಹೀಗಿರಲು ಈಕೆಯ ಹೊಟ್ಟೆಯಲ್ಲಿ ೧೮೦೫ ರಲ್ಲಿ ರಾಮಕುಮಾರನೆಂಬೊಬ್ಬ ಮಗನೂ ೧೮೧೦ ರಲ್ಲಿ ಕಾತ್ಯಾಯನೀ ಎಂಬೊಬ್ಬ ಮಗಳೂ ಹುಟ್ಟಿದರು. ಹೀಗೆ ಸಂಸಾರವು ಹೆಚ್ಚಾದ್ದರಿಂದ ಖುದಿರಾಮನಿಗೆ ಜೀವನ ಮಾಡುವುದು ಕಷ್ಟವಾಗುತ್ತ ಬಂತು. ನಾಲದ್ದಕ್ಕೆ ಕಾತ್ಯಾಯನಿಯು ಹುಟ್ಟಿದ ಸ್ವಲ್ಪ ಕಾಲದಲ್ಲಿಯೇ ಅಕಸ್ಮಾತ್ತಾಗಿ ಆತನಿಗೆ ಇನ್ನೊಂದು ವಿಷಮಕಷ್ಟವು ಪ್ರಾಪ್ತವಾಯಿತು.

ಆವೂರಿನ ಜಮೀನುದಾರನಾದ ರಾಮಾನಂದರಾಯನು ಐಶ್ವರ್ಯಮತ್ತನಾಗಿ ತನಗಾಗದ ಜನರನ್ನೆಲ್ಲಾ ಕಿರುಕುಳಗುಟ್ಟಿಸುತ್ತಿದ್ದನು. ಇವನು ಒಂದುಕಾಲದಲ್ಲಿ ಯಾರಮೇಲೆಯೋ ಒಂದು ಸುಳ್ಳುದಾವಾಹಾಕಿ ಅದಕ್ಕೆ ಯೋಗ್ಯನಾದ ಸಾಕ್ಷಿ ಬೇಕಾಗಿದ್ದುದರಿಂದ ಖುದಿರಾಮನನ್ನು ಸಾಕ್ಷಿಯಾಗಿ ಕೋರಿದನು. ಪಾಪ! ಧರ್ಮಪರಾಯಣನಾದ ಖುದಿರಾಮನು ತನ್ನಸ್ವಭಾವಕ್ಕೆ ವಿರುದ್ಧವಾಗಿ ಸುಳ್ಳುಸಾಕ್ಷ್ಯವನ್ನು ಕೊಡುವುದೆಂದರೆ ಹೇಗೆ? ಹೇಳದೇ ಹೋದರೋ, ರಾಮಾನಂದರಾಯನು ಯಾವುದಾದರೂ ಒಂದು ನೆಪದಲ್ಲಿ ತನ್ನನ್ನು ನಿರ್ಮೂಲ ಮಾಡಿಬಿಡುವುದು ನಿಶ್ಚಯ. ಆದರೂ ಸತ್ಯಕ್ಕೆಹೆದರಿ

ಅವನಿಗೆ ವಿರೋಧವಾಗಿ ನಡೆಯಬೇಕಾಯಿತು. ತಾನು ಸುಳ್ಳುಸಾಕ್ಷಿ ಹೇಳಲಾರೆನೆಂದು ಕಂಠೋಕ್ತವಾಗಿ ಹೇಳಿಬಿಟ್ಟನು. ಇದರಿಂದ ಆತನಿಗೆ ಮಹಾಕೋಪ ಉಂಟಾಗಿ, ಸ್ವಲ್ಪದಿವಸದಲ್ಲಿಯೇ ಸುಳ್ಳು ಪತ್ರಗಳನ್ನು ಹುಟ್ಟಿಸಿ ಖುದಿರಾಮನಮೇಲೆ ದಾವಾಹಾಕಿ ಆತನ ಅಲ್ಪಸ್ವಲ್ಪ ಪಿತ್ರಾರ್ಜಿತ ಸ್ವತ್ತನ್ನೆಲ್ಲಾ ಅಪಹರಿಸಿಬಿಟ್ಟನು. ಖುದಿರಾಮನಿಗೆ ಡೇರೆಯಲ್ಲಿ ನಿಲ್ಲುವುದಕ್ಕೆ ಒಂದುಹೆಜ್ಜೆ ಜಾಗವೂ ಇಲ್ಲದಂತಾಯಿತು. ಈ ದುರ್ದಶೆಯನ್ನು ಕಂಡು ಊರಿನವರಿಗೆಲ್ಲಾ ಕನಿಕರ ಉಂಟಾದರೂ ರಾಮಾನಂದರಾಯನ ಮೇಲಿನ ಭಯದಿಂದ ಅವನಿಗೆ ಸಹಾಯಮಾಡಲು ಯಾರೂ ಮುಂದುವರಿಯಲಿಲ್ಲ. ಈಗ ಖುದಿರಾಮನಿಗೆ ೪೦ ವರ್ಷ. ಸಂಸಾರ ದೊಡ್ಡದು. ಅದರ ಮೇಲೆ ಬಡತನ. ಆದರೂ 'ರಾಮನೇಗತಿ' ಯೆಂದು ಹೇಗೋ ಕಾಲವನ್ನು ತಳ್ಳುತ್ತಿದ್ದನು. ಈಸಮಾಚಾರವು ಕೆಲವುದಿನಗಳಲ್ಲಿ, ಡೇರೆಗೆ ಸುಮಾರು ಎರಡುಮೈಲಿಯಲ್ಲಿದ್ದ ಕಾಮಾರಪುಕುರ ಗ್ರಾಮದ ಸುಖಲಾಲಗೋಸ್ವಾಮಿಯ ಕಿವಿಗೆಬಿತ್ತು. ಖುದಿರಾಮನಿಗೂ ಈತನಿಗೂ ಮೊದಲಿನಿಂದಲೂ ಸ್ನೇಹವಿದ್ದುದರಿಂದ ಈ ಕಷ್ಟಕಾಲದಲ್ಲಿ ಅವನನ್ನು ಬರಮಾಡಿಕೊಂಡು ತನ್ನಮನೆಯಲ್ಲಿಯೇ ಇರಲು ಸ್ವಲ್ಪಜಾಗವನ್ನು ಕೊಟ್ಟಿದ್ದಲ್ಲದೆ ಕೆಲವುದಿನಗಳಾದ ಮೇಲೆ ಸುಮಾರು ಅರ್ಧ ಎಕರೆ ಜಮೀನನ್ನೂ ಕೊಟ್ಟನು. ಇಲ್ಲಿಂದ ಮುಂದಕ್ಕೆ ಕಾಮಾರಪುಕುರವೇ ಖುದಿರಾಮನ ವಾಸಸ್ಥಾನವಾಯಿತು.

ಈ ಕಷ್ಟಾನುಭವದಿಂದ ಖುದಿರಾಮನಿಗೆ ಪ್ರಾಪಂಚಿಕ ಸುಖವು ಕ್ಷಣಿಕವೆಂಬುದು ಮನಸ್ಸಿಗೆತಟ್ಟಿ ವೈರಾಗ್ಯವು ಹೆಚ್ಚಿತು. ಶಾಂತಿ, ತೃಪ್ತಿ, ಈಶ್ವರ ನಿರ್ಭರತೆ ಇವು ಹೆಚ್ಚುತ್ತಾಹೋದುವು. ಅವನ ಮುಖದಲ್ಲಿ ಕಂಡುಬರುತ್ತಿದ್ದ ಒಂದುವಿಧವಾದ ತೇಜಸ್ಸನ್ನೂ ಶಾಂತಿಯನ್ನೂ ಗ್ರಾಮ ನಿವಾಸಿಗಳೆಲ್ಲರೂನೋಡಿ ಅವನನ್ನು ಋಷಿಯಂತೆ ಗೌರವದಿಂದಲೂ ಭಕ್ತಿಯಿಂದಲೂ ಕಾಣುತ್ತಿದ್ದರು. ಅವನನ್ನು

ನೋಡಿದಕೂಡಲೆ ತಮ್ಮ ಕಾಡುಹರಟೆಗಳನ್ನು ಬಿಟ್ಟು ಎದ್ದುನಿಂತು ಆವನೊಡನೆ ಮಾತನಾಡುತ್ತಿದ್ದರು ಆವನ ಆಶೀರ್ವಚನವು ನಿಶ್ಚಯ ವಾಗಿಯೂ ಫಲಕಾರಿಯಾಗುವದೆಂದು ನಂಬಿ ಸಂಪತ್ತಿನಲ್ಲಿಯೂ ವಿಪತ್ತಿನಲ್ಲಿಯೂ ಅವನ ಆಶೀರ್ವಾದವನ್ನು ಪಡೆಯಲು ಜನರು ಬಂದು ಹೋಗುತ್ತಲೇ ಇದ್ದರು. ಶ್ರೀಮತಿ ಚಂದ್ರಾದೇವಿಯಲ್ಲಿ ಯೂ ಜನರಿಗೆ ಇದೇವಿಧವಾದ ಗೌರವವೂ ವಿಶ್ವಾಸವೂ ಇದ್ದುವು. ಆಕೆಯೂ ತನ್ನ ಸರಳತೆ, ದಯೆ, ಪ್ರೀತಿಗಳಿಂದ ಆ ಗ್ರಾಮಕ್ಕೆ ತಾಯಿ ಯಂತಿದ್ದಳು. ಬಡವರನ್ನುಕಂಡರೆ ಆಕೆಗೆ ಕೇವಲನುರುಕ. ತನ್ನ ಹತ್ತಿರ ಇದ್ದದ್ದನ್ನು ಹಿಂದು ಮುಂದು ನೋಡದೆ ಕೊಟ್ಟುಬಿಡುವಳು. ವಿಶ್ವಾಸಪೂರ್ವಕವಾಗಿ ಮಾತನಾಡಿಸುವಳು. ಭಿಕ್ಷುಕರಿಗೂ ಸಾಧು ಸನ್ಯಾಸಿಗಳಿಗೂ ಎಂದಿಗೂ ಆ ಮನೆಯ ಬಾಗಿಲು ಹಾಕಿದ್ದುದೇ ಇಲ್ಲ. ಮಕ್ಕಳಿಗೂ ಕೂಡ ಆವರಮನೆಗೆ ಹೋದರೆ ಏನಾದರೂ ತಿಂಡಿಸಿಕ್ಕುವುದೆಂದು ಪೂರ್ಣಭರವಸೆ ಇತ್ತು. ಹೀಗೆ ಆಬಾಲ ವೃದ್ಧರೂ ಖುದಿರಾಮನಮನೆಗೆ ಆಗಾಗ್ಗೆ ಸಂತೋಷದಿಂದ ಬಂದು ಹೋಗುತ್ತಿದ್ದರು. ಮನೆಯಲ್ಲಿ ದಾರಿದ್ರ್ಯವಿದ್ದರೂ ಒಂದು ಅಪೂರ್ವ ವಾದ ಶಾಂತಿಯು ಬೆಳಗುತ್ತಿತ್ತು.

ಈ ಕಾಲದಲ್ಲಿ ನಡೆದ ಒಂದುಸಂಗತಿಯಿಂದ ಖುದಿರಾಮನ ದೈವಭಕ್ತಿಯು ಎಷ್ಟಿನಮಟ್ಟಿಗಿತ್ತೆಂಬುವನ್ನು ಊಹಿಸಬಹುದು. ಆತನತಂಗಿಯಾದ ರಾಮಶೀಲೆಯ ಮಗ ರಾಮಚಂದ್ರನು ಮೇದಿನೀ ಪುರದಲ್ಲಿ ಮೊಖ್ತೆಯಾರನಾಗಿದ್ದನು. ಕಾಮಾರಪುರಕ್ಕೂ ಅಲ್ಲಿಗೂ ಸುಮಾರು ೪೦ ಮೈಲಿ. ಈ ರಾಮಚಂದ್ರನ ಯೋಗಕ್ಷೇಮವನ್ನು ವಿಚಾರಿಸಿಕೊಂಡು ಬರುವುದಕ್ಕೆ ಆಗಿಂದಾಗ್ಗೆ ಖುದಿರಾಮನು ಅಲ್ಲಿಗೆ ಹೋಗಿಬರುತ್ತಿದ್ದನು. ಒಂದುದಿನ ಹೀಗೆ ಮೇದಿನೀ ಪುರಕ್ಕಾಗಿ ಬೆಳಗ್ಗೆ ಹೊರಟು ಸುಮಾರು ಹತ್ತು ಗಂಟೆಯ ಹೊತ್ತಿಗೆ ದಾರಿಯಲ್ಲಿ ಒಂದು ಊರನ್ನು ಸೇರಿದನು. ಅಲ್ಲಿ ಆಗ ತಾನೇ ಚಿಗುರಿ ತಳತಳನೆ ಹೊಳೆಯುತ್ತಿರುವ ದಳಗಳಿಂದ ಕೂಡಿದ

ಒಂದು ಬಿಲ್ವವೃಕ್ಷವನ್ನು ನೋಡಿ ಅವನಿಗೆ ಪರಮಾನಂದವಾಯಿತು. ತಾನು ಮೇದಿನೀಪುರಕ್ಕೆ ಹೊರಟಿದ್ದನೆಂಬುದು ಸಂಪೂರ್ಣವಾಗಿ ಮರೆತು ಹೋಯಿತು. ಆ ಊರಿನೊಳಕ್ಕೆ ಹೋಗಿ ಒಂದು ಹೊಸ ಬುಟ್ಟಿಯನ್ನೂ ಒಂದು ಚೌಕವನ್ನೂ ಕೊಂಡು ಕೊಂಡು ಆ ಚೌಕ ವನ್ನು ಚೊಕ್ಕಟವಾಗಿ ಕೊಳದಲ್ಲಿ ಒಗೆದು ಆ ಕುಕ್ಕೆಯತುಂಬ ಬಿಲ್ವಪತ್ರೆಯ ದಳಗಳನ್ನು ಕುಯ್ದು ತುಂಬಿ ಅದರಮೇಲೆ ಒದ್ದೆಯ ಬಟ್ಟೆಯನ್ನು ಮುಚ್ಚಿಕೊಂಡು ಉರಿಬಿಸಿಲಿನಲ್ಲಿಯೇ ಹಿಂತಿರುಗಿದನು. ಕಾಮಾರಪುಕುರವನ್ನು ಸೇರಿದಾಗ ಮಧ್ಯಾಹ್ನ ಸುಮಾರು ಒಂದು ಗಂಟೆಯಾಗಿತ್ತು. ಕೂಡಲೇಸ್ನಾನಮಾಡಿ ಬಹಳ ಹೊತ್ತು ಈ ಪತ್ರೆಗಳಿಂದ ದೇವತಾರ್ಚನೆಯನ್ನು ಮಾಡಿದನು. ಇದೆಲ್ಲವೂ ಆದಮೇಲೆ ಊಟಮಾಡುತ್ತಿದ್ದಾಗ ಶ್ರೀಮತಿ ಚಂದ್ರಾದೇವಿಯು ಈ ವೃತ್ತಾಂತವನ್ನೆಲ್ಲಾ ತಿಳಿದು ಕೇವಲವಿಸ್ಮಿತೆಯಾದಳು. ಖುದಿ ರಾಮನು ಮೇದಿನೀಪುರಕ್ಕೆ ಮರುದಿನ ಹೊರಟನು.

ಕಾಮಾರಪುಕುರಕ್ಕೆ ಬಂದಮೇಲೆ ಈರೀತಿ ಆರುವರ್ಷಗಳು ಕಳೆದುವು. ಈಗ ರಾಮಕುಮಾರನಿಗೆ ಹದಿನಾರುವರ್ಷ. ಕಾತ್ಯಾ ಯನಿಗೆ ಹನ್ನೊಂದುವರ್ಷ. ಮಗಳಿಗೆ ವಿವಾಹವಾಗಬೇಕಾದ ವಯಸ್ಸು ಮೀರುತ್ತಾಬಂದದ್ದನ್ನು ನೋಡಿ ಖುದಿರಾಮನು ಹುಡುಗಿ ಯನ್ನು ಹತ್ತಿರದಲ್ಲಿದ್ದ ಆನೂರುಗ್ರಾಮದ ಕೇನೇರಾಮನಿಗೆಕೊಟ್ಟು ಮದುವೆಮಾಡಿದನು. ಇದರ ಜೊತೆಯಲ್ಲಿಯೇ ಕೇನೇರಾಮನ ತಂಗಿ ಯನ್ನುಕೊಟ್ಟು ರಾಮಕುಮಾರನ ಮದುವೆಯೂ ನಡೆದುಹೋ ಯಿತು. ಇಷ್ಟು ಹೊತ್ತಿಗೆ ರಾಮಕುಮಾರನು ಸಾಹಿತ್ಯ ವ್ಯಾಕರಣ ಗಳನ್ನು ಮುಗಿಸಿ ಸ್ಮೃತಿ ಶಾಸ್ತ್ರಗಳನ್ನು ಓದುತ್ತಿದ್ದನು. ಮೂರು ನಾಲ್ಕುವರ್ಷಗಳಲ್ಲಿ ರಾಮಕುಮಾರನು ಸಂಪಾದಿಸುವುದಕ್ಕೆ ಶಕ್ತ ನಾದನು. ಮಗನು ವಯಸ್ಕನಾಗಿ ಸಂಸಾರ ಭಾರವನ್ನು ವಹಿಸು ವುದಕ್ಕೆ ಸಮರ್ಥನಾದದ್ದನ್ನು ನೋಡಿ ತೀರ್ಥಯಾತ್ರೆ ಮಾಡಿ ಕೊಂಡು ಬರಲು ಮನಸ್ಸು ಹುಟ್ಟಿ, ೧೮೨೪ ರಲ್ಲಿ ಖುದಿರಾಮನು

ರಾಮೇಶ್ವರಕ್ಕೆ ಹೊರಟನು. ಆ ಕಾಲದಲ್ಲಿ ಈಗಿನಹಾಗೆ ಪ್ರಯಾಣಕ್ಕೆ ರೈಲು ಮುಂತಾದ ಅನುಕೂಲಗಳಿರಲಿಲ್ಲ. ಆದರೂ ದಕ್ಷಿಣ ದೇಶದಲ್ಲಿದ್ದ ತೀರ್ಥ ಕ್ಷೇತ್ರಗಳನ್ನೆಲ್ಲಾ ಸುತ್ತಿಕೊಂಡು ಸುಮಾರು ಒಂದುವರ್ಷದ ತರುವಾಯ ಹಿಂತಿರುಗಿ ಬಂದನು. ಇದಾದ ಕೆಲವುದಿನಗಳಲ್ಲಿ ಶ್ರೀಮತೀ ಚಂದ್ರಾದೇವಿಯು ಗರ್ಭಧಾರಣಮಾಡಿ ಒಬ್ಬಮಗನನ್ನು ಹೆತ್ತಳು (೧೮೨೬). ರಾಮೇಶ್ವರಯಾತ್ರೆ ಮಾಡಿಕೊಂಡು ಬಂದತರುವಾಯ ಹುಟ್ಟಿದನಾದ್ದರಿಂದ ಈ ಹುಡುಗನಿಗೆ ರಾಮೇಶ್ವರನೆಂದು ನಾಮಕರಣ ಮಾಡಿದರು.

ಇದಾದ ಎಳೆಂಟುವರ್ಷಗಳ ತರುವಾಯ ಖುದಿರಾಮನಿಗೆ ಪುನಃ ತೀರ್ಥಯಾತ್ರೆ ಮಾಡಬೇಕೆಂಬ ಅಭಿಲಾಷೆಹುಟ್ಟಿತು. ಸ್ ೧೮೩೫ ನೆಯ ಇಸವಿಯ ಫಾಲ್ಗುಣ ಮಾಸದಲ್ಲಿ ಹೊರಟು ಕಾಶಿಗೆ ಹೋಗಿ ಅಲ್ಲಿ ವಿಶ್ವೇಶ್ವರನ ದರ್ಶನಮಾಡಿಕೊಂಡು ಚೈತ್ರ ಮಾಸದಲ್ಲಿ ಗಯಾ ಕ್ಷೇತ್ರವನ್ನು ಸೇರಿದನು. ಈ ತಿಂಗಳಲ್ಲಿ ಗಯಾಕ್ಷೇತ್ರದಲ್ಲಿ ಪಿಂಡಪ್ರದಾನ ಮಾಡಿದರೆ ಪಿತೃಗಳಿಗೆ ಅಕ್ಷಯತೃಪ್ತಿಯಾಗುವುದೆಂದು ಹೇಳಿರುವುದರಿಂದ ಈ ತಿಂಗಳಿಗೆ ಸರಿಯಾಗಿ ಅಲ್ಲಿಗೆ ಬಂದನು. ಅಲ್ಲಿ ಸುಮಾರು ಒಂದುತಿಂಗಳು ಇದ್ದು ಯಥಾವಿಧಿಯಾಗಿ ತೀರ್ಥಕ್ಷೇತ್ರಗಳಲ್ಲಿ ಮಾಡಬೇಕಾದ ಕೆಲಸಗಳನ್ನೆಲ್ಲಾ ಮುಗಿಸಿಕೊಂಡು ಕೊನೆಗೆ ಗದಾಧರನ ಶ್ರೀ ಪಾದಪದ್ಮಗಳಲ್ಲಿ ಪಿಂಡಪ್ರದಾನಮಾಡಿದನು. ಈ ರೀತಿಯಲ್ಲಿ ಶಾಸ್ತ್ರೀಯವಾಗಿ ಪಿತೃಕರ್ಮಗಳನ್ನು ಮುಗಿಸಿದ್ದರಿಂದ ಅವನ ಹೃದಯದಲ್ಲಿ ಎಷ್ಟು ತೃಪ್ತಿಯೂ ಶಾಂತಿಯೂ ನೆಲಗೊಂಡವೋ ಅದನ್ನು ಹೇಳಬೇಕಾದ್ದಿಲ್ಲ. ಭಗವಂತನು ತನ್ನಂಥ ದೀನನಿಗೆ ಈ ಕಾರ್ಯವನ್ನು ನಡೆಸಲು ಶಕ್ತಿ ಕೊಟ್ಟನಲ್ಲಾ ಎಂಬ ಆಲೋಚನೆಯಿಂದ ಅವನಲ್ಲಿ ಕೃತಜ್ಞತೆಯೂ ಭಕ್ತಿಯೂ ತುಂಬಿಹೋದುವು. ಹಗಲೆಲ್ಲಾ ಇದೇ ಯೋಚನೆಯಲ್ಲಿಯೇ ಇದ್ದು ರಾತ್ರಿ ಮಲಗಿಕೊಂಡಮೇಲೆ ನಿದ್ರೆಹತ್ತಿತೋ ಇಲ್ಲವೋ ಆಗ ಅವನಿಗೆ ಒಂದು ಸ್ವಪ್ನವಾಯಿತು. ಅದರಲ್ಲಿ

ಒಬ್ಬ ದಿವ್ಯ ಪುರುಷನು ಕಾಣಿಸಿಕೊಂಡು ವೀಣಾಧ್ವನಿಯಂತೆ ಮಧುರವಾದ ಸ್ವರದಿಂದ ಅವನನ್ನು ಕುರಿತು "ಖುದಿರಾಮ, ನಿನ್ನ ಭಕ್ತಿಗೆ ನಾನು ಬಹಳವಾಗಿ ಮೆಚ್ಚಿದೆ. ನಾನು ನಿನ್ನ ಮನೆಯಲ್ಲಿ ಪುತ್ರರೂಪದಿಂದ ಅವತಾರಮಾಡಿ ನಿನ್ನ ಸೇವೆಯನ್ನು ಸ್ವೀಕರಿಸುವೆನು" ಎಂದು ಹೇಳಿದನು. ಈ ಮಾತನ್ನು ಕೇಳಿ ಆನಂದವಾದರೂ ಖುದಿರಾಮನು ಉತ್ತರಕ್ಷಣದಲ್ಲಿಯೇ ಚಿರದರಿದ್ರನಾದ ತಾನು ಭಗವಂತನಿಗೆ ತಿನ್ನುವುದಕ್ಕೆ ಏನು ಕೊಡಲಿ ಹೇಗೆ ಕಾಪಾಡಲಿ ಎಂದು ಮುಂತಾಗಿ ಚಿಂತಿಸುತ್ತ "ಬೇಡ, ಬೇಡ, ಪ್ರಭೂ! ನನಗೆ ಅಷ್ಟು ಸೌಭಾಗ್ಯಬೇಡ; ನನ್ನಮೇಲೆ ಕೃಪೆಮಾಡಿ ದರ್ಶನ ಕೊಟ್ಟು ನನ್ನನ್ನು ಕೃತಾರ್ಥನಾಗಿ ಮಾಡಿ ಈವಿಧವಾದ ನಿನ್ನ ಅಭಿಪ್ರಾಯವನ್ನು ಪ್ರಕಾಶಮಾಡಿದೆಯಲ್ಲಾ, ಇದೇ ನನಗೆ ಯಥೇಚ್ಛವಾಯಿತು. ನೀನು ನನ್ನ ಹೊಟ್ಟೆಯಲ್ಲಿ ಹುಟ್ಟಿದರೆ ದರಿದ್ರನಾದ ನಾನು ನಿನ್ನ ಸೇವೆಯನ್ನು ಹೇಗೆಮಾಡೇನು?" ಎಂದು ಹೇಳಿದನು. ಆ ದಿವ್ಯ ಪುರುಷನು ಖುದಿರಾಮನ ಈ ವಿಧವಾದ ದೈನ್ಯವನ್ನು ನೋಡಿ ಪ್ರಸನ್ನನಾಗಿ "ಭಯಪಡಬೇಡ, ಖುದಿರಾಮ, ನೀನು ಏನುಕೊಟ್ಟರೆ ಅದನ್ನೇ ಸ್ವೀಕರಿಸಿ ತೃಪ್ತಿಹೊಂದುವೆನು. ನನ್ನ ಅಭಿಲಾಷೆ ಪೂರ್ಣವಾಗುವುದಕ್ಕೆ ಅಡ್ಡಿಮಾಡಬೇಡ." ಎಂದನು. ಈ ಮಾತನ್ನುಕೇಳಿ ಖುದಿರಾಮನು ಏನೂ ಹೇಳಲಾರದೆಹೋದನು. ಅದರಿಂದ ಆನಂದದುಃಖ ಮೊದಲಾದ ಪರಸ್ಪರವಿರುದ್ಧವಾದ ಭಾವಗಳು ಅವನ ಹೃದಯದಲ್ಲಿ ಏಕಕಾಲದಲ್ಲಿ ಪ್ರವಹಿಸುತ್ತಾ ಅವನನ್ನು ಸ್ತಂಭಿತನನ್ನಾಗಿ ಮಾಡಿದುವು. ಇಷ್ಟುಹೊತ್ತಿಗೆ ಎಚ್ಚರವಾಗಲು ಹಾಸಿಗೆಯಮೇಲೆ ಎದ್ದುಕುಳಿತು ಏನೇನೋ ಯೋಚನೆ ಮಾಡುತ್ತಾ ಕೊನೆಗೆ ಯಾವನೋ ಒಬ್ಬ ಮಹಾ ಪುರುಷನು ತನ್ನ ಮನೆಯಲ್ಲಿ ಅವತಾರ ಮಾಡುವನೆಂದು ದೃಢಮಾಡಿಕೊಂಡನು. ಆದರೆ ಈ ಅದ್ಭುತ ಸ್ವಪ್ನದ ಸಾಫಲ್ಯವನ್ನು ಪರೀಕ್ಷೆ ಮಾಡುವವರೆಗೂ ಯಾರ ಎದುರಿಗೂ ಈ ಸುದ್ದಿಯನ್ನು ಎತ್ತುವುದಿಲ್ಲವೆಂದು ನಿಶ್ಚಯಮಾಡಿಕೊಂಡು ಊರಿಗೆ ಹಿಂತಿರುಗಿ ಹೊರಟನು.

ಇದೇ ಕಾಲದಲ್ಲಿಯೇ ಶ್ರೀಮತೀ ಚಂದ್ರಾದೇವಿಗೂ ಒಂದು ವಿಚಿತ್ರವಾದ ಸ್ವಪ್ನವಾಯಿತು. ಒಂದುದಿನ ರಾತ್ರಿಯಾವನೋ ಒಬ್ಬ ದಿವ್ಯಪುರುಷನು ತನ್ನ ಹಾಸಿಗೆಯಲ್ಲಿ ಮಲಗಿದ್ದವನ್ನು ನೋಡಿ ಬೆಚ್ಚಿ ದೀಪವನ್ನು ದೊಡ್ಡದುಮಾಡಿ ನೋಡಿದಳು. ಆದರೆ ಯಾರೂ ಇರಲಿಲ್ಲ. ಬಾಗಿಲಿನ ಅಗಳಿಯು ಹಾಕಿದ್ದುಹಾಕಿದ ಹಾಗೆಯೇ ಇತ್ತು. ಇದನ್ನು ನೋಡಿ ಏನೂ ತಿಳಿಯದ ಆಕೆಯು ಯಾರೋ ಹೊರಗಣಿಂದ ಬಂದಿದ್ದು ಉಪಾಯವಾಗಿ ಅಗಳಿಯನ್ನು ಹಾಕಿಕೊಂಡು ಹೊರಟು ಹೋಗಿದ್ದಾರೆಂದು ಭಾವಿಸಿಕೊಂಡಳು. ನೆರೆ ಹೊರೆಯುವರು ಇದನ್ನು ಕೇಳಿ ನಕ್ಕು ಅದೆಲ್ಲಾ ಕನಸೆಂದು ನಿರ್ಧರ ಮಾಡಿದರು. ಇನ್ನೊಂದುದಿನ ತಮ್ಮ ಮನೆಯ ಎದುರಿಗಿರುವ ಈಶ್ವರ ದೇವಸ್ಥಾನದ ಹತ್ತಿರ ನಿಂತಿರಲು ಅಲ್ಲಿಂದ ಒಂದು ದಿವ್ಯಜ್ಯೋತಿಯು ಹೊರಟು ಆಕೆಯ ದೇಹವನ್ನು ಪ್ರವೇಶಿಸಿದಂತಾಯಿತು. ಇಲ್ಲಿಂದ ಮುಂದಕ್ಕೆ ಆಕೆಯಲ್ಲಿ ಗರ್ಭಿಣಿಯ ಚಿಹ್ನೆಗಳು ಕಾಣುತ್ತಬಂದುವು. ಖುದಿರಾಮನು ಊರಿಗೆ ಬಂದಕೂಡಲೇ ಈ ವಿಷಯಗಳನ್ನೆಲ್ಲಾ ಆತನಿಗೆ ತಿಳಿಸಲು ಖುದಿರಾಮನು ತನ್ನ ಸ್ವಪ್ನವನ್ನು ಜ್ಞಾಪಿಸಿ ಕೊಂಡು "ಇದನ್ನು ಯಾರೊಡನೆಯೂ ಹೇಳಬೇಡ. ಶ್ರೀರಘು ವೀರನು ನಮ್ಮ ಮೇಲೆ ಕೃಪೆಮಾಡಿ ಹೀಗೆಲ್ಲಾ ನಡೆಸಿದ್ದಾನೆ" ಎಂದು ಹೇಳಿ ಸಮಾಧಾನಮಾಡಿದನು.

ಶಿವಮಂದಿರದಬಳಿಯಲ್ಲಿ ಜ್ಯೋತಿಯ ದರ್ಶನವಾದಂದಿನಿಂದ ಚಂದ್ರಾದೇವಿಗೆ ಆಗಾಗ್ಗೆ ದೇವದೇವಿಯರ ಮೂರ್ತಿಗಳು ಕಾಣು ತ್ತಿದ್ದುವು. ಈ ಕಾಲದವರು "ಇದೆಲ್ಲಾ ಅಜ್ಜಮ್ಮನಕಥೆ! ದೇವದೇವಿ ಯರೆಂದರೇನು ? ಅದನ್ನು ನೋಡುವುದೆಂದರೇನು ? ಈ ಇಪ್ಪತ್ತ ನೆಯ ಶತಮಾನದಲ್ಲಿಯೂ ಇದನ್ನು ನಂಬುವರಾರು ?" ಎಂದು ಆಕ್ಷೇಪಿಸಬಹುದು. ಆದರೆ ಮಹಾಪುರುಷರು ಅವತಾರಮಾಡುವ ಕಾಲದಲ್ಲಿ ಅವರ ತಾಯಿತಂದೆಗಳಿಗೆ ಅಸಾಧಾರಣವಾದ ಆಧ್ಯಾತ್ಮಿಕ ಅನುಭವವೂ, ದರ್ಶನವೂ ಆಗುವವಿಷಯವು ಪ್ರಪಂಚದ ಎಲ್ಲಾ

ಜನರ ಧರ್ಮಗ್ರಂಥಗಳಲ್ಲಿಯೂ ಹೇಳಿದೆ ಭಗವಾನ್ ಶ್ರೀರಾಮ ಚಂದ್ರ, ಶ್ರೀಕೃಷ್ಣ, ಬುದ್ಧ, ಶಂಕರಾಚಾರ್ಯ, ಏಸುಕ್ರಿಸ್ತ, ಚೈತನ್ಯ ಮುಂತಾದ ಅವತಾರಪುರುಷರ ತಾಯಿತಂದೆಗಳ ಉದಾಹರಣೆಯನ್ನು ತೆಗೆದುಕೊಂಡು ಇದರತತ್ವವನ್ನು ವಿಚಾರ ಮಾಡಬಹುದು. ಯಜ್ಞಪುರುಷನು ತಂದುಕೊಟ್ಟ ಪಾಯಸವನ್ನು ಭೋಜನಮಾಡಿ ಕೌಸಲ್ಯೆ ಮೊದಲಾದ ದಶರಥನ ಹೆಂಡಿರು ಗರ್ಭಧಾರಣ ಮಾಡಿದಮೇಲೆ ಅವರಿಗಾದ ನಾನಾವಿಧವಾದ ದಿವ್ಯ ಅನುಭವವು ರಾಮಾಯಣದಲ್ಲಿ ವಿಸ್ತಾರವಾಗಿ ಲಿಖಿತವಾಗಿದೆ. ಶ್ರೀಕೃಷ್ಣನು ಗರ್ಭದಲ್ಲಿದ್ದಾಗ ಅವನ ತಾಯಿತಂದೆಗಳಿಗೆ ಜಗದೀಶ್ವರನು ದರ್ಶನಕೊಟ್ಟನೆಂದೂ ಹುಟ್ಟಿದಮೇಲೆ ಪ್ರತಿನಿತ್ಯವೂ ಯಾವುದಾದರೂ ಒಂದು ಅದ್ಭುತವು ನಡೆಯುತ್ತಿತ್ತೆಂದೂ ಭಾಗವತದಲ್ಲಿ ಹೇಳಿದೆ. ಬುದ್ಧದೇವನು ಶ್ರೀಮತಿಮಾಯಾದೇವಿಯ ಗರ್ಭವನ್ನು ಪ್ರವೇಶಮಾಡಿದ ಕಾಲದಲ್ಲಿಯೂ ಆಕೆಗೆ ಒಬ್ಬ ಮಹಾಪುರುಷನು ಜ್ಯೋತಿರ್ಮಯವಾದ ಒಂದು ಬಿಳಿಯ ಆನೆಯ ರೂಪವನ್ನು ಧರಿಸಿ ಉದರವನ್ನು ಪ್ರವೇಶಮಾಡಿದಂತೆಯೂ ಆಮೇಲೆ ಇಂದ್ರಾದಿದೇವತೆಗಳು ಬಂದು ಆಕೆಗೆ ನಮಸ್ಕಾರಮಾಡಿದಂತೆಯೂ ಹೇಳಿದೆ. ಏಸುವಿನ ತಾಯಿಯಾದ ಶ್ರೀಮತೀ ಮೇರಿಗೂ ಜೋಸೆಫ್‌ನೊಡನೆ ಸಂಗಮಾಡುವುದಕ್ಕೆ ಮುಂಚೆಯೇ ಗರ್ಭವಾದಂತೆಯೂ ಒಂದು ಅಪೂರ್ವವಾದ ದಿವ್ಯಾನುಭವವಾದಂತೆಯೂ ಹೇಳಿದೆ. ಶಂಕರಾಚಾರ್ಯರ ತಾಯಿಯೂ ಕೂಡ ದೇವಾದಿದೇವನಾದ ಮಹಾದೇವನ ದಿವ್ಯ ದರ್ಶನದಿಂದಲೂ ವರಮಹಿಮೆಯಿಂದಲೂ ಗರ್ಭೋತ್ಪತ್ತಿಯನ್ನು ಅನುಭವಮಾಡಿದಂತೆ ಬರೆಯಲ್ಪಟ್ಟಿದೆ. ಚೈತನ್ಯದೇವನ ತಾಯಿಯಾದ ಶಚೀದೇವಿಗೂ ಈ ವಿಧವಾದ ದಿವ್ಯಾನುಭವವಾದ ವಿಷಯವು ಶ್ರೀಚೈತನ್ಯ ಚರಿತಾಮೃತ ಮುಂತಾದ ಗ್ರಂಥಗಳಲ್ಲಿ ಹೇಳಿದೆ.

ಹಿಂದೂ, ಬೌದ್ಧ, ಕ್ರೈಸ್ತ ಮುಂತಾದ ಎಲ್ಲಾ ಧರ್ಮ ಗ್ರಂಥ

ಗಳಲ್ಲಿಯೂ ಭಕ್ತಿ ಪುರಸ್ಸರವಾದ ಈಶ್ವರ ಪೂಜೆಯೇ ಮೋಕ್ಷವನ್ನು ಪಡೆಯುವುದಕ್ಕೆ ಸುಲಭವಾದ ಮಾರ್ಗವೆಂದು ಹೇಳಿದೆ. ಇದಕ್ಕೆ ಸಾಮಾನ್ಯವಾಗಿ ಯಾರೂ ಆಕ್ಷೇಪ ಮಾಡುವುದಿಲ್ಲ. ಆದರೆ ಇವೇ ಧರ್ಮ ಗ್ರಂಥಗಳೇ ಅವತಾರ ಪುರುಷರ ಜನಕ ಜನನಿಯರಿಗೆ ದಿವ್ಯ ದರ್ಶನ ಮತ್ತು ಅನುಭವಗಳಾದುವೆಂದು ಏಕ ಕಂಠದಿಂದ ಹೇಳು ತ್ತವೆ. ಇದನ್ನು ಮಾತ್ರ ಸಾಮಾನ್ಯವಾಗಿ ಯಾರೂ ನಂಬುವುದಿಲ್ಲ. ಏಕೆಂದರೆ, ಇವೆಲ್ಲಾ ಜನಸಾಮಾನ್ಯದ ಅನುಭವಕ್ಕೆ ಮೀರಿದ್ದಾಗಿವೆ. ಆದರೆ ನಮ್ಮ ಅನುಭವಕ್ಕೆ ಮೀರಿದುವುಗಳನ್ನೆಲ್ಲಾ ನಾವು ಶುದ್ಧ ಸುಳ್ಳೆಂದು ಹೇಳುವುದು ಅಸಂಗತ. ಆತ್ಮ, ಮುಕ್ತಿ, ಈಶ್ವರ ಮುಂತಾದ ಆಧ್ಯಾತ್ಮಿಕ ವಿಚಾರಗಳನ್ನು ನಾವೇ ಅನುಭವಮಾಡಿದ ಹೊರತು ಎಂದೂ ಪೂರ್ಣವಾಗಿ ನಂಬುವುದಕ್ಕಾಗುವುದಿಲ್ಲ. ಹೀಗೆಂದು ಪಾರ ಲೌಕಿಕ ವಿಷಯಗಳನ್ನು ಬಿಟ್ಟುಬಿಡಲಾಗದು. ಇದರ ನಿಜಸ್ಥಿತಿ ಯನ್ನು ತಿಳಿಯಬೇಕಾದರೆ ಶ್ರದ್ಧೆ ವಹಿಸಿ ಅವುಗಳ ಸಾಧಕ ಬಾಧಕ ಗಳನ್ನೆಲ್ಲಾ ಸಂಗ್ರಹಿಸಿ ನಿಷ್ಪಕ್ಷಪಾತವಾಗಿ ವಿಚಾರಮಾಡಿ, ಆಮೇಲೆ ಬೇಕಾದರೆ ಅವುಗಳನ್ನು ಒಪ್ಪಬಹುದು, ಬಿಟ್ಟರೆ ಬಿಡಬಹುದು.

ಅದು ಹೇಗಾದರೂ ಇರಲಿ. ಶ್ರೀರಾಮಕೃಷ್ಣ ಪರಮಹಂಸರ ಚರಿತ್ರೆಯಲ್ಲಿಯೂ ಈ ಸಂಗತಿಗಳು ನಂಬುಗೆಗೆ ಅರ್ಹರಾದ ಜನ ರಿಂದ ತಿಳಿಯಬಂದಿರುವುದರಿಂದ ಅವುಗಳನ್ನು ಇಲ್ಲಿ ಬರೆದಿದ್ದೇವೆ.

# ಎರಡನೆಯ ಅಧ್ಯಾಯ.

## ರಾಮಕೃಷ್ಣನ ಜನನ ಮತ್ತು ಬಾಲ್ಯ.

---

(೧೮೩೬ — ೧೮೪೩)

ಚಂದ್ರಾದೇವಿಗೆ ನವಮಾಸತುಂಬಿತು. ಒಂದುದಿನ ಬೆಳಗ್ಗೆ ದೇಹದಲ್ಲಿ ಅಶಕ್ತಿತೋರಿ ಪ್ರಸವವೇದನೆಯ ಚಿಹ್ನೆಗಳು ಕಂಡು ಬಂದುವು. ಆಗ ಆಕೆಯು ಖುದಿರಾಮನಬಳಿಗೆಹೋಗಿ ಈ ವಿಷಯವನ್ನು ತಿಳಿಸಿ "ಮನೆಯಲ್ಲಿ ಮತ್ತೊಬ್ಬರೂ ಇಲ್ಲ; ನಾನು ಈಗ ಹೆತ್ತರೆ ಇಂದು ರಘುವೀರನಪೂಜೆ ನಿಂತುಹೋಗುತ್ತದೆಯಲ್ಲ, ಏನುಮಾಡೋಣ?" ಎಂದು ಕೇಳಿದಳು. ಖುದಿರಾಮನು ಅದಕ್ಕೆ 'ನಾವೇಕೆ ಯೋಚಿಸಬೇಕು? ನಿನ್ನ ಹೊಟ್ಟೆಯಲ್ಲಿ ಹುಟ್ಟುವ ಮಹಾಪುರುಷನು ರಘುವೀರನ ಪೂಜೆಗೆ ವಿಘ್ನವನ್ನು ಎಂದಿಗೂ ಉಂಟುಮಾಡುವುದಿಲ್ಲ. ಈದಿನ ಎಂದಿನಂತೆ ರಘುವೀರನ ಸೇವೆಯನ್ನು ಮಾಡು. ನಾಳೆ ಇನ್ನೇನಾದರೂ ಏರ್ಪಾಡನ್ನು ಮಾಡೋಣ. ಸಾಯಂಕಾಲಕ್ಕೆ ಧನಿಯನ್ನು ಕರೆದು ಇಲ್ಲಿಯೇ ಮಲಗಿರುವಹಾಗೆ ಹೇಳೋಣ" ಎಂದು ಹೇಳಿದನು. ಈ ಮಾತನ್ನುಕೇಳಿ ಚಂದ್ರಾದೇವಿಗೆ ದೇಹದಲ್ಲಿ ಬಲಬಂದಂತಾಗಿ ಮತ್ತೆ ಮನೆ ಕೆಲಸಗಳನ್ನು ಮಾಡತೊಡಗಿದಳು. ರಘುವೀರನಿಗೆ ಮಧ್ಯಾಹ್ನವೂ ಸಾಯಂಕಾಲವೂ ನಡೆಯಬೇಕಾದ ಪೂಜೋಪಚಾರಗಳೆಲ್ಲಾ ಕ್ರಮವಾಗಿ ನಡೆದುವು. ರಾತ್ರಿಯ ಊಟವಾದಮೇಲೆ ಖುದಿರಾಮನು ಹೋಗಿ ಧನಿ * ಯನ್ನು ಕರೆದುಕೊಂಡು ಬಂದನು. ಮರುದಿನ ಸೂರ್ಯೋ

---

* ಅವರ ನೆರೆಯಲ್ಲಿ ಪರಿಚಿತಳಾಗಿದ್ದ ಒಬ್ಬ ಕಮ್ಮಾರ ಜಾತಿಯ ಹೆಂಗಸು.

ದಯಕ್ಕಿಂತ ಸ್ವಲ್ಪ ಮುಂಚೆಯೇ ಶ್ರೀಮತೀ ಚಂದ್ರಾದೇವಿಯು ಒಬ್ಬ ಪುತ್ರನನ್ನು ಹೆತ್ತಳು. ಈತನೇ ಮುಂದೆ ಪ್ರಸಿದ್ಧನಾದ ಭಗವಾನ್ ಶ್ರೀರಾಮಕೃಷ್ಣ ಪರಮಹಂಸದೇವ. ಬೇಗಾದಮೇಲೆ ಖುದಿರಾಮನು ಜೋಯಿಸರನ್ನು ಕರೆದುಕೊಂಡುಬಂದು ಜನ್ಮಪತ್ರಿಕೆಯನ್ನು ಬರೆಸಿ ನೋಡಲಾಗಿ ಎಲ್ಲವೂ ಬಹು ಪ್ರಶಸ್ತವಾಗಿ ಕಂಡುಬಂದಿತು. ಜೋಯಿಸರು "ಇಂಥವನು ಧರ್ಮವಿತ್ತಾಗಿಯೂ ಮಹನೀಯನಾಗಿಯೂ ಆಗುವನು. ಯಾವಾಗಲೂ ಪುಣ್ಯ ಕರ್ಮಾನುಷ್ಠಾನದಲ್ಲಿ ನಿರತನಾಗಿರುವನು. ಬಹುಶಿಷ್ಯ ಪರಿವೃತನಾಗಿ ದೇವಮಂದಿರದಲ್ಲಿ ವಾಸಮಾಡುವನು. ನಾರಾಯಣಾಂಶಸಂಭೂತನಾದ ಮಹಾಪುರುಷನೆಂದು ಜಗತ್ತಿನಲ್ಲಿ ಪ್ರಸಿದ್ಧಿಪಡೆದು ಸರ್ವತ್ರ ಸರ್ವಜನರಿಂದಲೂ ಪೂಜಿತನಾಗುವನು." ಎಂದು ಹೇಳಿದರು. ಖುದಿರಾಮನಿಗೆ ಆಶ್ಚರ್ಯವಾಯಿತು. ತಾನು ಗದಾಧಾಮದಲ್ಲಿ ನೋಡಿದ ಸ್ವಪ್ನವು ಸತ್ಯವೆಂದು ನಂಬುಗೆ ಯುಂಟಾಯಿತು. ಅನಂತರ ಜಾತಕರ್ಮವನ್ನು ನಡೆಸಿ ಗಯೆಯಲ್ಲಿ ಆದ ಸ್ವಪ್ನವನ್ನು ಮನಸ್ಸಿನಲ್ಲಿಟ್ಟುಕೊಂಡು ಶಿಶುವಿಗೆ ಗದಾಧರನೆಂದು ನಾಮಕರಣ ಮಾಡಿದನು.

ಮಗುವಿಗೆ ಐದುತಿಂಗಳು ತುಂಬಿತು. ಆರನೆಯತಿಂಗಳಲ್ಲಿ ಖುದಿರಾಮನು ಮಗನಿಗೆ ಅನ್ನಪ್ರಾಶನ ಮಾಡಬೇಕೆಂದು ಉದ್ದೇಶ್ಯಪಟ್ಟು ತನಗೆ ಕೇವಲಹತ್ತಿರ ಸಂಬಂಧಿಗಳಾದ ನಾಲ್ಕುಜನರನ್ನು ಊಟಕ್ಕೆ ಕರೆದು ಆ ಕಾರ್ಯವನ್ನು ಮುಗಿಸಿಬಿಡಬೇಕೆಂದಿದ್ದನು. ಆದರೆ ಅವನು ಯೋಚಿಸಿದ್ದೇ ಒಂದಾಯಿತು; ನಡದದ್ದೇ ಒಂದಾಯಿತು. ಆ ಗ್ರಾಮದ ಜಮೀನುದಾರನಾದ ಆತನ ಸ್ನೇಹಿತ ಧರ್ಮದಾಸ ಲಾಹಾ ಎಂಬಾತನ ಪ್ರೇರಣೆಯಿಂದಲೂ ಸಹಾಯದಿಂದಲೂ ಖುದಿರಾಮನ ಮನೆಯಲ್ಲಿ ಆ ವೂರಿನ ಎಲ್ಲಾ ಬ್ರಾಹ್ಮಣರಿಗೂ ಬ್ರಾಹ್ಮಣೇತರರಿಗೂ ಸಂತರ್ಪಣೆ ನಡೆದುಹೋಯಿತು. ಎಷ್ಟೋಜನ ಬಡವರೂ ಭಿಕ್ಷುಕರೂ ತೃಪ್ತಿಹೊಂದಿದರು.

ಮಗುವು ಬಹುಮುದ್ದಾಗಿದ್ದುದರಿಂದ ಆ ಊರಿನ ಗಂಡಸರು ಹೆಂಗಸರೆಲ್ಲರೂ ಮಗುವನ್ನು ಎತ್ತಿಕೊಂಡು ಆಡಿಸುತ್ತಾ ಆನಂದ ಪಡುತ್ತಿದ್ದರು. ಹೀಗೆನಾಲ್ಕೈದು ವರ್ಷಗಳು ಕಳೆದುವು. ಇನ್ನೂ ಈ ಚಿಕ್ಕವಯಸ್ಸಿನಲ್ಲಿಯೇ ಗದಾಧರನ ಬುದ್ಧಿಯೂ ಜ್ಞಾಪಕಶಕ್ತಿಯೂ ಅದ್ಭುತವಾಗಿದ್ದುವು. ಇದನ್ನು ನೋಡುತ್ತಿದ್ದ ಖುದಿರಾಮನ ವಿಸ್ಮಯವನ್ನೂ ಆನಂದವನ್ನೂ ಹೇಳತೀರದು. ಅವನು ಚಂಚಲ ನಾದ ಈ ಬಾಲಕನನ್ನು ತೊಡೆಯಮೇಲೆ ಕೂರಿಸಿಕೊಂಡು ತಮ್ಮ ಪೂರ್ವಪುರುಷ ನಾಮಾವಳಿ, ದೇವದೇವಿಯರ ಸಣ್ಣಸಣ್ಣ ಸ್ತೋತ್ರಗಳು, ಅಥವಾ ರಾಮಾಯಣ ಮಹಾಭಾರತಗಳ ವಿಚಿತ್ರ ವಾದ ಕಥೆಗಳು ಇವನ್ನು ಹೇಳಿಕೊಡುತ್ತಿದ್ದನು. ಒಂದುಸಲ ಕೇಳಿದ ಮಾತ್ರದಿಂದಲೇ ಗದಾಧರನಿಗೆ ಮುಕ್ಕಾಲು ಪಾಲೆಲ್ಲಾ ಬಾಯಿಗೆ ಬಂದುಬಿಡುತ್ತಿತ್ತು. ಎಷ್ಟೋದಿನ ಬಿಟ್ಟು ಕೇಳಿದರೂ ಅವುಗಳನ್ನು ಅದೇರೀತಿಯಲ್ಲಿ ನೀರುಕುಡಿದಂತೆ ಹೇಳುತ್ತಿದ್ದನು. ಈ ಕಾಲ ದಲ್ಲಿಯೇ ಖುದಿರಾಮನಿಗೆ ಇನ್ನೊಂದು ವಿಶೇಷ ಸಂಗತಿಯೂ ಕಂಡುಬಂತು. ಹುಡುಗನಿಗೆ ಕೆಲವು ವಿಷಯಗಳಲ್ಲಿ ಶ್ರದ್ಧೆಯೂ. ಆಸಕ್ತಿಯೂ ವಿಶೇಷವಾಗಿದ್ದುವು. ಮತ್ತೆ ಕೆಲವು ವಿಚಾರಗಳಲ್ಲಿ ಅವನು ಕೇವಲ ಉದಾಸೀನನಾಗಿರುತ್ತಿದ್ದನು. ನೂರಾರುಸಲ ಹೇಳಿದರೂ ಅವುಗಳಲ್ಲಿ ಸ್ವಲ್ಪವೂ ಮನಸ್ಸೇ ಇಡುತ್ತಿರಲಿಲ್ಲ. ಇಂಥ ವಿಚಾರಗಳಲ್ಲಿ ಗಣಿತವೊಂದು. ಇದನ್ನು ಕಂಡು ಖುದಿರಾ ಮನು "ಹುಡುಗನು ಇನ್ನೂ ಚಿಕ್ಕವನು. ಇನ್ನೂ ಕೇವಲ ಆಟಪಾಟದ ಮೇಲೆಯೇ ಗಮನ. ಈಗಾಗಲೇ ಅವನಿಗೆ ಇದೆಲ್ಲ ವನ್ನೂ ಹೇಳಿಕೊಟ್ಟು ಏಕೆ ಗೋಳಾಡಿಸಬೇಕು" ಎಂದು ಯೋ ಚಿಸಿ ಐದನೆಯ ವರ್ಷದಲ್ಲಿ ಶಾಸ್ತ್ರೀಯವಾಗಿ ವಿದ್ಯಾರಂಭಮಾಡಿಸಿ, ಹತ್ತಿರದಲ್ಲಿದ್ದ ಪಾಠಶಾಲೆಗೆ ಕಳುಹಿಸಿದನು. ಅಲ್ಲಿದ್ದ ಹುಡುಗ ರನ್ನು ಬೇಗ ಪರಿಚಯಮಾಡಿಕೊಂಡು ಗದಾಧರನು ಸಂತೋಷವಾಗಿ ಓಡಾಡಿಕೊಂಡಿರುತ್ತಿದ್ದನಲ್ಲದೆ ಬೇಗ ಉಪಾಧ್ಯಾಯರಿಗೂ ಅಚ್ಚು ಮೆಚ್ಚಾದನು.

ಮನೆಯಲ್ಲಿ ಹೇಗೆಯೋ ಪಾಠಶಾಲೆಯಲ್ಲಿಯೂ ಹಾಗೆಯೇ ತನಗೆ ಬೇಕಾದ ಕೆಲವು ವಿಷಯಗಳಲ್ಲಿ ಕೇವಲ ಶ್ರದ್ಧೆ, ತನಗೆ ಬೇಡದುವುಗಳಲ್ಲಿ ಅಶ್ರದ್ಧೆ. ತನಗೆ ಇಷ್ಟವಿಲ್ಲದ್ದನ್ನು ಯಾರು ಏನು ಹೇಳಿದರೂ ಮಾಡುತ್ತಿರಲಿಲ್ಲ. ಬಹುಹಟ: ಆದರೆ ಯಾವುದಾದರೂ ಒಂದು ವಿಷಯವನ್ನು ಯುಕ್ತಿಯುಕ್ತವಾಗಿ ಸಕಾರಣವಾಗಿ ಅವನ ಮನಸ್ಸಿಗೆ ಹಿಡಿಯುವಂತೆ ತಿಳಿಸಿದ್ದೇ ಆದರೆ, ಅದಕ್ಕೆ ಎಂದಿಗೂ ವಿರೋಧವಾಗಿ ಹೋಗುತ್ತಿರಲಿಲ್ಲ. ಈ ಕಾಲದಲ್ಲಿ ಒಂದು ಸಂಗತಿಯನ್ನು ಇದಕ್ಕೆ ಉದಾಹರಣೆಯಾಗಿ ಕೊಡಬಹುದು. ಖುದಿರಾಮನ ಮನೆಯ ಹತ್ತಿರ ಒಂದು ಕೆರೆಯಿತ್ತು. ಊರಿನವರೆಲ್ಲರೂ ಅಲ್ಲಿ ಸ್ನಾನಪಾನಾದಿಗಳನ್ನು ಮಾಡುತ್ತಿದ್ದರು. ಹೆಂಗಸರಿಗೂ ಗಂಡಸರಿಗೂ ಬೇರೆಬೇರೆ ಸ್ನಾನಘಟ್ಟಗಳಿದ್ದುವು. ಆದರೆ ಗದಾಧರನಂಥ ಸಣ್ಣ ಹುಡುಗರು ಹೆಂಗಸರ ಘಟ್ಟಕ್ಕೆ ಹೋದರೆ ಆಕ್ಷೇಪಣೆ ಇರುತ್ತಿರಲಿಲ್ಲ. ಗದಾಧರನು ಒಂದುದಿನ ಒಬ್ಬಿಬ್ಬರು ಜೊತೆಯ ಹುಡುಗರನ್ನು ಕರೆದುಕೊಂಡು ಅಲ್ಲಿಗೆಹೋಗಿ, ನೀರಿನಲ್ಲಿ ಕುಣಿದಾಡುತ್ತ ಅಲ್ಲಿದ್ದ ಹೆಂಗಸರಿಗೆಲ್ಲ ನೀರನ್ನು ಸಿಡಿಸಿ ಬಹಳ ಗಲಭೆಮಾಡಿದನು. ಅವರು ಎಷ್ಟು ಬೇಡವೆಂದರೂ ಕೇಳಲಿಲ್ಲ. ಕೊನೆಗೆ ಅವರಲ್ಲೊಬ್ಬ ಮುದುಕಿಯು ಬಲುಬೇಸರಪಟ್ಟುಕೊಂಡು “ನಿಮಗೆ ಈ ಘಟ್ಟದಲ್ಲಿ ಏನು ಕೆಲಸ? ಗಂಡಸರ ಘಟ್ಟಕ್ಕೆ ಹೋಗಬಾರದೇ? ಹೆಂಗಸರು ಸ್ನಾನಮಾಡುತ್ತಿದ್ದಾಗ ನೋಡಬಾರದೆಂಬುದು ನಿಮಗೆ ಗೊತ್ತಿಲ್ಲವೇ?” ಎಂದು ಗದರಿಸಿದಳು. ಅದಕ್ಕೆ ಗದಾಧರನು “ನೋಡಿದರೇನು?” ಎಂದು ಕೇಳಿದನು. ಪಾಪ! ಆ ಚಿಕ್ಕಹುಡುಗನಿಗೆ ಹೆಂಗಸರು ಸ್ನಾನಮಾಡುವುದನ್ನು ನೋಡಿದರೆ ಏನುತಪ್ಪು ಎಂಬುದು ಗೊತ್ತಾಗಿರಲಿಲ್ಲ. ಅವನ ಪ್ರಶ್ನೆಗೆ ಉತ್ತರವನ್ನು ಆ ಮುದುಕಿಯು ಹೇಳಲಾರದೆ ಇನ್ನಷ್ಟು ಕೂಗಾಡಿಬಿಟ್ಟಳು. ಅಲ್ಲಿದ್ದ ಹೆಂಗಸರೆಲ್ಲರಿಗೂ ಸಿಟ್ಟುಬಂತು. ಚಿಕ್ಕಹುಡುಗರು ತಮ್ಮತಾಯಿ ತಂದೆಗಳಿಗೆ ಈ ವಿಷಯ ತಿಳಿದೀ

ತೆಂದು ಓಡಿಹೋದರು. ಗದಾಧರಮಾತ್ರ ಮನಸ್ಸಿನಲ್ಲಿ ಏನೇನೋ ಯೋಚಿಸುತ್ತ ನಿಂತಿದ್ದನು. ಆಮೇಲೆ ಎರಡುಮೂರುದಿನ ಒಂದು ಮರದ ಹಿಂದಿನಿಂದ ಹೆಂಗಸರು ಸ್ನಾನಮಾಡುತ್ತಿದ್ದದ್ದನ್ನು ನೋಡಿದನು. ತನಗೆ ಏನೂ ಆಗಲಿಲ್ಲ. ಆಗ ತನ್ನನ್ನು ಹಿಂದೆ ಬೈದಿದ್ದ ಮುದುಕಿ ಬರುವುದನ್ನು ಕಾದಿದ್ದು ಆಕೆಯನ್ನು ಕಂಡೊಡನೆಯೇ "ಮೊನ್ನೆದಿನ ನಾಲ್ಕುಜನ ಸ್ನಾನಮಾಡುತ್ತಿದ್ದ ಹೆಂಗಸರನ್ನು ನೋಡಿದೆ. ನಿನ್ನೆದಿನ ಆರುಜನರನ್ನು ನೋಡಿದೆ. ಈದಿನ ಎಂಟು ಜನರನ್ನು ನೋಡಿದೆ. ನನಗೇನೂ ಆಗಲೇ ಇಲ್ಲವಲ್ಲ!" ಎಂದು ಕೇಳಿದನು. ಆ ಮುದುಕಿಯು ಇದನ್ನು ಕೇಳಿ ನಕ್ಕು ಚಂದ್ರಾದೇವಿಗೆ ಈ ವರ್ತಮಾನವನ್ನು ತಿಳಿಸಿದಳು. ಚಂದ್ರಾದೇವಿಯು ಗದಾಧರನನ್ನು ಹತ್ತಿರಕ್ಕೆ ಕರೆದು ಕೂರಿಸಿಕೊಂಡು "ಮಗು, ನೀನುಹೀಗೆಲ್ಲ ಮಾಡಿದರೆ ನಿನಗೇನೂ ಆಗುವುದಿಲ್ಲ. ಆದರೆ ಹೆಂಗಸರಿಗೆ ತುಂಬ ಅವಮಾನವಾಗುತ್ತೆ. ಅವರೆಲ್ಲರೂ ನನ್ನಹಾಗೆ. ಅವರಿಗೆ ಅವಮಾನಮಾಡಿದರೆ ನನಗೆ ಅವಮಾನ ಮಾಡಿದಂತೆಯೇ ಆಗುತ್ತದೆ. ಆದ್ದರಿಂದ ಇನ್ನುಮೇಲೆ ಯಾವಾಗಲೂ ಹೀಗೆಮಾಡಬೇಡ. ಅವರ ಮನಸ್ಸನ್ನೂ ನನ್ನಮನಸ್ಸನ್ನೂ ನೋಯಿಸಿದ್ದರಿಂದ ನಿನಗಾಗುವುದೇನು?" ಎಂದು ತಿಳಿಯ ಹೇಳಿದಳು. ಗದಾಧರನು ಅದನ್ನು ಗ್ರಹಿಸಿ ಪುನಃ ಹಾಗೆಮಾಡುವುದನ್ನು ಬಿಟ್ಟುಬಿಟ್ಟನು.

ಪಾಠಶಾಲೆಗೆ ಹೋಗಿಬರುತ್ತ ಓದುವುದನ್ನೂ ಬರೆಯುವುದನ್ನೂ ತಕ್ಕಮಟ್ಟಿಗೆ ಕಲಿತುಕೊಂಡನು. ಗಣಿತದಮೇಲೆಮಾತ್ರ ಸ್ವಲ್ಪವೂ ಗಮನ ಕೊಡಲಿಲ್ಲ. ಕೊನೆಯುವರೆಗೂ ಇದರಲ್ಲಿ ಅಭಿರುಚಿ ಹುಟ್ಟಲೇ ಇಲ್ಲ. ಪಾಠಶಾಲೆಗೆ ಸರಿಯಾಗಿ ಹೋಗುತ್ತಲೂ ಇರಲಿಲ್ಲ. ದೇವ ದೇವಿಯರ ಮೂರ್ತಿಗಳನ್ನು ಮಾಡುವುದರಲ್ಲಿ ಅವನಿಗೆ ತುಂಬ ಇಷ್ಟವಿತ್ತು. ಒಂದೊಂದು ದಿನ ಕುಂಬಾರರ ಮನೆಗೆ ಹೋಗಿ ಅಲ್ಲಿ ವಿಗ್ರಹಗಳನ್ನು ಮಾಡುತ್ತ ಕುಳಿತುಬಿಡು

ತ್ತಿದ್ದನು. ಹೀಗೆ ರಾಮಾಯಣ ಮಹಾಭಾರತ ಮುಂತಾದ ಪುಣ್ಯ ಕಥೆಗಳನ್ನು ಕಲಿತಿದ್ದುದಲ್ಲದೆ, ಅವುಗಳನ್ನು ಯಾವರೀತಿಯಲ್ಲಿ ಹೇಳಿದರೆ ಕೇಳುವವರ ಮನಸ್ಸಿಗೆ ಹಿಡಿಯುವುದೆಂಬುದನ್ನು ಲಕ್ಷ್ಯವಿಟ್ಟು ತಿಳಿದುಕೊಳ್ಳುತ್ತಿದ್ದನು. ಅವನ ಅಪೂರ್ವವಾದ ಜ್ಞಾಪಕಶಕ್ತಿಯೂ ಸೂಕ್ಷ್ಮ ಬುದ್ಧಿಯೂ ಇದರಲ್ಲಿ ಬಹಳ ಸಹಕಾರಿಗಳಾದುವು. ಪಾಠಶಾಲೆಗೆ ಹೋದಾಗಲೂ ಅನೇಕವೇಳೆ ಪಾಠಗಳಿಗೆ ಗಮನವನ್ನೇ ಕೊಡುತ್ತಿರಲಿಲ್ಲ. ಮತ್ತೊಬ್ಬರು ಆಡಿದಹಾಗೆ ಆಡುವುದು, ಮಾಡಿದ ಹಾಗೆ ಮಾಡುವುದು, ಎಂಥವರನ್ನೆ ಬೇಕಾದರೂ ಅನುಕರಣ ಮಾಡಿ ಹಾಸ್ಯ ಮಾಡುವುದು ಇವುಗಳಲ್ಲಿ ಅದ್ಭುತ ಶಕ್ತಿ ಇತ್ತು. ಹೀಗೆ ತಾನು ಸದಾ ಸಂತೋಷಚಿತ್ತನಾಗಿರುತ್ತಿದ್ದನಲ್ಲದೆ ಮಿಕ್ಕ ಹುಡುಗರು ಇವನ ಜೊತೆಯಲ್ಲಿದ್ದಾಗ ಬೇರೊಂದು ಚಿಂತೆಯಿಲ್ಲದೆ ಸುಖವಾಗಿರುತ್ತಿದ್ದರು.

ಹೀಗಿರಲು ಗದಾಧರನ ವಿಚಾರದಲ್ಲಿ ಅವನ ತಾಯಿತಂದೆಗಳಿಗೆ ಚಿಂತೆಗೆ ಕಾರಣವಾಯಿತು. ಅವನು ಹುಟ್ಟಿದಂದಿನಿಂದ ಇಂದಿನವರೆಗೆ ಎಂದೂ ಅಸ್ವಸ್ಥನಾಗಿದ್ದುದೇ ಇಲ್ಲ. ಇಂಥ ಆರೋಗ್ಯಭಾಗ್ಯವಿದ್ದುದರಿಂದ ಗಗನಚಾರಿಯಾದ ಪಕ್ಷಿಯಂತೆ ಸಂತೋಷವಾಗಿ ಆಡಿಕೊಂಡಿದ್ದನು. ದೇಹದ ಮೇಲೆ ಗಮನ ಹೋಗದಿರುವಿಕೆಯೇ ಸಂಪೂರ್ಣ ಆರೋಗ್ಯಸ್ಥಿತಿಯ ಲಕ್ಷಣವೆಂದು ಸಮರ್ಥರಾದ ವೈದ್ಯರು ಹೇಳಿದ್ದಾರೆ. ಗದಾಧರನಿಗೆ ಇಂಥ ಆರೋಗ್ಯಸ್ಥಿತಿ ಇತ್ತು. ಅದರಲ್ಲಿಯೂ ಅವನಿಗೆ ಸ್ವಾಭಾವಿಕವಾಗಿ ಬಂದ ಏಕಾಗ್ರಚಿತ್ತವು ಯಾವುದಾದರೂ ಒಂದು ಪದಾರ್ಥದಲ್ಲಿ ನಟ್ಟುಹೋದರೆ, ಆಗ ದೇಹದ ಮೇಲಣ ಪ್ರಜ್ಞೆಯು ಸಂಪೂರ್ಣವಾಗಿ ಲೋಪ ಹೊಂದಿ ಕೇವಲ "ಭಾವಮಯ" ನಾಗುತ್ತಿದ್ದನು. ಮಂದಮಾರುತನಿಂದ ಆಂದೋಳಿತವಾಗಿ ಆನಂದದಲ್ಲಿ ತಲೆತೂಗುತ್ತಿರುವ ಪೈರುಪಚ್ಚೆಗಳಿಂದ ಕೂಡಿದ, ಹಸುರಾದ, ವಿಸ್ತಾರವಾದ ಮೈದಾನ, ನದಿಯ ಅವಿರಳವಾದ ಅನಂತವಾದ ಪ್ರವಾಹ, ಪಕ್ಷಿಗಳ ಅವ್ಯಕ್ತ ಮಧುರ

ವಾದ ಕಲಗಾನ. ಎಲ್ಲದರ ಮೇಲೂ ಇರುವ ಸುನೀಲವಾದ ಅಂತರಿಕ್ಷ, ಮತ್ತು ಅದರ ಮಧ್ಯದಲ್ಲಿ ಕ್ಷಣಕ್ಷಣಕ್ಕೂ ಬದಲಾಯಿಸುತ್ತಿರುವ ಮೇಘರಾಶಿಯು ಮಾಯಾರಾಜ್ಯ ಮುಂತಾದ ಸೃಷ್ಟಿ ಸೌಂದರ್ಯ ವಿಶೇಷಗಳು ಅವನನ್ನು ಭಾವರಾಜ್ಯದಲ್ಲಿ ಎಲ್ಲಿಗೋ ತೆಗೆದುಕೊಂಡು ಹೋಗಿ ಬಿಡುತ್ತಿದ್ದುವು. ಮುಂದೆ ಹೇಳುವ ವೃತ್ತಾಂತವೂ ಅವನ ಇಂಥ "ಭಾವಪ್ರವಣತೆ" ಯಿಂದಲೇ ನಡೆದದ್ದು. ಒಂದು ದಿನ ಮೈದಾನದಲ್ಲಿ ಓಡಾಡುತ್ತಿರುವಾಗ ಗದಾಧರನು, ಶುಭ್ರವಾದ ರೆಕ್ಕೆಗಳನ್ನು ಬಿಚ್ಚಿ ನಿರಾತಂಕವಾಗಿ ಅಂತರಿಕ್ಷದಲ್ಲಿ ಹಾರಾಡುತ್ತಿದ್ದ ಕೆಲವು ಸುಂದರವಾದ ಬಲಾಕಾ ಪಕ್ಷಿಗಳನ್ನು ನೋಡಿ ಆನಂದದಲ್ಲಿ ತನ್ಮಯನಾಗಿಹೋದನು. ದೇಹದ ಮೇಲಣ ಪ್ರಜ್ಞೆಯೇ ತಪ್ಪಿ ಕೆಳಗೆ ಬೀಳಲು ಜೊತೆಯಲ್ಲಿದ್ದ ಹುಡುಗರು ಅವನನ್ನು ಹೊತ್ತುಕೊಂಡು ಹೋಗಿ ಅವನ ತಾಯಿತಂದೆಗಳಿಗೆ ಈ ವರ್ತಮಾನವನ್ನು ತಿಳಿಸಿದರು. ಖುದಿರಾಮನೂ ಚಂದ್ರಾದೇವಿಯೂ ಇದನ್ನು ಕೇಳಿ ವಿಧವಿಧವಾಗಿ ಚಿಂತಿಸಿ ಕೊನೆಗೆ ಮೂರ್ಛೆಹೋಗಿರಬೇಕೆಂದು ನಿಶ್ಚಯಮಾಡಿ ಅದಕ್ಕೆ ತಕ್ಕ ಔಷಧವನ್ನು ಕೊಡಿಸಿದ್ದಲ್ಲದೆ ಶಾಂತಿ ಜಪ ಮುಂತಾದ್ದನ್ನು ಮಾಡಿಸಿದರು. ಗದಾಧರನು ಮಾತ್ರ ಈ ವಿಷಯವನ್ನು ಆಗಾಗ್ಗೆ ನೆನೆಸಿಕೊಂಡು ತನ್ನ ಮನಸ್ಸು ಆಗ ಒಂದು ವಿಚಿತ್ರವಾದ ಭಾವದಲ್ಲಿ ಲೀನವಾಗಿಹೋಗಿತ್ತೆಂದೂ ತಾನು ಹೊರಗಿನ ಪದಾರ್ಥಗಳನ್ನು ನೋಡುತ್ತಿರಲಿಲ್ಲದಿದ್ದರೂ ಒಳಗೆ ಪ್ರಜ್ಞೆ ಇತ್ತೆಂದೂ ಒಂದು ವಿಧವಾದ ಅಪೂರ್ವವಾದ ಆನಂದವುಂಟಾಗಿತ್ತೆಂದೂ ಹೇಳುತ್ತಿದ್ದನು.

ಇಷ್ಟು ಹೊತ್ತಿಗೆ ಗದಾಧರನಿಗೆ ಆರುವರ್ಷತುಂಬಿ ಏಳನೆಯ ವರ್ಷ ನಡೆಯುತ್ತಿತ್ತು. ರಾಮಚಂದ್ರನು ಸೋದರಮಾವನಾದ ಖುದಿರಾಮನನ್ನು ದುರ್ಗೋತ್ಸವಕ್ಕೆ (ನವರಾತ್ರಿಯಪೂಜೆ) ಬರಬೇಕೆಂದು ಹೇಳಿಕಳುಹಿಸಿದನು. ಪ್ರತಿವರ್ಷವೂ ಖುದಿರಾಮನು ಅಲ್ಲಿಗೆ ಹೋಗಿಬರುವ ಪದ್ಧತಿಯಿತ್ತು. ಈಸಾರಿ ಆತನಿಗೆ ದೇಹ

ವಲ್ಲಿ ಆರೋಗ್ಯ ವಿರಲಿಲ್ಲ. ಆದರೂ "ಶರೀರವು ದಿನದಿನಕ್ಕೆ ದುರ್ಬಲವಾಗುತ್ತಿದೆ. ನಾನು ಈ ವರ್ಷ ಹೋಗದೆಹೋದರೆ ಮತ್ತೆ ಹೋಗಿ ನೋಡುವೆನೆಂಬ ನಂಬುಗೆ ಏನು?" ಎಂದಂದು ಕೊಂಡು ರಾಮಕುಮಾರನು ಚಿಂತೆಯಲ್ಲಿ ಹೊರಟನು. ಅಲ್ಲಿ ಹೋದಕೂಡಲೆ ರೋಗವುಹೆಚ್ಚಿ ದಶಮಿಯದಿನದ ಹೊತ್ತಿಗೆ ನಿಶ್ಶಕ್ತಿ ಯಾಗಿ ಮಾತಾಡುವುದು ಕಷ್ಟವಾಯಿತು. ಮಧ್ಯಾಹ್ನದ ಹೊತ್ತಿಗೆ ರಾಮಚಂದ್ರನು ಬೇಗಬೇಗ ಪೂಜೆಯನ್ನು ಮುಗಿಸಿಕೊಂಡು ಪ್ರತಿಮೆ ಯನ್ನು ವಿಸರ್ಜನೆಮಾಡಿ ಬಂದನು. ಅಷ್ಟುಹೊತ್ತಿಗಾಗಲೆ ಖುದಿ ರಾಮನಿಗೆ ಅಂತ್ಯಕಾಲವು ಪ್ರಾಪ್ತವಾಗಿತ್ತು. ಬಹಳ ಹೊತ್ತಿ ನಿಂದಲೂ ಒಂದುಮಾತನ್ನೂ ಆಡದೆ ಜ್ಞಾನವಿಲ್ಲದೆ ಬಿದ್ದಿದ್ದ ಮಾವ ನನ್ನು ನೋಡಿ ರಾಮಚಂದ್ರನು ಕಣ್ಣೀರ ಸುರಿಸುತ್ತಾ "ಮಾವ! ನೀನು ಯಾವಾಗಲೂ ಮಾತುಮಾತಿಗೂ ರಘುವೀರ ರಘುವೀರ ಎನ್ನುತ್ತಿದ್ದೆ. ಈಗಲೇಕೆ ಅವನನ್ನು ಸ್ಮರಿಸಿಕೊಳ್ಳುವುದಿಲ್ಲ?" ಎಂದನು. ರಘುವೀರನಮಾತು ಕಿವಿಗೆಬಿದ್ದಕೂಡಲೆ ಖುದಿರಾಮನಿಗೆ ಚೈತನ್ಯ ಬಂದು ಮೆಲ್ಲಗೆ ಕಂಪಿತವಾದ ಸ್ವರದಿಂದ "ಯಾರು, ರಾಮಚಂದ್ರನೆ? ಪ್ರತಿಮೆಯ ವಿಸರ್ಜನೆ ಮಾಡಿಯಾಯಿತೆ? ಸ್ವಲ್ಪ ಎಬ್ಬಿಸಿ ಕೂರಿಸು" ಎಂದನು. ಅದರಂತೆ ಉಪಾಯವಾಗಿ ಎಬ್ಬಿಸಿ ಕೂರಿ ಸಲು ಮೂರುಸಾರಿ ಗಂಭೀರ ಸ್ವರದಿಂದ ರಘುವೀರನ ನಾಮೋ ಚ್ಚಾರಣೆಮಾಡಿ ಖುದಿರಾಮನು ದೇಹತ್ಯಾಗ ಮಾಡಿದನು. ಸಿಂಧು ಬಿಂದು ಸಿಂಧುವಿನೊಡನೆ ಮಿಳಿತವಾಗಿ ಹೋಯಿತು. ಮರುದಿನವೇ ಈ ವರ್ತಮಾನವು ಕಾಮಾರಪುಕುರಕ್ಕೆ ತಲಪಿ ಆ ಆನಂದಧಾಮ ವನ್ನು ನಿರಾನಂದದಿಂದ ತುಂಬಿತು.

ಚಂದ್ರಾದೇವಿಯ ದುಃಖಕ್ಕೆಪಾರವಿರಲಿಲ್ಲ. ಅವಳಭಾಗಕ್ಕೆ ಪ್ರಪಂಚವೆಲ್ಲಾ ಶೂನ್ಯವಾಗಿ ಕಂಡಿತು. ಆದ್ದರಿಂದ ಶ್ರೀ ಶ್ರೀ ರಘು ವೀರನನ್ನು ಶರಣುಹೊಕ್ಕು ಸಂಸಾರದ ಚಿಂತೆಯನ್ನು ಬಿಟ್ಟುಬಿಡ ಬೇಕೆಂದು ಮನಸ್ಸನ್ನುಮಾಡಿದಳು. ಆದರೆ ಆಕೆಯು ಸಂಸಾರ

ವನ್ನು ಬಿಡಬೇಕೆಂದರೂ ಸಂಸಾರವು ಆಕೆಯನ್ನು ಹೇಗೆ ಬಿಟ್ಟೀತು? ಗದಾಧರನಿಗೆ ಆಗ ಏಳುವರ್ಷ. ಈಚೆಗೆ ಹುಟ್ಟಿದ ಸರ್ವಮಂಗಳೆ ಎಂಬ ಹುಡುಗಿಗೆ ನಾಲ್ಕುವರ್ಷ. ಇವರಯೋಚನೆ ಹೇಗೆ ತಪ್ಪೀತು? ಆದ್ದರಿಂದ ಚಂದ್ರಾದೇವಿಯು ರಘುವೀರನ ಧ್ಯಾನದಲ್ಲಿಯೇ ಹೇಗೋ ಸಂಸಾರದ ಯೋಗಕ್ಷೇಮವನ್ನೆಲ್ಲಾ ನೋಡಿಕೊಳ್ಳುತ್ತಾ ಕಾಲಕಳೆಯ ಬೇಕಾಯಿತು. ಗದಾಧರನು ಈಗಲೂ ಎಂದಿನಂತೆ ಸಂತೋಷಚಿತ್ತನಾಗಿದ್ದಂತೆ ಕಂಡುಬಂದರೂ ಕ್ರಮೇಣ ಚಿಂತಾ ಶೀಲನಾದನು. ಈ ಸಮಯದಲ್ಲಿಯೇ ಎಷ್ಟೋಜನರು ಆ ಗ್ರಾಮದ ಹತ್ತಿರಇದ್ದ ಸ್ಮಶಾನ, ಮಾಣಿಕರಾಜನ ಮಾವಿನತೋಟ ಮುಂತಾದ ನಿರ್ಜನ ಪ್ರದೇಶದಲ್ಲಿ ಏನೋ ಯೋಚನೆಮಾಡುತ್ತಾ ಅವನು ತಿರುಗುತ್ತಿದ್ದದ್ದನ್ನು ನೋಡುತ್ತಿದ್ದರು. ತಾಯಿಯ ದುಃಖವನ್ನು ನೋಡಿ ಆಕೆಯಲ್ಲಿ ಪ್ರೀತಿಯು ಇನ್ನೂ ಹೆಚ್ಚಾಯಿತು. ಮನೆ ಗೆಲಸ ಗಳಲ್ಲಿಯೂ ಪೂಜೆಪುರಸ್ಕಾರಗಳಲ್ಲಿಯೂ ಆಕೆಗೆ ಸಹಾಯಕ ನಾಗಿದ್ದು ಯಾವಾಗಲೂ ಆಕೆಗೆ ಸಮಾಧಾನವಾಗುವಂತೆ ವರ್ತಿಸು ತ್ತಿದ್ದನು. ಯಾವುದರಲ್ಲಿಯೂ ಮೊದಲಿನಂತೆ ಹಟ ಮಾಡುತ್ತಿರ ಲಿಲ್ಲ. ಏಕೆಂದರೆ ತನಗೆ ಬೇಕಾದದ್ದನ್ನು ಚಂದ್ರಾದೇವಿಯು ಮಾಡಿ ಕೊಡಲಾರದೆಹೋದರೆ ಹಿಂದಿನ ಸ್ಥಿತಿಯನ್ನು ನೆನಸಿಕೊಂಡು ಅಳುತ್ತಿದ್ದಳು. ಇದನ್ನುಕಂಡರೆ ಅವನಿಗೆ ಬಹಳವಾಗಿ ದುಃಖ ವಾಗುತ್ತಿತ್ತು. ಮುಖ್ಯವಾಗಿ ಪಿತೃವಿಯೋಗದಿಂದ ತಾಯಿಯನ್ನು ಎಂದಿಗೂ ಕೈಬಿಡಬಾರದೆಂದೂ ಸರ್ವವಿಧದಲ್ಲಿಯೂ ಅವಳ ಯೋಗ ಕ್ಷೇಮವನ್ನು ನೋಡಿಕೊಳ್ಳಬೇಕೆಂದೂ ಮನಸ್ಸಿನಲ್ಲಿ ದೃಢಸಂಕಲ್ಪ ವುಂಟಾಯಿತು.

ಮನಸ್ಸುಸ್ವಲ್ಪ ಸಮಾಧಾನಕ್ಕೆ ಬಂದಮೇಲೆ ಮತ್ತೆ ಪಾಠ ಶಾಲೆಗೆ ಹೋಗಲು ಮೊದಲು ಮಾಡಿದನು. ಆದರೆ ಪುರಾಣ ಪುಣ್ಯಕಥೆಗಳನ್ನೂ ಭಜನೆ ಕೀರ್ತನೆಗಳನ್ನೂ ಕೇಳುವುದು ದೇವದೇವಿಯರ ವಿಗ್ರಹಗಳನ್ನೂ ಮಾಡುವುದು ಇವುಗಳಮೇಲೆ

ಅವನಿಗಿದ್ದ ಅಭಿಲಾಷೆಯು ಹೆಚ್ಚಾಯಿತು. ಈ ಕೆಲಸದಲ್ಲಿದ್ದಾಗ ತಂದೆಸತ್ತ ದುಃಖವೂ ಬಹಳಮಟ್ಟಿಗೆ ಕಡಿಮೆ ಯಾಗುತ್ತಿದ್ದದ್ದರಿಂದಲೇ ಅವುಗಳಲ್ಲಿ ಹೆಚ್ಚು ಅಭ್ಯಾಸಕ್ಕೂ ಆಸಕ್ತಿಗೂ ಅವಕಾಶವಾಯಿತೆಂದು ತೋರುತ್ತದೆ.

ಗದಾಧರನ ವಿಚಿತ್ರವಾದ ಸ್ವಭಾವವು ಈ ಸಮಯದಲ್ಲಿ ಇನ್ನೊಂದು ವಿಧವಾಗಿ ಪ್ರಕಟವಾಯಿತು. ಕಾಮಾರಪುಕುರದ ಹತ್ತಿರ ಜಗನ್ನಾಥಕ್ಕೆ ಹೋಗುವ ದಾರಿಯಿತ್ತು. ಇಲ್ಲಿ ಜಮೀದಾರನಾದ ಧರ್ಮದಾಸ ಲಾಹಾಬಾಬುವು ಒಂದುಛತ್ರವನ್ನು ಕಟ್ಟಿಸಿದ್ದನಾದಕಾರಣ ಅನೇಕ ಯಾತ್ರಿಕರೂ ಸಾಧುಸನ್ಯಾಸಿಗಳೂ ಇಲ್ಲಿ ಇಳಿದುಕೊಳ್ಳುತ್ತಿದ್ದರು. ಗದಾಧರನಿಗೆ ಸಂಸಾರವು ಅನಿತ್ಯವೆಂದು ಆಗಲೇ ಕಿವಿಗೆಬಿದ್ದಿತ್ತು. ತಂದೆಯಸಾವನ್ನು ನೋಡಿ ಅದು ಇನ್ನಷ್ಟು ಮಂದಟ್ಟಾಯಿತು. ಸಾಧು ಸಂಗದಿಂದಲೇ ಮನುಷ್ಯನು ಕೃತಾರ್ಥನಾಗಿ ಶಾಂತಿಯನ್ನು ಪಡೆಯುವನೆಂದು ಪುರಾಣಗಳಲ್ಲಿ ಕೇಳಿದ್ದರಿಂದ ಈ ಸಾಧುಗಳನ್ನು ನೋಡುವ ಉದ್ದೇಶ್ಯವಾಗಿ ಛತ್ರಕ್ಕೆ ಹೋಗಿಬರುತ್ತ ಅವರ ವೈರಾಗ್ಯ ಭಕ್ತಿ ಇವೆಲ್ಲವನ್ನು ಮೆಚ್ಚುತ್ತಬಂದನು. ಮೆಲ್ಲಗೆ ಅವರ ಸಹವಾಸವಾಯಿತು. ಅವರೂ ಇವನನ್ನು ಕಂಡು ಪ್ರೀತಿಸುತ್ತಾ ಅವನಿಗೆ ತಾವು ಮಾಡಿದ ತಿಂಡಿತೀರ್ಥಗಳನ್ನೂ ಕೊಡುತ್ತಾ ಇದ್ದರು. ಒಂದೊಂದುದಿನ ಅವನು ಮೈಗೆಲ್ಲಾ ವಿಭೂತಿಯನ್ನು ಬಳಿದುಕೊಂಡು ಇಲ್ಲವೇ ನಾಮಗಳನ್ನಿಟ್ಟುಕೊಂಡು ಮನೆಗೆ ಬರುವನು, ಅಥವಾ ಉಟ್ಟ ಪಂಚೆಯನ್ನು ಹರಿದು ಕೌಪೀನವನ್ನು ಹಾಕಿಕೊಂಡು ಬಂದು "ಅಮ್ಮಾ ಆ ಸಾಧು ನನಗೆ ಹೇಗೆಪಂಚೆ ಉಡಿಸಿದ್ದಾನೆ ನೋಡಿದೆಯಾ?" ಎಂದು ಕೇಳುವನು. ಇದನ್ನು ನೋಡಿ ಚಂದ್ರಾದೇವಿಗೆ ತನ್ನಮುದ್ದು ಮಗುವನ್ನು ಯಾವ ವೈರಾಗಿಯು ಎಳೆದುಕೊಂಡು ಹೋಗಿ ಬಿಡುವನೋ ಎಂಬ ಚಿಂತೆಹತ್ತಿತು. ಈ ಸಮಯದಲ್ಲಿಯೇ ಒಂದುದಿನ ಆ ಊರಿನ

ಹತ್ತಿರವಿದ್ದ ವಿಶಾಲಾಕ್ಷಿಯಗುಡಿಗೆ ಕೆಲವರು ಹೆಂಗಸರು ಹೋಗುತ್ತಿರಲು ಗದಾಧರನೂ ಹೊರಟನು. ದಾರಿಯಲ್ಲಿ ಅವರು ಹೇಳುತ್ತಿದ್ದ ದೇವಿಯಮೇಲಣ ಹಾಡುಗಳನ್ನು ಕೇಳುತ್ತಾ ಕೇಳುತ್ತಾ ಅವನ ಅಂಗಾಂಗಗಳೆಲ್ಲವೂ ನಿಶ್ಚಲವಾದುವು. ಕಣ್ಣುಗಳಲ್ಲಿ ದಳದಳನೆ ನೀರುಸುರಿಯುವುದಕ್ಕೆ ಆರಂಭವಾಯಿತು. ಜೊತೆಯಲ್ಲಿದ್ದವರಿಗೆ ಗಾಬರಿಯಾದರೂ ಅವನುಮಾತ್ರ "ದೇವಿಯಧ್ಯಾನ ಮಾಡುತ್ತ ಮಾಡುತ್ತ ಅವಳಪಾದ ಪದ್ಮಗಳಲ್ಲಿ ಮನಸ್ಸು ಲಯವಾಗಿ ಹಾಗಾಯಿತು" ಎಂದು ಹೇಳಿದನು.

ಗದಾಧರನಿಗೆ ಆಗಲೇ ಒಂಬತ್ತು ವರ್ಷ ತುಂಬಿಹೋದದ್ದನ್ನುನೋಡಿ ರಾಮಕುಮಾರನು ಅವನಿಗೆ ಉಪನಯನ ಮಾಡಬೇಕೆಂದು ನಿಶ್ಚಯಿಸಿ ಅದಕ್ಕೆ ಬೇಕಾದ ಏರ್ಪಾಡು ಮಾಡುತ್ತಿದ್ದನು. ಇವರ ಮನೆಯಹತ್ತಿರ ಧನಿ ಎಂಬ ಹೆಂಗಸು ಇದ್ದಳೆಂದು ಹಿಂದೆಯೇ ಹೇಳಿದ್ದೇವೆ. ಆಕೆಯು ಕಮ್ಮಾರಜಾತಿಯವಳು. ಆದರೆ ಗದಾಧರನು ಹುಟ್ಟಿದಂದಿನಿಂದ ಅವನನ್ನು ಎತ್ತಿ ಆಡಿಸಿ ಅವನಿಗೆ ಬಹು ಬೇಕಾದವಳಾಗಿದ್ದಳು. ಒಂದುದಿವಸ ತಾನು ಗದಾಧರನ ಉಪನಯನ ಕಾಲದಲ್ಲಿ ಅವನಿಗೆ ಭಿಕ್ಷಾಮಾತೆಯಾಗಿ ತಾನು ಮೊದಲು ಭಿಕ್ಷವನ್ನು ಹಾಕಬೇಕೆಂದು ಕೇಳಿಕೊಂಡಿದ್ದಳು. ಗದಾಧರನು ಅವಳ ಅಕೃತ್ರಿಮವಾದ ವಿಶ್ವಾಸಕ್ಕೆಮೆಚ್ಚಿ ಒಪ್ಪಿಕೊಂಡಿದ್ದನು. ಧನಿಯೂ ಅವನ ಮಾತಿನಲ್ಲಿ ನಂಬುಗೆಯಿಟ್ಟು ಕಾಸಿಗೆಕಾಸು ಗಂಟು ಹಾಕಿ ಈ ಸಮಯವನ್ನೇ ಎದುರುನೋಡುತ್ತಿದ್ದಳು. ಉಪನಯನ ನಿಶ್ಚಯವಾದದ್ದನ್ನು ನೋಡಿ ಗದಾಧರನೂ ರಾಮಕುಮಾರನೊಡನೆ ಈ ಪ್ರಸ್ತಾಪವನ್ನೆತ್ತಿದನು. ಇದು ವೈದಿಕಾಚಾರಕ್ಕೂ ಸತ್ಸಂಪ್ರದಾಯಕ್ಕೂ ವಿರೋಧವಾಗಿದ್ದದ್ದರಿಂದ ರಾಮಕುಮಾರನು ಒಪ್ಪಲಿಲ್ಲ. ಗದಾಧರನು ಬಿಡಲಿಲ್ಲ. ಅವನು "ನಾನು ಮಿಥ್ಯಾವಾದಿಯಾಗುವೆನಲ್ಲವೆ? ಸುಳ್ಳುಹೇಳುವವನು ಉಪನಯನ ಮಾಡಿಕೊಳ್ಳುವುದಕ್ಕೆ ಎಂದಿಗೂ ಯೋಗ್ಯ

ನಲ್ಲ" ಎಂದು ಹೇಳಿ ಹಟಹಿಡಿದನು. ಕೊನೆಗೆ ಅವರ ತಂದೆಗೆ ಸ್ನೇಹಿತನಾಗಿದ್ದ ಧರ್ಮದಾಸ ಲಾಹಾಬಾಬುವಿನ ಹೇಳಿಕೆಯಂತೆ ರಾಮಕುಮಾರನೇ ಸೋಲಬೇಕಾಯಿತು. ಯಥಾಕಾಲದಲ್ಲಿ ಉಪನಯನವು ನಡೆದುಹೋಯಿತು. ಧನಿಯು ಭಿಕ್ಷಾಮಾತೆಯಾಗಿ ಕೃತಕೃತ್ಯಳಾದಳು.

ಉಪನಯನವಾದ ಸ್ವಲ್ಪಕಾಲದಲ್ಲಿಯೇ ಗದಾಧರನ ಅಸಾಧಾರಣ ಬುದ್ಧಿಶಕ್ತಿಯನ್ನು ತೋರಿಸುವ ಒಂದು ಘಟನೆಯು ನಡೆಯಿತು. ಮೇಲೆಹೇಳಿದ ಧರ್ಮದಾಸ ಬಾಬುವಿನ ಮನೆಯಲ್ಲಿ ಯಾವುದೋ ಒಂದು ವಿಶೇಷದಿವಸ ಅನೇಕ ಪಂಡಿತರು ಬಂದು ಸೇರಿದ್ದರು. ಶಾಸ್ತ್ರವಿಷಯವಾದ ಚರ್ಚೆಗೆ ಆರಂಭವಾಯಿತು. ಎಷ್ಟು ಚರ್ಚೆಮಾಡಿದರೂ ಯಾವವಿಧದಲ್ಲಿಯೂ ವ್ಯವಸ್ಥೆಯಾಗಲಿಲ್ಲ. ಗದಾಧರನಂತೆ ಅಲ್ಲಿ ಅನೇಕ ಹುಡುಗರು ಬಂದು ನೆರೆದಿದ್ದರು. ಅವರು ಆಟಪಾಟಗಳನ್ನು ಆಡುತ್ತಲೋ ಪಂಡಿತರನ್ನು ಅಣಕಿಸುತ್ತಲೋ ಇಲ್ಲವೇ ಪಿಳಪಿಳನೆ ಕಣ್ಣುಬಿಟ್ಟುಕೊಂಡೋ ಕುಳಿತಿದ್ದರು. ಆದರೆ ಗದಾಧರನುಮಾತ್ರ ಶಾಸ್ತ್ರವಿಚಾರಕ್ಕೆ ಗಮನಕೊಟ್ಟು ಕೇಳುತ್ತಿದ್ದು ಎಲ್ಲವನ್ನೂ ಗ್ರಹಿಸಿ ಅವರ ವಾದಾನುವಾದವು ಕೊನೆಮುಟ್ಟದಿರಲು, ತನಗೆ ತೋರಿದ ಒಂದು ತೀರ್ಮಾನವನ್ನು ಹೇಳಿದನು. ಇದು ಕೇವಲ ತೃಪ್ತಿಕರವಾಗಿದ್ದದ್ದರಿಂದ ಪಂಡಿತರೆಲ್ಲರೂ ಆಶ್ಚರ್ಯಪಟ್ಟು ಖಂಡಿತವಾಗಿಯೂ ಅವನು ದೇವಾಂಶಸಂಭೂತನಾಗಿರಬೇಕೆಂದು ಹೊಗಳಿ ಆಶೀರ್ವಾದಮಾಡಿ ಕಳುಹಿಸಿದರು.

ಪಾಠಕರಿಗೆ ಇದು ಶುದ್ಧಾಂಗವಾಗಿ ಅಸಂಭವವೆಂದು ತೋರಬಹುದು. ಆದರೆ ಇಂಥ ಘಟನೆಗಳು ಇತರ ಅವತಾರ ಪುರುಷರ ಜೀವನ ಚರಿತ್ರೆಗಳಲ್ಲಿಯೂ ಕಂಡುಬರುವುದು. ಏಸುಕ್ರಿಸ್ತನು ಹನ್ನೆರಡುವರ್ಷದ ಹುಡುಗನಾಗಿದ್ದಾಗ ಜೆರುಸಲೇಮಿನಲ್ಲಿ ಇದರಂತೆಯೇ ಪಂಡಿತರು ಚರ್ಚೆಮಾಡುತ್ತಿದ್ದ ಯಾವುದೋ

ಒಂದು ವಿಷಯದಲ್ಲಿ ಸಮಾಧಾನ ಹೇಳಿದಂತೆ ಬೈಬಲಿನಲ್ಲಿ ಹೇಳಿದೆ. ಹೀಗೆಯೇ ಇತರ ಅವತಾರಪುರುಷರ ಜೀವನ ಚರಿತ್ರೆಗಳಲ್ಲಿಯೂ ಈ ವಿಧವಾದ ಘಟನೆಗಳು ಕಂಡುಬರುತ್ತವೆ. ಹಾಗಾದರೆ ಅವತಾರಪುರುಷರ ಜೀವನಚರಿತ್ರೆಗಳನ್ನು ಬರೆದ ಮಹರ್ಷಿಯರೆಲ್ಲರೂ ಮಸಲತ್ತು ಮಾಡಿಕೊಂಡು ಒಂದೇವಿಧವಾದ ಸುಳ್ಳನ್ನು ಎಲ್ಲರೂ ಬರೆದಿದ್ದಾರೆಯೆ ?

ಅದೇವರ್ಷ ಶಿವರಾತ್ರಿಯ ದಿವಸ ಗದಾಧರನ ಜೊತೆಗಾರರಾದ ಕೆಲವು ಹುಡುಗರು ಆ ಗ್ರಾಮದ ಒಬ್ಬ ದೊಡ್ಡ ಮನುಷ್ಯನಾದ ಸೀಥಾನಾಥಪಾರ್ಯ್ನೆ ಎಂಬಾತನ ಮನೆಯಲ್ಲಿ ಒಂದು ಶಿವಕಥೆಯನ್ನು ಆಟವಾಡಬೇಕೆಂದು ನಿಶ್ಚಯಿಸಿ ಶಿವನವೇಷ ಹಾಕುವುದಕ್ಕೆ ಗದಾಧರನನ್ನು ಕರೆದುಕೊಂಡು ಹೋದರು. ಗದಾಧರನು ಮೊದಲು ತಾನುಮನೆಯಲ್ಲಿ ಮಾಡುತ್ತಿದ್ದ ಪೂಜೆಯನ್ನು ಬಿಟ್ಟು ಬರುವುದಕ್ಕೆ ಒಪ್ಪಲಿಲ್ಲ. ಹುಡುಗರು ಶಿವನವೇಷವನ್ನು ಹಾಕಿಕೊಂಡರೆ ಯಾವಾಗಲೂ ಶಿವನ ಧ್ಯಾನದಲ್ಲಿಯೇ ಇರಬೇಕಾಗುವುದು, ಅದು ಪೂಜೆಗಿಂತಲೂ ಯಾವವಿಧದಲ್ಲಿಯೂ ಕಡಮೆಯಾದುದಲ್ಲ ಎಂದು ಹೇಳಿ ಒಪ್ಪಿಸಿದರು. ಆದರೆ ಶಿವನ ವೇಷವನ್ನು ಹಾಕಿಕೊಂಡಕೂಡಲೆ ಗದಾಧರನು ಶಿವನಧ್ಯಾನದಲ್ಲಿ ತನ್ಮಯನಾಗಿ ಹೋಗಲು ಬಾಹ್ಯಸಂಜ್ಞೆಯು ಲೋಪವಾಗಿ ಹೋಯಿತು. ಎಷ್ಟು ಹೊತ್ತಾದರೂ ಪ್ರಜ್ಞೆ ಬರಲೇಯಿಲ್ಲ. ಅಂದಿನ ಆಟ ನಿಂತು ಹೋಯಿತು.

ಇಲ್ಲಿಂದಮುಂದಕ್ಕೆ ಈ ವಿಧವಾದ "ಭಾವಸಮಾಧಿ" ಯು ಆಗಾಗ್ಗೆ ಆಗುತ್ತಿತ್ತು. ದೇವರನ್ನು ಧ್ಯಾನ ಅಥವಾ ಭಜನೆ ಮಾಡುತ್ತಿರುವಾಗ ಮನಸ್ಸು ಅದರಲ್ಲೇ ಪೂರ್ಣವಾಗಿ ನಿಂತು ಹೋಗಲು, ಬಾಹ್ಯ ಜಗತ್ತೇ ಮರೆತು ಹೋಗುತ್ತಿತ್ತು. ಒಂದೊಂದುಸಾರಿ ಒಂದೆರಡು ದಿವಸಗಳವರೆಗೂ ಪ್ರಜ್ಞೆ ಬರುತ್ತಲೇ ಇರಲಿಲ್ಲ. ಬಂದಮೇಲೆ ಅವನಿಗೆ ಏನಾಗುತ್ತಿತ್ತೆಂದು ಕೇಳಿದರೆ

ಯಾವದೇವತೆಯ ವಿಚಾರವಾಗಿ ಧ್ಯಾನಮಾಡುತ್ತಿದ್ದನೋ ಆ ದೇವತೆಯ ವಿಷಯಕವಾದ ಒಂದು ವಿಧವಾದ ದಿವ್ಯದರ್ಶನ ವಾಗುತ್ತಿತ್ತೆಂದು ಹೇಳುವನು. ಚಂದ್ರಾದೇವಿ ಮುಂತಾದವರು ಮೊದಲುಮೊದಲು ಇದನ್ನು ಕಂಡು ಹೆದರುತ್ತಿದ್ದರೂ, ಗದಾಧರನ ದೇಹಾರೋಗ್ಯವು ಯಾವರೀತಿಯಲ್ಲಿಯೂ ಕೆಡದಿದ್ದದ್ದನ್ನು ನೋಡಿ ಆಮೇಲೆ ಅಷ್ಟು ಲಕ್ಷ್ಯಮಾಡುತ್ತಿರಲಿಲ್ಲ. ಕ್ರಮೇಣ ಈ ವಿಧವಾದ ಭಾವಸಮಾಧಿಯು ಅವನಿಗೆ ಅಭ್ಯಾಸವಾಗಿ ಇಷ್ಟಪಟ್ಟಾಗ ಬರು ವಂತಾಯಿತು.

ಇವನ ಧರ್ಮಪ್ರವೃತ್ತಿಯು ಅಭಿವೃದ್ಧಿಯಾದಂತೆ ವಿದ್ಯಾಭ್ಯಾಸ ಮಾತ್ರ ವೃದ್ಧಿಹೊಂದಲಿಲ್ಲ. ಪಂಡಿತ ಭಟ್ಟಾಚಾರ್ಯಮುಂತಾದ ಬಿರುದುಗಳನ್ನು ಪಡೆಯುವುದು ಕೇವಲ ಧನದಾಸೆಯಿಂದಾಗಲೀ ಅಥವಾ ಐಹಿಕ ಭೋಗಸುಖಗಳನ್ನು ಪಡೆಯುವುದಕ್ಕಾಗಲೀ ಸಾಧನಗಳೆಂದು ತಿಳಿದು ಲೌಕಿಕ ವಿದ್ಯಾಭ್ಯಾಸ ವಿಚಾರದಲ್ಲಿ ಅವನು ಉದಾಸೀನನಾದನು. ಅದಕ್ಕೆ ಬದಲಾಗಿ ತನ್ನ ತಂದೆಯ ವೈರಾಗ್ಯ, ದೇವಭಕ್ತಿ, ಸತ್ಯ, ಸದಾಚಾರ, ಧರ್ಮ ಪಾರಾಯಣತೆ ಇವೇ ಅವನಿಗೆ ಅಭ್ಯಾಸಕ್ಕೆ ಯೋಗ್ಯವಾಗಿ ಕಂಡುಬಂದುವು. ಪ್ರಪಂಚದಲ್ಲಿ ಎಲ್ಲರೂ ಅನಿತ್ಯವಾದ ಸಂಸಾರವನ್ನು ನಿತ್ಯವೆಂದು ಭ್ರಮೆಗೊಂಡು, ಸರ್ವದಾ ದುಃಖಸಾಗರದಲ್ಲಿ ಮುಳುಗಿರುವರೆಂದು ತಿಳಿದು ಅವನಮನಸ್ಸಿಗೆ ತುಂಬ ಕೊರತೆಯಾಯಿತು. ಪಾಠಕರು ಇದನ್ನೋದಿ "ಹನ್ನೆರಡು ವರ್ಷದ ಹುಡುಗನಿಗೆ ಇಷ್ಟು ಸೂಕ್ಷ್ಮ ಬುದ್ಧಿಯೂ, ವಿಚಾರಶಕ್ತಿಯೂ ಎಲ್ಲಿಯಾದರೂ ಇರಬಹುದೇ?" ಎಂದು ಆಕ್ಷೇಪಿಸಬಹುದು. ಸಾಧಾರಣವಾದ ಹುಡುಗರಿಗೆ ಎಂದಿಗೂ ಇರುವುದಿಲ್ಲ. ನಿಜ. ಆದರೆ ಗದಾಧರನು ಸಾಮಾನ್ಯ ಹುಡುಗನೇ? ಅವನು ಅಸಾಧಾರಣ ಬುದ್ಧಿ ಮತ್ತು ಮಾನಸಿಕ ಸಂಸ್ಕಾರಗಳೊಡನೆಯೇ ಜನ್ಮಗ್ರಹಣ ಮಾಡಿದನು. ವಯಸ್ಸು ಚಿಕ್ಕದಾದರೂ ಆ ಶಕ್ತಿ ಎಲ್ಲಿಹೋದೀತು? ಅಂತೂ ಪಾಠಶಾಲೆಗೆ

ಆಗ್ಗಾಗ್ಗೆ ಹೋಗಿಬರುತ್ತಿದ್ದು ತನ್ನ ಮಾತೃಭಾಷೆಯಲ್ಲಿ ಬರೆದ ಅಥವಾ ಅಚ್ಚುಹಾಕಿದ ಯಾವ ಪುಸ್ತಕವನ್ನು ಕೊಟ್ಟರೂ ಚೆನ್ನಾಗಿ ಓದುವ ಮಟ್ಟಿಗೆ ಕಲಿತು ಕೊಂಡನು. ಅವರಲ್ಲಿಯೂ ರಾಮಾಯಣ ಮಹಾಭಾರತಾದಿ ಗ್ರಂಥಗಳನ್ನು ಭಕ್ತಿ ಪೂರ್ವಕವಾಗಿಯೂ ಬಲುಸೊಗಸಾಗಿಯೂ ಓದಬಲ್ಲವನಾಗಿದ್ದನು. ಇದನ್ನು ಕೇಳಿ, ಆ ಗ್ರಾಮದ ಜನರು ಆನಂದದಲ್ಲಿ ಮುಳುಗಿ ಹೋಗುತ್ತಿದ್ದರು. ಆಗ್ಗಾಗ್ಗೆ ಅನೇಕರು ಅವನನ್ನು ತಮ್ಮಮನೆಗೆ ಕರೆಸಿಕೊಂಡು ಪ್ರಹ್ಲಾದ ಚರಿತ್ರೆ, ಧ್ರುವೋಪಾಖ್ಯಾನ ಮುಂತಾದ ಕಥೆಗಳನ್ನು ಓದಿಸಿ, ಕೇಳಿ, ಆನಂದಪಡುತ್ತಿದ್ದರು.

ಮತ್ತೆರಡು ವರ್ಷಗಳು ಕಳೆದುವು. ಆಗ ಗದಾಧರನ ಅಣ್ಣನಾದ ರಾಮೇಶ್ವರ, ತಂಗಿಯಾದ ಸರ್ವಮಂಗಳೆ ಇವರ ಮದುವೆಯಾಯಿತು. ಈಮಧ್ಯೆ ರಾಮಕುಮಾರನ ಹೆಂಡತಿಯು ಅಕ್ಷಯನೆಂಬ ಗಂಡುಮಗುವನ್ನು ಹೆತ್ತು ಸ್ವರ್ಗಸ್ಥಳಾದಳು. ರಾಮಕುಮಾರನ ದರಿದ್ರಸಂಸಾರದಲ್ಲಿ ಮತ್ತೆ ಶೋಕ ಬಂದು ತುಂಬಿಕೊಂಡಿತು. ಅದರ ಜೊತೆಯಲ್ಲಿಯೇ ಏನುಕಾರಣದಿಂದಲೋ ಅವನ ಆದಾಯವು ಬಹಳಮಟ್ಟಿಗೆ ಕಡಿಮೆಯಾಗಿ ಹೋಗಿ ಸಂಸಾರ ನಡೆಸುವುದೇ ಕಷ್ಟವಾಯಿತು. ಸಾಲ ಸೂಲಗಳಾದುವು. ಅದನ್ನು ತೀರಿಸುವುದಕ್ಕೆ ಯಾವಮಾರ್ಗವೂ ತೋರದೆ ರಾಮಕುಮಾರನು ಊರುಬಿಟ್ಟು ಹೊರಗಡೆ ಎಲ್ಲಿಯಾದರೂ ಹೋದರೆ ಸಂಪಾದನೆಯಾಗಬಹುದೆಂದು ಯೋಚಿಸಿದನು. ಬೇರೆ ಎಲ್ಲಿಯಾದರೂ ಹೋದರೆ ಪತ್ನೀವಿಯೋಗದಿಂದ ಉಂಟಾದ ದುಃಖವೂ ಸ್ವಲ್ಪಕಡಿಮೆಯಾಗುವ ಸಂಭವವಿತ್ತು. ಆದ್ದರಿಂದ ಅವನು ತನ್ನ ಹೆಂಡತಿಸತ್ತ ಸ್ವಲ್ಪದಿನಗಳಲ್ಲಿಯೇ ರಾಮೇಶ್ವರನಿಗೆ ಸಂಸಾರವನ್ನು ಒಪ್ಪಿಸಿ ಕಲಕತ್ತೆಗೆಹೋಗಿ ಅಲ್ಲಿ ಒಂದು ಸಣ್ಣ ಪಾಠಶಾಲೆಯನ್ನು ಹಾಕಿಕೊಂಡನು.

ಇತ್ತ ಶ್ರೀಮತಿ ಚಂದ್ರಾದೇವಿಯಮೇಲೆ ಮನೆಗೆಲಸಗಳೆಲ್ಲವೂ

ಬಿಷ್ಟುವು. ಹಾಲ ಹಸುಳೆಯಾದ ಅಕ್ಷಯನ ಯೋಗಕ್ಷೇಮವೂ ಅವಳತಲೆಗೇ ಕಟ್ಟಿತು. ರಾಮೇಶ್ವರನ ಹೆಂಡತಿ ಮನೆಗೆ ಬಂದಿದ್ದರೂ ಅವಳಿನ್ನೂ ಹುಡುಗಿಯಾಗಿದ್ದದ್ದರಿಂದ ಅವಳಿಂದ ಹೆಚ್ಚಿನ ಸಹಾಯ ವಾಗುತ್ತಿರಲಿಲ್ಲ. ಆದರೂ ಆಕೆಯು ಇವೆಲ್ಲವೂ ರಘುವೀರನ ಇಚ್ಛೆ ಯೆಂದು ಅಂದುಕೊಳ್ಳುತ್ತ ಕಾಲವನ್ನು ಕಳೆಯುತ್ತಿದ್ದಳು. ರಾಮೇ ಶ್ವರನು ಅಲ್ಪಸ್ವಲ್ಪಮಟ್ಟಿಗೆ ವಿದ್ಯೆಯನ್ನು ಕಲಿತಿದ್ದರೂ ಅವನಿಗೆ ಯಾವವಿಧವಾದ ಸಂಪಾದನೆಯೂ ಇರಲಿಲ್ಲ. ಸಾಲದ್ದಕ್ಕೆ ಯಾರಾ ದರೂ ಸಾಧುಸನ್ಯಾಸಿಗಳನ್ನು ಕಂಡರೆ ಅವರೊಡನೆ ಕಾಲಕಳೆದು ಬಿಡುತ್ತಿದ್ದನಲ್ಲದೆ ಅವರಿಗೆ ಏನುಬೇಕಾದರೂ ಅದನ್ನು ಮನೆಯಿಂದ ತೆಗೆದುಕೊಂಡುಹೋಗಿ ಕೊಟ್ಟುಬಿಡುತ್ತಿದ್ದನು. ಯಾರಾದರೂ ಕೇಳಿದರೆ ರಘುವೀರನು ಹೇಗೋ ನಡೆಸುತ್ತಾನೆ ಎಂದು ಹೇಳಿಬಿಡು ತ್ತಿದ್ದನು. ಅವನಿಗೆ ಗದಾಧರನನ್ನು ಕಂಡರೆ ಬಹು ಪ್ರೇಮವಾದರೂ ಅವನು ಪಾಠಶಾಲೆಗೆ ಹೋದನೋ, ಬಿಟ್ಟನೋ, ಓದುತ್ತಿದ್ದನೋ ಇಲ್ಲವೋ ಎಂಬ ವಿಚಾರಕ್ಕೆ ಗಮನವನ್ನೇ ಕೊಡುತ್ತಿರಲಿಲ್ಲ. ಕೆಲವು ದಿನಗಳಲ್ಲಿಯೇ ಪಾಠಶಾಲೆಯಲ್ಲಿ ಓದುವುದು ನಿಷ್ಫಲವೆಂದು ಗದಾ ಧರನ ಮನಸ್ಸಿಗೆ ನಿರ್ಧರವಾಗಿ ಅವನು ಪಾಠಶಾಲೆಗೆ ಹೋಗುವು ದನ್ನೇ ಬಿಟ್ಟುಬಿಟ್ಟನು. ಈ ವಿಷಯದಲ್ಲಿಯೂ ರಾಮೇಶ್ವರನು ಆಕ್ಷೇಪಣೆಯನ್ನು ಮಾಡಲಿಲ್ಲ.

ಈಗ ರಾಮಕುಮಾರನು ಕಲ್ಕತ್ತೆಯಲ್ಲಿ ಪಾಠಶಾಲೆಯನ್ನು ಹೂಡಿ ಮೂರು ವರ್ಷಗಳಾಗಿದ್ದುವು. ಹುಡುಗರ ಸಂಖ್ಯೆಯು ಹೆಚ್ಚಿದ್ದ ರಿಂದ ಸಹಾಯಕ್ಕೆ ಮತ್ತಾರಾದರೂ ಒಬ್ಬರು ಬೇಕಾಗಿ ಬಂತು. ಅಲ್ಲದೆ ಗದಾಧರನಿಗೆ ಹದಿನಾರು ವರ್ಷತುಂಬಿದ್ದರೂ ಅವನಿಗೆ ಸಾಕಾದಷ್ಟು ವಿದ್ಯೆ ಬಾರದಿರುವುದನ್ನೂ ಅವನು ಪಾಠಶಾಲೆಯನ್ನು ಬಿಟ್ಟು ಪುರಾಣ ಪುಣ್ಯಕಥೆಗಳನ್ನು ಓದುವುದರಲ್ಲಿಯೂ ಕೀರ್ತನೆ ಭಜನೆಗಳಲ್ಲಿಯೂ ಕಾಲ ಕಳೆಯುತ್ತಿದ್ದದ್ದನ್ನೂ ನೋಡಿ ಅವನು ತನ್ನ ಜೊತೆಯಲ್ಲಿದ್ದರೆ ಸ್ವಲ್ಪ ಬುದ್ಧಿವಂತನಾಗಬಹುದೆಂದೂ ತನಗೂ

ಸಹಾಯ ದೊರೆತಂತಾಗುವದೆಂದೂ ಯೋಚಿಸಿ, ರಾಮಕುಮಾರನು ಗದಾಧರನನ್ನು ಕಲ್ಕತ್ತೆಗೆ ಕರೆದುಕೊಂಡು ಹೋದನು.

# ಮೂರನೆಯ ಅಧ್ಯಾಯ

## ದಕ್ಷಿಣೇಶ್ವರದ ಕಾಳೀದೇವಸ್ಥಾನ.

ಕಲ್ಕತ್ತೆಯ ದಕ್ಷಿಣದಿಕ್ಕಿನಲ್ಲಿರುವ ಜಾನ್‌ಬಜಾರ್ ಎಂಬ ಗ್ರಾಮದಲ್ಲಿ ರಾಣಿರಾಸಮಣಿ ಎಂಬ ಒಬ್ಬ ಪ್ರಸಿದ್ಧಳಾದ ಶ್ರೀಮಂತಳು ವಾಸಮಾಡುತ್ತಿದ್ದಳು. ಆಕೆಯು ವಿಧವೆ. ಆದರೂ ಕಾರ್ಯದಕ್ಷಳು; ಸಾಹಸಿ; ಆದ್ದರಿಂದ ತನ್ನಗಂಡನು ಸ್ವರ್ಗಸ್ಥನಾದಂದಿನಿಂದ ಜಮೀನ್ದಾರಿಯ ಕಾರ್ಯಭಾಗಗಳನ್ನೆಲ್ಲ ತಾನೇ ಸ್ವಂತವಾಗಿ ನಡೆಸುತ್ತ ಬೇಕಾದಷ್ಟು ಐಶ್ವರ್ಯವನ್ನು ಗಳಿಸಿದ್ದಳು. ಸಂಪಾದನೆ ಮಾಡುವುದರಲ್ಲಿ ಹೇಗೆ ಶಕ್ತಿಯಿತ್ತೋ ಹಾಗೆಯೇ ಆಕೆಯಲ್ಲಿ ಕೈಬಿಟ್ಟು ಖರ್ಚುಮಾಡುವ ಔದಾರ್ಯವೂ ಇತ್ತು. ಬೆಸ್ತರ ಜಾತಿಯಲ್ಲಿ ಹುಟ್ಟಿದವಳಾದರೂ ಆಕೆಯು ತನ್ನ ಗುಣಕರ್ಮಗಳಿಂದ 'ರಾಣಿ' ಎಂಬ ಹೆಸರನ್ನು ಸಾರ್ಥಕಮಾಡಿಕೊಂಡಿದ್ದಳು. ಆಕೆಗೆ ಕಾಳಿಕಾದೇವಿಯಲ್ಲಿ ಬಹು ಭಕ್ತಿಯಿತ್ತು. ಕಾಶೀಕ್ಷೇತ್ರಕ್ಕೆಹೋಗಿ ವಿಶ್ವೇಶ್ವರನ ಮತ್ತು ಅನ್ನಪೂರ್ಣಾದೇವಿಯ ದರ್ಶನಸೇವೆಗಳನ್ನು ಮಾಡಬೇಕೆಂಬ ಆಶೆ ಬಹಳದಿನಗಳಿಂದ ಇತ್ತು. ಅದಕ್ಕಾಗಿ ಬಹಳ ಹಣವನ್ನು ಕೂಡಿಹಾಕಿದ್ದಳು. ಆದರೆ ಜಮೀನ್ದಾರಿಯ ಕೆಲಸವು ತನ್ನ ಕೊರಳಿಗೆ ಬಿದ್ದದ್ದರಿಂದ ಬಹುದಿನಗಳು ಕಾಶಿಗೆಹೋಗಲು ಸಮಯ ಸಿಕ್ಕಲಿಲ್ಲ. ಈ ಕಾಲದಲ್ಲಿ ಆಕೆಯ ಅಳಿಯನಾದ ಮಥುರಾನಾಥ ವಿಶ್ವಾಸನು ಜಮೀನ್ದಾರಿಯ ಆಡಳಿತಮಾಡುವುದರಲ್ಲಿ ಸಹಾಯಕನಾದ್ದರಿಂದ ಕಾಶೀಯಾತ್ರೆಗೆ ಹೊರಡಲು ಬೇಕಾದ ಸನ್ನಾಹಗಳನ್ನು ಮಾಡಿಕೊಂಡಳು. ಯಾತ್ರೆಗೆ ಹೊರಡಬೇಕೆಂದಿದ್ದದಿನದ ಹಿಂದಿನ ರಾತ್ರಿ ಸ್ವಪ್ನದಲ್ಲಿ ದೇವಿಯು ಆಕೆಗೆ ಪ್ರತ್ಯಕ್ಷಳಾಗಿ "ನೀನು ಕಾಶಿಗೆ ಹೋಗಬೇಕಾದ ಆವಶ್ಯಕವಿಲ್ಲ. ಬಾಗೀರಥಿಯತೀರದಲ್ಲಿ ಒಂದು

ಮನೋಹರವಾದ ಸ್ಥಳದಲ್ಲಿ ನನ್ನ ವಿಗ್ರಹವನ್ನು ಪ್ರತಿಷ್ಠೆಮಾಡಿ ಪೂಜಾನೈವೇದ್ಯಗಳ ವ್ಯವಸ್ಥೆಮಾಡು. ನಾನು ಆ ಮೂರ್ತಿಯಲ್ಲಿ ಆವಿರ್ಭಾವವಾಗಿ ನಿನ್ನಿಂದ ಪೂಜೆಯನ್ನು ಗ್ರಹಣಮಾಡುತ್ತೇನೆ" ಎಂದು ಆಜ್ಞಾಪಿಸಿದಳಂತೆ. ಆದ್ದರಿಂದ ರಾಣಿಯು ಕಾಶಿಗೆಹೋಗು ವುದನ್ನು ನಿಲ್ಲಿಸಿ ಅದಕ್ಕಾಗಿ ಕೂಡಿಸಿಟ್ಟ ಹಣವನ್ನೆಲ್ಲ ವ್ರಯಮಾಡಿ ಗಂಗಾತೀರದಲ್ಲಿ ದೇವಸ್ಥಾನವನ್ನು ಕಟ್ಟಿಸಬೇಕೆಂದು ಸಂಕಲ್ಪಮಾಡಿ ಕೊಂಡಳು.

ದೇವಸ್ಥಾನವು ಕಟ್ಟಿ ಮುಗಿಯಿತು. (1855.) ದೇವಿಯ ಸೇವೆಯೂ ಚಿರಕಾಲ ನಡೆಯಬೇಕೆಂಬ ಉದ್ದೇಶದಿಂದ ಬೇಕಾದಷ್ಟು ಆಸ್ತಿಯನ್ನು ದೇವಸ್ಥಾನದ ಹೆಸರಿನಲ್ಲಿ ಮಾಡಿದ್ದೂ ಆಯಿತು. ಆದರೆ ಆ ದೇವಿಯ ಅರ್ಚನೆಗೆ ಒಪ್ಪಿಕೊಳ್ಳುವವರಾರು? ಆಕೆಯು ಬೆಸ್ತರ ಜಾತಿಯವಳು. ಶೂದ್ರಪ್ರತಿಷ್ಠಿತವಾದ ಮೂರ್ತಿಯನ್ನು ಪೂಜೆಮಾಡುವವರಾರು? ಶೂದ್ರರಿಂದ ಪ್ರತಿಷ್ಠಿತವಾದ ಮೂರ್ತಿ ಯನ್ನು ಪೂಜಿಸುವುದಿರಲಿ. ಅಂಥಮೂರ್ತಿಗಳಿಗೆ ಆಚಾರಶೀಲ ರಾದ ಬ್ರಾಹ್ಮಣರು ನಮಸ್ಕಾರವನ್ನುಕೂಡ ಮಾಡುತ್ತಿರಲಿಲ್ಲ. ದೇವಿಗೆ ಯಥಾವಿಧಿಯಾಗಿ ಪೂಜೆನೈವೇದ್ಯಗಳು ಆಗದಿದ್ದರೆ ಏನು ಮಾಡಿ ಏನುಪ್ರಯೋಜನ? ಆದ್ದರಿಂದ ರಾಣಿಗೆ ಚಿಂತೆಹತ್ತಿ ಆಕೆಯು ಸುತ್ತಮುತ್ತ ಇದ್ದ ಶಾಸ್ತ್ರಜ್ಞರ ಸಲಹೆಯನ್ನು ಕೇಳಿದಳು. ಆದರೆ ತನಗೆ ಅನುಕೂಲವಾಗಿ ಯಾರೂ ಹೇಳಲಿಲ್ಲ. ಆದರೂ ರಾಣಿಯು ನಿರಾಶಳಾಗದೆ ಕಂಡಕಂಡ ಶಾಸ್ತ್ರಜ್ಞರನ್ನೆಲ್ಲಾ ವಿಚಾರಿಸು ತ್ತಿದ್ದಳು. ರಾಮಕುಮಾರನಿಗೂ ಒಂದು ಕಾಗದವನ್ನು ಬರೆದಳು. ರಾಮಕುಮಾರನು ಯೋಚನೆಮಾಡಿ "ಪ್ರತಿಷ್ಠೆಗೆ ಪೂರ್ವದಲ್ಲಿಯೇ ರಾಣಿಯು ದೇವಾಲಯವನ್ನೂ ಅದಕ್ಕೆ ಸಂಬಂಧಪಟ್ಟ ಆಸ್ತಿಯನ್ನೂ ಒಬ್ಬ ಬ್ರಾಹ್ಮಣನಿಗೆ ದಾನಮಾಡಿ, ಆತನಿಂದ ದೇವಿಯಪ್ರತಿಷ್ಠೆ ಮಾಡಿಸಿದರೆ ಶಾಸ್ತ್ರನಿಯಮಕ್ಕೆ ವಿರೋಧವಾದಂತಾಗುವುದಿಲ್ಲ. ಬ್ರಾಹ್ಮಣರೇ ಮೊದಲಾದ ಉಚ್ಚವರ್ಣದವರೂ ಆ ಮೂರ್ತಿಯ

ಪೂಜೆಮಾಡಿದರೆ ಅಥವಾ ಪ್ರಸಾದಗ್ರಹಣಮಾಡಿದರೆ ದೋಷಭಾಗಿಗಳಾಗುವುದಿಲ್ಲ." ಎಂದು ಉತ್ತರ ಬರೆದನು. ಇದರಿಂದ ರಾಣಿಗೆ ಬಹು ಆನಂದವಾಯಿತು. ದೇವಾಲಯವನ್ನೂ ಅದರ ಆಸ್ತಿಯನ್ನೂ ತನ್ನ ಕುಲಪುರೋಹಿತರಿಗೆ ದಾನಮಾಡಿ ದೇವಸ್ಥಾನದ ಕೆಲಸ ಕಾರ್ಯಗಳ ಮೇಲ್ವಿಚಾರಣೆಯ ಅಧಿಕಾರವನ್ನು ಅವರಿಂದ ಪಡೆದಳು.

ಅರ್ಚಕರು ಸಿಕ್ಕುವುದು ಕಷ್ಟವಾಯಿತು. ಶೂದ್ರರ ಮನೆಯಲ್ಲಿ ಪೌರೋಹಿತ್ಯ ನಡೆಸುತ್ತಿದ್ದ ಬ್ರಾಹ್ಮಣರನ್ನೂ ಒಂದು ವಿಧವಾದ ಶೂದ್ರರೆಂದು ಸದಾಚಾರ ನಿಷ್ಠರಾದ ಬ್ರಾಹ್ಮಣರು ಎಣಿಸುತ್ತಿದ್ದರು. ರಾಮಕುಮಾರನ ವ್ಯವಸ್ಥೆಯು ಶಾಸ್ತ್ರವಿರುದ್ಧವೆಂದು ಯಾರೂ ಹೇಳಲಿಲ್ಲ. ಆದರೆ ಅದು ಸಮಾಜದ ಅನೂಚೀನವಾದ ಪದ್ಧತಿಗೆ ವಿರುದ್ಧವೆಂದು ಎಲ್ಲರೂ ಹೇಳತೊಡಗಿದರು. ರಾಣಿಗೆ ಪುನಃ ದಿಕ್ಕುತೋಚದಂತಾಯಿತು. ಆದರೆ ಕಾರ್ಯದಕ್ಷಳಾದ ರಾಣಿಯು ಆಗಲೂ ನಿರುತ್ಸಾಹಿಯಾಗಲಿಲ್ಲ. ಅಲ್ಲಿ ಪ್ರತಿಷ್ಠೆ ಮಾಡಬೇಕಾಗಿದ್ದ ಎರಡು ದೇವರುಗಳಲ್ಲಿ, ಹಾಗೂ ಹೀಗೂ 'ರಾಧಾಗೋವಿಂದ' ದೇವರಪೂಜೆಗೆ ಒಬ್ಬ ಅರ್ಚಕನು ಸಿಕ್ಕಿದ್ದನು. ಆದರೆ, ಕಾಳಿಕಾದೇವಿಯ ಪೂಜೆಗೆ ಯೋಗ್ಯನಾದ ಬ್ರಾಹ್ಮಣನು ದೊರೆಯಲಿಲ್ಲ. ಪ್ರತಿಷ್ಠೆ ಮಾಡಬೇಕೆಂದಿದ್ದ ದಿನವು ಸಮೀಪಿಸುತ್ತಾ ಬಂತು. ಆಗ ರಾಣಿರಾಸಮಣಿಯು ಬಹಳ ನಮ್ರಭಾವದಿಂದ ರಾಮಕುಮಾರನಿಗೆ ಹೀಗೆ ಕಾಗದ ಬರೆದಳು. "ಜಗನ್ಮಾತೆಯ ಪ್ರತಿಷ್ಠಾ ಕಾರ್ಯದಲ್ಲಿ ನಾನು ಉದ್ಯುಕ್ತಳಾದದ್ದು ತಮ್ಮ ವ್ಯವಸ್ಥೆಯ ಬಲದಿಂದಲೇ. ಬರುವ ಸ್ನಾನಯಾತ್ರೆಯದಿನ ದೇವಿಯ ಪ್ರತಿಷ್ಠೆ ಮಾಡಬೇಕೆಂದು ಸಂಕಲ್ಪಿಸಿ ಸಮಸ್ತ ಸಲಕರಣೆಗಳನ್ನೂ ಸಿದ್ಧಪಡಿಸಿದ್ದೇನೆ. ರಾಧಾಗೋವಿಂದನ ಪೂಜೆಗೆ ಒಬ್ಬ ಅರ್ಚಕರು ಸಿಕ್ಕಿದ್ದಾರೆ. ಆದರೆ ಜಗನ್ಮಾತೆಯ ಪೂಜೆಗೆ ತಕ್ಕವರು ಯಾರೂ ಸಿಕ್ಕಿಲ್ಲ. ಆದ್ದರಿಂದ ತಾವೇ ಈ ವಿಷಯದಲ್ಲಿ ಏನಾದರೂ ಒಂದು ವ್ಯವಸ್ಥೆಮಾಡಿ ಈ ವಿಪತ್ತಿನಿಂದ ನನ್ನನ್ನು ಉದ್ಧಾರ ಮಾಡಬೇಕು. ತಾವು ಪಂಡಿತರು ಮತ್ತು

ಶಾಸ್ತ್ರಜ್ಞರು. ಆದ್ದರಿಂದ ಈ ಪೂಜಕಸ್ಥಾನಕ್ಕೆ ಯಾರುಸಿಕ್ಕಿದರವ ರನ್ನು ನಿಯಮಿಸಲಾಗುವುದಿಲ್ಲ ವೆಂಬುದನ್ನು ತಮಗೆ ತಿಳಿಸುವುದು ಅನಾವಶ್ಯಕ."

ರಾಮಕುಮಾರನು ತಾಂತ್ರಿಕಸಾಧಕ; ಶಕ್ತಿ ಮಂತ್ರದ ಉಪ ದೇಶವನ್ನು ಪಡೆದಿದ್ದನು. ಅಲ್ಲದೆ ಅವನಿಗೆ ದೇವಿಯಲ್ಲಿ ಅಗಾಧ ವಾದ ಭಕ್ತಿಇತ್ತು. ಆದ್ದರಿಂದ ದೇವಿಯ ಪ್ರತಿಷ್ಠಾಪನೆಯಂಥ ಪುಣ್ಯಕೆಲಸವು ನಿಂತುಹೋಗುವುದೆಂಬ ಶಂಕೆಯಿಂದ ಬೇರೆ ಯಾವ ನಾದರೂ ಒಬ್ಬಯೋಗ್ಯನಾದ ಅರ್ಚಕನು ಸಿಕ್ಕುವವರೆಗೆ ಕಾಳಿಕಾ ಪೂಜೆಯ ಕೆಲಸವನ್ನು ತಾನೇ ವಹಿಸಿದನು. ಹಿಂದೆ ಗೊತ್ತಾಗಿದ್ದ ದಿವಸದಲ್ಲಿಯೇ ಜಗದಂಬೆಯ ಪ್ರತಿಷ್ಠೆಯು ನಡೆದುಹೋಯಿತು. ದೂರದೂರ ದೇಶಗಳಿಂದ ಸಾವಿರಾರುಜನ ಬ್ರಾಹ್ಮಣರು ಬಂದಿದ್ದರು. ರಾಣಿಯು ಪ್ರತಿಯೊಬ್ಬ ಬ್ರಾಹ್ಮಣನಿಗೂ ಒಂದೊಂದು ಪಟ್ಟೆಯ ಮಡಿ, ಒಂದು ಉತ್ತರೀಯ, ಒಂದುವರಹ ಈ ಮೇರೆ ದಾನ ಮಾಡಿದಳು. ಆದಿನ ನಡೆದ ದಾನಧರ್ಮಕ್ಕೆ ನೆಲೆಯಿರಲಿಲ್ಲ. ಮೊದ ಲನೆಯದಿನದ ಖರ್ಚೇ ಒಂಬತ್ತುಲಕ್ಷರೂಪಾಯಿಗೆ ಮೀರಿತ್ತು.

## ನಾಲ್ಕನೆಯ ಅಧ್ಯಾಯ.

### ಪರಮಹಂಸರು ಕಾಳಿಯ ಅರ್ಚಕರಾಗಿ ನಿಂತದ್ದು.

ದಕ್ಷಿಣೇಶ್ವರದಲ್ಲಿ ಕಾಳಿಕಾದೇವಿಯ ಪ್ರತಿಷ್ಠೆಯಾದ ದಿವಸ ಪರಮಹಂಸರು* ಅಲ್ಲಿಯೇ ಇದ್ದರು. ಆದಿನ ನಡೆದ ದಾನಧರ್ಮ, ಪೂಜೆ ಪುರಸ್ಕಾರಗಳನ್ನು ನೋಡಿ ಅವರಿಗೆ ಬಹಳ ಆನಂದವಾಯಿತು. ಬೇರೆ ಅರ್ಚಕನು ಸಿಕ್ಕುವವರೆಗೆ ನಾಲ್ಕುದಿನ ತಾನು ಅಲ್ಲಿಯೇ ಇರುವುದಾಗಿ ರಾಮಕುಮಾರನು ಹೇಳಿದ್ದರಿಂದ ಪರಮಹಂಸರೊಬ್ಬರೇ ಕಲ್ಕತ್ತೆಗೆ ಹಿಂತಿರುಗಿ ಬಂದುಬಿಟ್ಟರು. ಆದರೆ ಒಂದುವಾರವಾದರೂ ಅಣ್ಣನು ಬರಲಿಲ್ಲವಾಗಿ ಅದಕ್ಕೆ ಕಾರಣವನ್ನು ತಿಳಿಯಬೇಕೆಂದು ಪುನಃ ದಕ್ಷಿಣೇಶ್ವರಕ್ಕೆ ಹೋಗಲು, ರಾಣಿಯು ಬಲವಂತಪಡಿಸಿದ್ದರಿಂದ ತಾನು ಅಲ್ಲಿಯೇ ಅರ್ಚಕನ ಕೆಲಸದಲ್ಲಿ ಇರುವುದಕ್ಕೆ ಒಪ್ಪಿಕೊಂಡೆನೆಂದು ರಾಮಕುಮಾರನು ಹೇಳಿದನು. ಇದರಿಂದ ಪರಮಹಂಸರಿಗೆ ಸಮಾಧಾನವಾಗಲಿಲ್ಲ. ತಮ್ಮ ತಂದೆಯು ಶೂದ್ರರಮನೆಯಲ್ಲಿ ಪೂಜೆಮಾಡದೆ ಇದ್ದದ್ದು, ಶೂದ್ರರಿಂದ ದಾನವನ್ನು ಸ್ವೀಕರಿಸದೆ ಇದ್ದದ್ದು, ಮುಂತಾದ ಆತನಸದಾಚಾರಗಳನ್ನೆಲ್ಲಾ ಅಣ್ಣನಿಗೆ ಜ್ಞಾಪಿಸಿ ಅವನನ್ನು ಕರೆದುಕೊಂಡು ಹೋಗುವುದಕ್ಕೆ ಪ್ರಯತ್ನಮಾಡಿದರು. ರಾಮಕುಮಾರನು ಶಾಸ್ತ್ರಸಹಾಯದಿಂದಲೂ ಯುಕ್ತಿ ಸಹಾಯದಿಂದಲೂ ತಮ್ಮನಿಗೆ ಏನೇನೋ

---

* 'ರಾಮಕೃಷ್ಣ' ನೆಂಬಹೆಸರು ಬಹುಶಃ ಸನ್ಯಾಸ ಸ್ವೀಕಾರಕಾಲದಲ್ಲಿ ತೋತಾಪುರಿಗೋಸ್ವಾಮಿಯು ಕೊಟ್ಟದ್ದು: ಪರಮಹಂಸತ್ವವು ಎಲ್ಲದಕ್ಕೂ ಕೊನೆಯಲ್ಲಿ ಬಂದದ್ದು. ಆದರೂ ಇಲ್ಲಿಂದ ಮುಂದಕ್ಕೆ ಏಕವಚನವನ್ನು ಉಪಯೋಗಿಸಲು ಸಂಕೋಚವಾಗಿ ರಾಮಕೃಷ್ಣಪರಮಹಂಸರು ಅಥವಾ ಪರಮಹಂಸರು ಎಂದೇ ಹೇಳುತ್ತ ಹೋಗಿದ್ದೇವೆ.

ಸಮಾಧಾನ ಹೇಳಿದನು. ಇದು ಯಾವುದೂ ಒಪ್ಪಿಗೆಯಾಗಲಿಲ್ಲ; ಆದ್ದರಿಂದ ದೇವರಮುಂದೆ ಚೀಟಿಹಾಕಿ ನೋಡಬೇಕೆಂದು ನಿರ್ಧರವಾಯಿತು. ಇದರಲ್ಲಿಯೂ ರಾಮಕುಮಾರನಿಗೇ ಅನುಕೂಲವಾಗಿ ಬರಲು ಪರಮಹಂಸರಿಗೆ ಸ್ವಲ್ಪಮಟ್ಟಿಗೆ ಸಮಾಧಾನವಾಯಿತು.

ಆದರೆ ಇನ್ನೊಂದು ವಿಷಯದಲ್ಲಿ ಪುನಃ ಯೋಚನೆಗಾರಂಭವಾಯಿತು. ಅರ್ಚಕನ ಕೆಲಸವನ್ನು ವಹಿಸುವುದಕ್ಕೆ ಆಕ್ಷೇಪಣೆ ಮಾಡಿದವರು ಅಲ್ಲಿ ಊಟಮಾಡುವುದಕ್ಕೆ ಒಪ್ಪುವುದು ನಿಜವೆ! ರಾಮಕುಮಾರನು "ಇದುದೇವಾಲಯ, ಗಂಗಾಜಲದಲ್ಲಿ ಮಾಡಿದ ಪದಾರ್ಥಗಳು, ಅದರ ಮೇಲೆ ಜಗದಂಬೆಗೆ ನೈವೇದ್ಯವಾದುವು. ಇದನ್ನು ಊಟಮಾಡುವುದರಿಂದ ಯಾವದೋಷವೂ ಬರುವುದಿಲ್ಲ" ಎಂದು ಮುಂತಾಗಿ ಎಷ್ಟೆಷ್ಟೋ ಸಮಾಧಾನಗಳನ್ನು ಹೇಳಿದನು. ಆದರೆ ಅವರ ಮನಸ್ಸಿಗೆ ಇವೊಂದೂ ಸರಿತೋರದೆ ಸ್ವಯಂಪಾಕವನ್ನು ತೆಗೆದುಕೊಂಡುಹೋಗಿ ಗಂಗೆಯಹತ್ತಿರ ತಾವೇ ಅಡಿಗೆಮಾಡಿಕೊಂಡು ಊಟಮಾಡಿಬಿಟ್ಟರು.

ಕಾಳಿಕಾದೇವಿಯ ಪ್ರತಿಷ್ಠೆಯಾದಮೇಲೆ ಒಂದು ತಿಂಗಳವರೆಗೂ ಪರಮಹಂಸರು ಏನುಮಾಡಬೇಕೆಂಬುದನ್ನು ತಿಳಿಯದೆ ದಕ್ಷಿಣೇಶ್ವರದಲ್ಲಿ ಕಾಲಯಾಪನೆ ಮಾಡುತ್ತಿದ್ದರು. ಮಥುರಾನಾಥನು ಅವರನ್ನು ಯಾವುದಾದರೂ ಒಂದು ಕೆಲಸಕ್ಕೆ ಸೇರಿಸಬೇಕೆಂದು ಸಂಕಲ್ಪಮಾಡಿ ತನ್ನ ಉದ್ದೇಶವನ್ನು ರಾಮಕುಮಾರನಿಗೆ ತಿಳಿಸಿದನು. ರಾಮಕುಮಾರನು ವಿಚಾರಮಾಡಿ ಅವರು ಒಪ್ಪುವುದಿಲ್ಲವೆಂದು ಹೇಳಿಬಿಟ್ಟನು. ಮಥುರಾನಾಥನು ಮಾತ್ರ ತನ್ನ ಸಂಕಲ್ಪವನ್ನು ಬಿಡದೆ ಸಮಯವನ್ನು ಕಾಯುತ್ತಿದ್ದನು. ಆದರೆ ಅವನ ಉದ್ದೇಶವು ಗೊತ್ತಾದಂದಿನಿಂದ ಪರಮಹಂಸರು ಅವನಕಣ್ಣಿಗೆ ಬೀಳದಹಾಗೆ ತಲೆ ತಪ್ಪಿಸಿಕೊಂಡು ತಿರುಗುತ್ತಿದ್ದರು. ಏಕೆಂದರೆ, ಮಥುರಾನಾಥನು ಏನೋ ಉಪಕಾರ ಮಾಡುತ್ತೇನೆಂದು ತಿಳಿದು, ಒಂದು ನೌಕರಿ ಕೊಡುವುದಕ್ಕೆ ಬಂದರೆ ಬೇಡವೆಂದುಹೇಳಿ ಅವನ ಮನಸ್ಸನ್ನು ನೋಯಿಸುವುದು ಅವರಿಗೆ ಚೆನ್ನಾಗಿ ತೋರಲಿಲ್ಲ.

ಒಂದುದಿನ ಪರಮಹಂಸರೂ ಹೃದಯನೂ* ದೇವಸ್ಥಾನದ ಹತ್ತಿರ ತಿರುಗಾಡುತ್ತಿದ್ದರು. ಮಥುರಾನಾಥನು ದೇವರದರ್ಶನ ಮಾಡಿಕೊಂಡು ಬರುತ್ತ ಪರಮಹಂಸರನ್ನು ನೋಡಿ, ಅವರನ್ನು ಕರೆದುಕೊಂಡು ಬರುವಹಾಗೆ ತನ್ನ ಸೇವಕನೊಬ್ಬನನ್ನು ಕಳುಹಿಸಿದನು. ಮಥುರನು ಕಣ್ಣಿಗೆಬಿದ್ದ ಒಡನೆಯೇ ಅವರು ಆ ಜಾಗವನ್ನೇಬಿಟ್ಟು ಹೊರಟು ಹೋಗುತ್ತಿದ್ದರು. ಅಷ್ಟರಲ್ಲಿಯೇ ಮಥುರಾನಾಥನ ಸೇವಕನು ಬಂದು "ಯಜಮಾನರು ತಮ್ಮನ್ನು ಕರೆಯುತ್ತಾರೆ" ಎಂದು ಹೇಳಿದನು. ಪರಮಹಂಸರು ಹೋಗಲು ಹಿಂಜರಿಯುತ್ತ ನಿಂತುಬಿಟ್ಟಿದ್ದನ್ನು ಕಂಡು,

**ಹೃದಯ:**—ಮಾಮಾ, ಯಾಕೆ ಹೀಗೆ ಹಿಂದು ಮುಂದು ನೋಡುತ್ತೀ?

**ಪರಮ:**—ಹೋಯಿತು ಅಂದರೆ ಇಲ್ಲೇ ಇರು ಅಂತ ಹೇಳುತ್ತಾನೆ. ಚಾಕರಿಗೆ ಸೇರಿಕೊ ಅಂತಾನೆ.

**ಹೃದಯ:**—ಅದರಿಂದ ದೋಷವೇನು? ಇಂಥ ಸ್ಥಳದಲ್ಲಿ ಮಹದಾಶ್ರಯದಲ್ಲಿ ನೌಕರಿಗೆ ಸೇರುವುದು ಒಳ್ಳೇದೇ ಹೊರತು ಕೆಟ್ಟದ್ದೇನೂ ಅಲ್ಲ. ಇದಕ್ಕೇಕೆ ಹಿಂದು ಮುಂದು ನೋಡಬೇಕು?

**ಪರಮ:**—ಇಲ್ಲಿ ಸುಮ್ಮನೆ ಚಾಕರಿಯಿಂದ ಕಟ್ಟುಬಿದ್ದಿರುವುದಕ್ಕೆ ನನಗೆ ಮನಸ್ಸಿಲ್ಲ. ಪೂಜೇಕೆಲಸಕ್ಕೆ ಒಪ್ಪಿಕೊಂಡರೆ ಆಭರಣಗಳ ಜವಾಬ್ದಾರಿ ಹೊತ್ತುಕೋಬೇಕು, ಅದು ಮಹಾ ಹಂಗಿನ ಕೆಲಸ. ಅದು ನನ್ನಿಂದ ಸಾಧ್ಯವಲ್ಲ. ಆ ಭಾರ ನೀನು ಹೊತ್ತುಕೊಳ್ಳುವಹಾಗಿದ್ದರೆ ನಾನು ಪೂಜೆ ಮಾಡುವುದಕ್ಕೆ ಅಡ್ಡಿಯಿಲ್ಲ.

ಹೃದಯನು ಚಾಕರಿಗಾಗಿಯೇ ಬಂದಿದ್ದರಿಂದ ಅದಕ್ಕೆ

---

* ಹೃದಯರಾಮಮುಖೋಪಾಧ್ಯಾಯ, ಪರಮಹಂಸರ ಸೋದರತ್ತೆಯ ಮಗಳಮಗ; ಏನಾದರೂ ಒಂದು ನೌಕರಿಯನ್ನು ಸಂಪಾದಿಸಬೇಕೆಂದು ದಕ್ಷಿಣೇಶ್ವರಕ್ಕೆ ಬಂದಿದ್ದನು.

ಕೂಡಲೇ ಸಮ್ಮತಿಸಿದನು. ಇಷ್ಟಾದಮೇಲೆ ಅವರು ಮಥುರಾನಾಥನ ಹತ್ತಿರಕ್ಕೆ ಹೋದರು. ಎಲ್ಲವೂ ಹಿಂದೆ ಯೋಚಿಸಿದ್ದಂತೆಯೇ ಆಯಿತು. ಮಥುರಾನಾಥನು ಬಲವಂತಮಾಡಿ ಕೆಲಸಕ್ಕೆ ಸೇರಬೇಕೆಂದು ಹೇಳಿದನು. ಪರಮಹಂಸರು ತಮ್ಮ ಅಭಿಪ್ರಾಯವನ್ನು ಸೂಚಿಸಿದರು. ಮಥುರನೂ ಅದಕ್ಕೆ ಒಪ್ಪಿ ಪರಮಹಂಸರಿಗೆ ದೇವಸ್ಥಾನದಲ್ಲಿ ಅಲಂಕಾರ ಮಾಡುವ ಕೆಲಸವನ್ನೂ ಹೃದಯನಿಗೆ ಪರಿಚಾರಿಕೆಯ ಕೆಲಸವನ್ನೂ ಗೊತ್ತುಮಾಡಿದನು.

ಹೃದಯನು ಸದಾ ಪರಮಹಂಸರ ಜೊತೆಯಲ್ಲಿಯೇ ಇರುತ್ತಿದ್ದನು. ಇಬ್ಬರೂ ಒಟ್ಟಿಗೆ ಏಳುವರು. ಒಟ್ಟಿಗೆ ಸ್ನಾನಮಾಡುವರು; ಜೊತೆಯಾಗಿ ತಿರುಗಾಡುವರು. ಹೀಗಿದ್ದರೂ ಹೃದಯನು ರಾಮಕುಮಾರನಿಗೆ ಏನಾದರೂ ಸಹಾಯಮಾಡುವುದಕ್ಕೆ ಹೋದಾಗ, ಮಧ್ಯಾಹ್ನ ಊಟವಾದಮೇಲೆ ಮಲಗಿದ್ದಾಗ, ಅಥವಾ ಸಾಯಂಕಾಲದಲ್ಲಿ ದೇವಸ್ಥಾನಕ್ಕೆ ಮಂಗಳಾರತಿಗೆ ಹೋಗಿದ್ದಾಗ ಪರಮಹಂಸರು ಅವನ ಜೊತೆಯನ್ನು ತಪ್ಪಿಸಿಕೊಂಡು ಹೋಗಿ ಸ್ವಲ್ಪ ಹೊತ್ತು ಎಲ್ಲಿಯೋ ಮಾಯವಾಗುತ್ತಿದ್ದರು. ಎಷ್ಟು ಹುಡುಕಿದರೂ ಸಿಕ್ಕುತ್ತಿರಲಿಲ್ಲ. ಒಂದೆರಡು ಘಂಟೆಯಾದ ಮೇಲೆ ಎಲ್ಲಿಂದಲೋ ಹಿಂದಿರುಗಿ ಬರುತ್ತಿದ್ದರು. "ಎಲ್ಲಿಹೋಗಿದ್ದೆ?" ಎಂದು ಕೇಳಿದರೆ "ಎಲ್ಲೂಇಲ್ಲ—ಇಲ್ಲೆಇದ್ದೆ" ಎಂದು ಹೇಳುತ್ತಿದ್ದರು. ಹೃದಯನು ಪತ್ತೆ ಮಾಡಬೇಕೆಂದು ಹೊರಟು ಒಂದುದಿನ ಅವರು ಪಂಚವಟಿ*ಯ ಕಡೆಯಿಂದ ಬರುತ್ತಿದ್ದದ್ದನ್ನು ಕಂಡು ಶೌಚಕ್ಕೆ ಹೋಗಿದ್ದಾರೆಂದುಕೊಂಡು ಸುಮ್ಮನಾದನು.

ರಾಮಕುಮಾರನಿಗೆ ತಮ್ಮನ ಸ್ಥಿತಿಯನ್ನು ನೋಡಿ ಚಿಂತೆ ಹತ್ತಿತು. ಏಕೆಂದರೆ ಪರಮಹಂಸರು ಯಾವಾಗಲೂ ನಿರ್ಜನಸ್ಥಳ ಪ್ರಿಯರಾಗಿಯೂ ಸಂಸಾರ ವಿಚಾರಗಳಲ್ಲಿ ಉದಾಸೀನರಾಗಿಯೂ ಇದ್ದರು. ಬೆಳಗ್ಗೆ, ಸಂಜೆ, ಯಾವಾಗೆಂದರಾವಾಗ ದೇವ

* ದಕ್ಷಿಣೇಶ್ವರದ ಹತ್ತಿರದಲ್ಲಿದ್ದ ಒಂದುತೋಪು.

ಸ್ಥಾನದಿಂದ ದೂರಹೋಗಿ ಗಂಗಾತೀರದಲ್ಲಿ ತಿರುಗಾಡುತ್ತಲೋ ಪಂಚವಟಿಯಲ್ಲಿ ಅಥವಾ ಅದರ ಹತ್ತಿರವಿದ್ದ ಕಾಡಿನಲ್ಲಿ ಕುಳಿತು ಕೊಂಡೋ ಇರುತ್ತಿದ್ದರು. ತನಗೋ ವಯಸ್ಸಾಗುತ್ತ ಬಂದಿತ್ತು. ತಾನು ಹೋದರೆ ಸಂಸಾರ ನಡೆಸುವವರಾರು? ಹೇಗಾದರೂ ಗದಾಧರನು ಎರಡುಕಾಸು ಸಂಪಾದಿಸುವಂತಾಗಿ ಸಂಸಾರ ನಡೆ ಸುವ ಹಾಗಾದರೆ ತಾನು ನಿಶ್ಚಿಂತೆ ಯಾಗಿರಬಹುದು ಎಂದು ಅಂದುಕೊಳ್ಳುತ್ತಿದ್ದನು. ಈಗ ಮಥುರಾನಾಥನ ಬಲವಂತದಿಂದ ತಮ್ಮನು ನೌಕರಿಗೆ ಸೇರಲು ರಾಮಕುಮಾರನಿಗೆ ಚಿಂತೆಯು ಕಡಿಮೆಯಾಗಿ, ಅವನಿಗೆ ಚಂಡೀಪಾಠ, ಕಾಳಿಕಾಪೂಜೆಯಕ್ರಮ ಮುಂತಾದುವುಗಳನ್ನು ಕಲಿಸುತ್ತ ಬಂದನು. ಪರಮಹಂಸರೂ ಇವೆಲ್ಲವುಗಳನ್ನೂ ಬಲುಬೇಗ ಕಲಿತರು; ಮತ್ತು ಶಕ್ತಿ ದೀಕ್ಷೆಯನ್ನು ತೆಗೆದುಕೊಳ್ಳದಿದ್ದರೆ ದೇವಿಯಪೂಜೆಯು ಪ್ರಶಸ್ತವಾಗುವುದಿಲ್ಲವೆಂದಂ ದುಕೊಂಡು ಕೇನೋರಾಮಚಟ್ಟೋಪಾಧ್ಯಾಯನೆಂಬ ಪ್ರಸಿದ್ಧ ಶಕ್ತಿ ಸಾಧಕನಿಂದ ಶಕ್ತಿಮಂತ್ರವನ್ನು ಉಪದೇಶ ಮಾಡಿಸಿಕೊಂಡರು.

ಪರಮಹಂಸರು ಅಣ್ಣನಿಗೆ ಪೂಜೆಯ ಕೆಲಸದಲ್ಲಿ ಸಹಾಯ ಕರಾಗಿ ಬಂದ ಕೆಲವು ದಿನಗಳಮೇಲೆ ಅದೇ ದೇವಸ್ಥಾನದಲ್ಲಿದ್ದ ರಾಧಾಗೋವಿಂದದೇವರ ಅರ್ಚಕನು ಗೋವಿಂದದೇವರನ್ನು ಎತ್ತಿ ಹಾಕಿ ಭಿನ್ನಮಾಡಿದ ತಪ್ಪಿಗಾಗಿ ಆ ಕೆಲಸದಿಂದ ನಿವೃತ್ತನಾದನು. ಪರಮಹಂಸರು ಆತನ ಸ್ಥಾನದಲ್ಲಿ ನಿಯಮಿಸಲ್ಪಟ್ಟರು.

ರಾಮಕುಮಾರನು ತನಗೆ ವಯಸ್ಸಾಗಿದ್ದದ್ದರಿಂದಲೋ ದೇಹ ಸ್ಥಿತಿಯು ನೆಟ್ಟಗಿಲ್ಲದ್ದರಿಂದಲೋ ಅಥವಾ ತಮ್ಮನಿಗೆ ಅಭ್ಯಾಸ ವಾಗಲಿಯೆಂಬ ಅಭಿಪ್ರಾಯದಿಂದಲೋ ಆಗಾಗ ಪರಮಹಂಸರನ್ನು ದೇವೀಪೂಜೆಗೆ ನಿಯಮಿಸಿ ತಾನು ರಾಧಾಗೋವಿಂದನ ಪೂಜೆಗೆ ಹೋಗುತ್ತಿದ್ದನು. ದೇವೀಪೂಜೆಗೆ ಬೇಕಾದಷ್ಟು ದೇಹಶಕ್ತಿಯು ರಾಮಕುಮಾರನಿಗೆ ಇಲ್ಲವೆಂದು ತಿಳಿದು ಮಥುರನು ರಾಣಿಗೆಹೇಳಿ ರಾಮಕುಮಾರನು ರಾಧಾಗೋವಿಂದನನ್ನೂ ಪರಮಹಂಸರು ಕಾಳೀ

ದೇವಿಯನ್ನೂ ಪೂಜೆಮಾಡಬೇಕೆಂದು ವ್ಯವಸ್ಥೆಮಾಡಿದನು. ರಾಮಕುಮಾರನಿಗೂ ಇದರಿಂದ ಸಂತೋಷವಾಗಿ ತಾನೇ ನಿಂತುಕೊಂಡು ಪೂಜೆಪುರಸ್ಕಾರಗಳ ವಿಧಾನಗಳನ್ನೆಲ್ಲ ತಮ್ಮನಿಗೆ ಹೇಳಿಕೊಟ್ಟನು. ಇದೆಲ್ಲ ವ್ಯವಸ್ಥೆಯಾದಮೇಲೆ ರಾಮಕುಮಾರನು, ರಾಧಾಗೋವಿಂದನ ಪೂಜೆಗೆ ಹೃದಯನನ್ನು ನಿಲ್ಲಿಸಿ ಒಂದುಸಾರಿ ತಮ್ಮಊರಿಗೆ ಹೋಗಿಬರಬೇಕೆಂದು ಯೋಚಿಸುತ್ತಿದ್ದನು. ಆದರೆ ಅವನಿಗೆ ಮತ್ತೆ ಕಾಮಾರಪುಕುರವನ್ನು ನೋಡುವ ಋಣಾನುಬಂಧವಿರಲಿಲ್ಲ. ಕಾರ್ಯಾಂತರದಿಂದ ಹತ್ತಿರದಲ್ಲಿದ್ದ ಒಂದುಗ್ರಾಮಕ್ಕೆ ಹೋಗಿರಲು ಇದ್ದಕ್ಕಿದ್ದಹಾಗೆ ರಾಮಕುಮಾರನು ದೇಹತ್ಯಾಗ ಮಾಡಿದನು.

ಹೀಗೆ ವಿಧಿಯು ಪರಮಹಂಸರನ್ನು ಎಳೆದುತಂದು ದಕ್ಷಿಣೇಶ್ವರ ದೇವಸ್ಥಾನವು ಪ್ರತಿಷ್ಠಿತವಾದ ಒಂದುವರ್ಷದ ಒಳಗಾಗಿ ಅಲ್ಲಿನ ಕಾಳೀಪೂಜೆಗೆ ಗಂಟುಹಾಕಿತು.

# ಐದನೆಯ ಅಧ್ಯಾಯ

## ಸಾಧನಾ

ಶ್ರೀ ರಾಮಕೃಷ್ಣಪರಮಹಂಸರವರು ಕಲ್ಕತ್ತೆಗೆಬಂದು ದಕ್ಷಿಣೇಶ್ವರದಲ್ಲಿ ನಿಂತಾಗಿನಿಂದ ಅವರ "ಸಾಧನಕಾಲ" ಪ್ರಾರಂಭವಾಯಿತೆಂದು ಹೇಳಬಹುದು. ಅವರು ಕಾಳೀದೇವಸ್ಥಾನದಲ್ಲಿ ಅರ್ಚಕರ ಕೆಲಸವನ್ನು ವಹಿಸಿದಮೇಲೆ ಹನ್ನೆರಡುವರ್ಷಕಾಲ ವಿಧವಿಧವಾದ ಸಾಧನಗಳನ್ನು ಕೈಕೊಂಡು ಅವುಗಳಲ್ಲಿ ಸಿದ್ಧರಾದದ್ದನ್ನು ವಿವರಿಸುವುದಕ್ಕೆ ಮೊದಲು "ಸಾಧನ" ವೆಂದರೇನು ಎಂಬುದನ್ನು ಇಲ್ಲಿ ಸ್ವಲ್ಪ ವಿಚಾರಮಾಡುತ್ತೇವೆ.

"ಸರ್ವಂಖಲ್ವಿದಂಬ್ರಹ್ಮ"—ಜಗತ್ತಿನಲ್ಲಿರುವ ಸ್ಥೂಲ, ಸೂಕ್ಷ್ಮ, ಚೇತನ, ಅಚೇತನ, ವಸ್ತುಗಳೆಲ್ಲವೂ ಒಂದೇ ಅದ್ವಯಬ್ರಹ್ಮವಸ್ತು; ಕಲ್ಲು, ಮಣ್ಣು, ಮನುಷ್ಯ, ಪಶು, ಗಿಡ. ಮರ, ದೇವತೆಗಳು ಈ ಸಮಸ್ತವೂ ಬೇರೆಬೇರೆಯಾಗಿ ಕಂಡರೂ ಅವೆಲ್ಲವೂ ಒಂದೇ ವಸ್ತು—ಎಂದು ಶಾಸ್ತ್ರವು ಹೇಳುತ್ತದೆ. ಅದೇಮಾತನ್ನೇ ಜ್ಞಾನಿಗಳು "ಅಂತಾ ರಾಮಮಯಂ, ಈ ಜಗಮಂತಾ ರಾಮಮಯಂ" ಎಂದು ಹೇಳಿದ್ದಾರೆ. ಆದರೆ ಎಷ್ಟುಪರೀಕ್ಷಿಸಿ ನೋಡಿದರೂ ಜಗತ್ತಿನಲ್ಲಿ ಬೇರೆಬೇರೆ ಪದಾರ್ಥಗಳು ಕಾಣುವುವೇ ಹೊರತು ನಮಗೆ ದೇವರು ಎಲ್ಲಿಯೂ ಕಂಡುಬರುವುದಿಲ್ಲ. ಹೀಗಾಗಲು ನಮ್ಮಭ್ರಾಂತಿಯೇ ಕಾರಣ; ಭ್ರಾಂತಿಗೆ ಅಜ್ಞಾನವೇ ಕಾರಣ; ಎಂದಿನವರೆಗೆ ಅಜ್ಞಾನವು ನಾಶವಾಗಿ ಜ್ಞಾನ ಹುಟ್ಟುವುದಿಲ್ಲವೋ ಅಂದಿನವರೆಗೂ ಜಗತ್ಸಂಬಂಧವಾದ ನಮ್ಮ ತಿಳಿವಳಿಕೆಯು ಭ್ರಾಂತಿಯುಕ್ತವಾದದ್ದೆಂದು ನಮಗೆ ಗೊತ್ತಾಗುವುದಿಲ್ಲ. ಸ್ವಪ್ನದಲ್ಲಿ ಕಾಣುವುದೆಲ್ಲಾ ಆಗ್ಗೆ ನಿಜವೆಂದೇ ತೋರುತ್ತಿರುತ್ತದೆ. ಅದು ಮಿಥ್ಯೆಯೆಂಬು

ಗೊತ್ತಾಗಬೇಕಾದರೆ ನಮಗೆ ಎಚ್ಚರವಾಗಿ ಜಾಗ್ರದವಸ್ಥೆಯೊಡನೆ ಅದನ್ನು ಹೋಲಿಸಿ ನೋಡಬೇಕು. ಅಲ್ಲಿಯವರೆಗೂ ಅದು ನಿಜ ವಾಗಿಯೇ ಕಾಣುತ್ತಿರುತ್ತದೆ. ಇಂಥ ಭ್ರಾಂತಿಜನಕವಾದ ಅಜ್ಞಾನವು ನಾಶವಾಗಿ ಈಶ್ವರಸಾಕ್ಷಾತ್ಕಾರವಾಗುವಂತೆ ನಾವು ಮಾಡ ಬೇಕಾದ ಪ್ರಯತ್ನಕ್ಕೆ 'ಸಾಧನ' ವೆಂದು ಹೆಸರು.

ಈ ಪ್ರಯತ್ನವನ್ನು ಮುಖ್ಯವಾಗಿ ಜ್ಞಾನಮಾರ್ಗ, ಭಕ್ತಿ ಮಾರ್ಗವೆಂದು ಎರಡುಭಾಗ ಮಾಡಬಹುದು. ಅವುಗಳಲ್ಲಿ ಜ್ಞಾನ ಮಾರ್ಗವು ಬಹುಕಠಿಣ. ಜನ್ಮಜನ್ಮಾಂತರದ ಕುಸಂಸ್ಕಾರ ಗಳಿಂದ ತುಂಬಿದ ಮನಸ್ಸುಳ್ಳ ಮನುಷ್ಯಸಾಮಾನ್ಯನಿಗೆ ಈ ಮಾರ್ಗ ವನ್ನು ಅವಲಂಬನೆಮಾಡುವುದು ಅಸಾಧ್ಯ. ಭಕ್ತಿಮಾರ್ಗವು ಅಷ್ಟು ಕ್ಲೇಶಕರವಾದವಲ್ಲ. ಪ್ರತಿಯೊಬ್ಬನೂ ಅವನವನ ಯೋಗ್ಯ ತಾನುಸಾರವಾಗಿ ಈ ಮಾರ್ಗವನ್ನು ಅವಲಂಬಿಸಬಹುದು. ಕಲಿ ಯುಗಕ್ಕೆ ಈ ಮಾರ್ಗವನ್ನೇ ದೇವರು ವಿಧಿಸಿದ್ದಾನೆಂದು ಪರಮ ಹಂಸರು ಹೇಳುತ್ತಿದ್ದರು. ಈ ಮಾರ್ಗಗಳು ಬೇರೆಬೇರೆ ಎಂದು ಹೇಳಿ ದರೂ ಕೊನೆಗೆ ಅವೆರಡೂ ಒಂದೇಸ್ಥಳದಲ್ಲಿ ಕೂಡುತ್ತವೆ. ಜ್ಞಾನ ಮಾರ್ಗಾವಲಂಬಿಯೂ ಭಕ್ತಿಮಾರ್ಗಾವಲಂಬಿಯೂ ಇಬ್ಬರೂ ಕೊನೆಗೆ ಈಶ್ವರ ಸಾಕ್ಷಾತ್ಕಾರವನ್ನು ಪಡೆಯುತ್ತಾರೆ.

ಲೋಕಹಿತಾರ್ಥವಾಗಿ ಈಶ್ವರನು ಮನುಷ್ಯಜನ್ಮವನ್ನು ತಾಳಿ ದಾಗ ಆತನೂ ಸಾಧನೆ ಮಾಡಬೇಕಾಗುತ್ತದೆ. (ಅವತಾರ ಪುರುಷರ ಜೀವನ ಚರಿತ್ರೆಗಳಲ್ಲಿ ಸಾಧಕಭಾವಾಲೋಚನೆಯನ್ನು ವಿಸ್ತಾರವಾಗಿ ಮಾಡಿಲ್ಲ. ಆದರೂ ರಾಮಾಯಣ, ಭಾಗವತ ಮುಂತಾದ ಗ್ರಂಥಗಳನ್ನು ವಿಮರ್ಶೆಮಾಡಿ ಓದಿದವರಿಗೆ ರಾಮ, ಕೃಷ್ಣ ಮೊದಲಾದ ಅವತಾರ ಪುರುಷರೂ ಸಾಧನ ಮಾಡಿದ ರೆಂಬುದು ಗೊತ್ತಾಗದೇ ಇರಲಾರದು). ಜ್ಞಾನಸ್ವರೂಪನೂ, ಮಾ ಯಾತೀತನೂ, ಆದ ಪರಮಾತ್ಮನೂಕೂಡ ಅಜ್ಞಾನಮಾಯೆಗಳಿಂದ ಮುಕ್ತನಾಗಲು ಸಾಧನೆ ಮಾಡುತ್ತಾನೆಂಬುದು ವಿಚಿತ್ರವಾಗಿ ಕಾಣ

ಬಹುದು. ಆದರೆ ಇದರಲ್ಲಿ ವೈಚಿತ್ರ್ಯವೇನೂಇಲ್ಲ. ಏಕೆಂದರೆ, ಕರುಣಾಸಾಗರನಾದ ಈಶ್ವರನು ಧರ್ಮಸಂಸ್ಥಾಪನೆಗಾಗಿ ಮನುಷ್ಯ ಜನ್ಮವೆತ್ತುವಾಗ ಮಾನವದೇಹಕ್ಕೂ ಮನಸ್ಸಿಗೂ ಸ್ವಾಭಾವಿಕವಾದ ದೌರ್ಬಲ್ಯವನ್ನು ತಾನಾಗಿಯೇ ಸ್ವೀಕಾರಮಾಡುತ್ತಾನೆ. ಹೀಗೆ ಮಾನುಷ ಸಾಮಾನ್ಯವಾದ ಅಸಂಪೂರ್ಣತೆಯನ್ನು ಧಾರಣಮಾಡದೆ ಹೋದರೆ ಈಶ್ವರನು ಅವತಾರಮಾಡುವುದೇ ಒಂದು ವಿಧದಲ್ಲಿ ನಿರರ್ಥಕವಾಗುತ್ತದೆ. ಹೇಗೆಂದರೆ, ಮಾನವ ಸುಲಭವಾದ ದೌರ್ಬಲ್ಯವನ್ನು ವಹಿಸಿ, ಸಾಧನಮೂಲಕ ಆ ದೌರ್ಬಲ್ಯವನ್ನು ಧ್ವಂಸಮಾಡಿ "ಕ್ಷುದ್ರಂ ಹೃದಯ ದೌರ್ಬಲ್ಯಂ ತ್ಯಕ್ತ್ವೋತ್ತಿಷ್ಠ" ಎಂದು ಜನಗಳಿಗೆ ಬೋಧಿಸಿದರೆ ತಾನೇ ಅವರು ದೌರ್ಬಲ್ಯವನ್ನು ಬಿಡುವುದು ಸಾಧ್ಯವೆಂದು ತಿಳಿದು ಸಾಧನಮಾಡುವರು. ಇಲ್ಲದೇ ಹೋದರೆ "ಆತನೇನು ಸರ್ವಶಕ್ತ! ದೌರ್ಬಲ್ಯವು ಅವನಿಗೇಸಿದೆ! ಆತನು ಏನಾದರೂ ಮಾಡಬಹುದು, ಅದೆಲ್ಲಾ ನಮಗೆ ಸಾಧ್ಯವೇ?" ಎಂದು ನಿರಾಶರಾಗಿ ಆತನು ಉಪದೇಶಮಾಡಿದ ಸಾಧನ ಪಥದಲ್ಲಿ ಒಂದು ಹೆಜ್ಜೆಯನ್ನೂ ಇಡದೇ ಹೋಗಬಹುದು.

ಅವತಾರಪುರುಷರು ಸಾಮಾನ್ಯರಂತೆ ಸಾಧನ ಮಾಡುವುದು ಆವಶ್ಯಕವಾದರೂ ಅವರಿಗೂ ಸಾಮಾನ್ಯರಿಗೂ ವಿಶೇಷ ಪ್ರಭೇದವಿದೆ. ಸಾಮಾನ್ಯರು ಪೂರ್ವಜನ್ಮಸಂಸ್ಕಾರದೊಡನೆ ಹುಟ್ಟುವುದರಿಂದ ಸಾಧನ ಮಾಡುವುದರಲ್ಲಿ ಬೆನ್ನಿಗೆ ಬೀಸುವಕಲ್ಲನ್ನು ಕಟ್ಟಿಕೊಂಡು ಈಜುವವರಂತೆ ಇರುತ್ತಾರೆ. ಅವತಾರ ಪುರುಷರಿಗೆ ಈ ವಿಧವಾದ ಪೂರ್ವಜನ್ಮ ಸಂಸ್ಕಾರ ರೂಪವಾದ ಹೊರೆಯಿರುವುದಿಲ್ಲ. ಸಾಮಾನ್ಯ ಜನರು ಸ್ವಾರ್ಥಪರರಾಗಿಯೂ ಸ್ವಸುಖಾಭಿಲಾಷಿಗಳಾಗಿಯೂ ಇರುತ್ತಾರೆ. ಹೀಗಿರುವುದರಿಂದ ವಿಷಯಗಳಿಗೆ ದಾಸರಾಗಿರುತ್ತಾರೆ. ಒಂದೊಂದುವೇಳೆ ವಿಷಯ ವಾಸನೆಯನ್ನು ಬಿಡಬೇಕೆಂದು ಅವರಿಗೆ ಮನಸ್ಸಾದರೂ ವಿಷಯ ವಾಸನೆಯು ಅವರನ್ನು ಬಿಡುವುದಿಲ್ಲ. ವಿಷಯ ವಾಸನೆಯನ್ನು ತ್ಯಾಗ ಮಾಡಬೇಕಾದರೆ ಅವರು ಮನಸ್ಸಿ

ನೊಡನೆ ಬಹುಕಾಲ ಘೋರಯುದ್ಧ ಮಾಡಬೇಕಾಗುತ್ತದೆ. (ಅವತಾರ ಪುರುಷರ ಮಾತೇಬೇರೆ. ಸ್ವಸುಖನಿರಭಿಲಾಷೆಯೂ, ಪರಹಿತಾಕಾಂಕ್ಷೆಯೂ, ವೈರಾಗ್ಯವೂ ಅವರ ಹುಟ್ಟುಗುಣಗಳಾಗಿರುತ್ತವೆ.) ಆದ್ದರಿಂದ ಸಾಮಾನ್ಯರು ನೂರುಜನ್ಮಗಳಲ್ಲಿ ಮಾಡಿದರೂ ತೀರದಷ್ಟು ಸಾಧನೆಯನ್ನು ಒಂದೇಜನ್ಮದ ಅತ್ಯಲ್ಪ ಕಾಲದಲ್ಲಿ ಅವತಾರಪುರುಷರು ಮಾಡಿ ಮುಗಿಸಿ ಬಿಡುತ್ತಾರೆ. ಅವರು ಮಾಡುವ ಸಾಧನೆಯಲ್ಲಿ ಒಂದಂಶವನ್ನು ಮಾಡಿದರೂ ಸಾಮಾನ್ಯರು ಧನ್ಯರಾಗುತ್ತಾರೆ.

ಸಾಧನಪಥದಲ್ಲಿ ಒಂದು ಹೆಜ್ಜೆಯನ್ನಾದರೂ ಇಟ್ಟಿರತಕ್ಕ ವಾಚಕರಿಗೆ ಶ್ರೀ ಶ್ರೀರಾಮಕೃಷ್ಣಪರಮಹಂಸರ ಸಾಧನಚರಿತ್ರೆಯನ್ನು ಓದಿದಮೇಲೆ ಅವರು ಮಹಾಪುರುಷರೆಂಬುದು ಗೊತ್ತಾಗದೆ ಇರದು.

# ಆರನೆಯ ಅಧ್ಯಾಯ

## ಸಾಧನಗಳು ; ಮೊದಲನೆಯಭಾಗ : 1855—1858.

ಪರಮಹಂಸರು ಬಾಲ್ಯದಲ್ಲಿಯೇ ತಂದೆಯನ್ನು ಕಳೆದುಕೊಂಡರಾಗಿ ಬಹುಮಟ್ಟಿಗೆ ರಾಮಕುಮಾರನ ಲಾಲನೆಪಾಲನೆಗಳಲ್ಲಿಯೇ ಬೆಳೆದಿದ್ದರು. ಆದ್ದರಿಂದ ಪಿತೃಸಮಾನವಾದ ಅಣ್ಣನು ದೇಹಬಿಟ್ಟ ಸುದ್ದಿಯನ್ನುಕೇಳಿ ಅವರಿಗೆ ಹಿಡಿಯಲಾರದಷ್ಟು ದುಃಖವಾಯಿತು. ಈ ಜಗತ್ತಿನಲ್ಲಿ ಸಮಸ್ತವೂ ಅನಿತ್ಯವೆಂಬುದು ಮನಸ್ಸಿಗೆ ಮತ್ತಷ್ಟು ನಾಟಿತು. ಜಗದಂಬೆಯಲ್ಲಿ ಭಕ್ತಿಯೂ ಪೂಜೆಯಲ್ಲಿ ಆಸಕ್ತಿಯೂ ಹೆಚ್ಚಾದುವು. ಇಲ್ಲಿಂದಮುಂದಕ್ಕೆ ಶಾಸ್ತ್ರೀಯವಾಗಿ ದೇವೀಪೂಜೆ ಮಾಡಿದಮೇಲೆ ದೇವಿಯ ಎದುರಿಗೆ ತನ್ಮಯರಾಗಿ ಕುಳಿತು ಹೊತ್ತು ಕಳೆಯುತ್ತಿದ್ದರು. ಆಗಾಗ ರಾಮಪ್ರಸಾದ ಮುಂತಾದ ದಾಸರ ಕೀರ್ತನೆಗಳನ್ನು ಹಾಡುತ್ತಹಾಡುತ್ತ ಕೇವಲ ವ್ಯಾಕುಲ ಹೃದಯರಾಗಿ "ತಾಯಿ, ನೀನು ರಾಮಪ್ರಸಾದರಿಗೆ ದರ್ಶನಕೊಟ್ಟೆ; ನನಗೆ ಯಾಕೆ ದರ್ಶನಕೊಡುವುದಿಲ್ಲ? ನಾನು ಧನ, ಜನ, ಭೋಗ, ಸುಖ ಇವುಗಳಾವುದನ್ನೂ ಅಪೇಕ್ಷಿಸುವುದಿಲ್ಲ. ನನಗೆ ದರ್ಶನವನ್ನು ಕೊಡು" ಎಂದು ಪ್ರಾರ್ಥಿಸುವರು. ಆಗ ಅವರ ಕಣ್ಣೀರಿಂದ ಎದೆಯು ತೊಯ್ದು ಹೋಗುತ್ತಿತ್ತು. ಹೀಗೆ ಕಾತರರಾಗಿ ಅತ್ತಮೇಲೆ ಹೃದಯದ ಭಾರವು ಕಡಿಮೆಯಾಗಿ ಪುನಃ ಕೀರ್ತನೆ ಹೇಳುವುದಕ್ಕೆ ಮೊದಲು ಮಾಡುತ್ತಿದ್ದರು.

ಮಧ್ಯಾಹ್ನದಲ್ಲಿಯೂ ಸಾಯಂಕಾಲದಲ್ಲಿಯೂ ದೇವಸ್ಥಾನದ ಬಾಗಿಲುಹಾಕಿದಮೇಲೆ ಹತ್ತಿರದಲ್ಲಿದ್ದ ಒಂದು ನಿರ್ಜನವಾದಕಾಡಿಗೆ ಹೋಗಿ ದೇವಿಯ ಧ್ಯಾನದಲ್ಲಿ ಮಗ್ನರಾಗಿರುತ್ತಿದ್ದರು. ಹೃದಯನು ಅವರ ಜೊತೆಯಲ್ಲಿಯೇ ಯಾವಾಗಲೂ ಇರುತ್ತಿದ್ದನೆಂದು ಹಿಂದೆ

ಹೇಳಿದ್ದೇವೆ. ಹೀಗೆ ಪರಮಹಂಸರು ರಾತ್ರಿಯಹೊತ್ತು ಕಾಡಿನೊಳಗೆ ಹೋಗುತ್ತಿದ್ದದ್ದನ್ನು ನೋಡಿ ಹೃದಯನು ಒಂದು ದಿನ ಅವರನ್ನು ಹಿಂಬಾಲಿಸಿ ಹೋದನು. ಅವರು ಒಂದು ಬನ್ನಿಯಮರದ ಕೆಳಗೆ ಜನಿವಾರವನ್ನೂ ಉಟ್ಟಿದ್ದಬಟ್ಟೆಯನ್ನೂ ತೆಗೆದುಹಾಕಿ ಧ್ಯಾನ ಮಾಡುತ್ತ ಕುಳಿತರು. ಅದನ್ನುನೋಡಿ ಹೃದಯನು ಮನಸ್ಸಿನಲ್ಲಿ "ಮಾವನಿಗೆ ಹುಚ್ಚು ಹಿಡಿಯಿತೋ ಏನೋ! ಹುಚ್ಚರೇ ಹೀಗೆ ಮಾಡುವುದು; ಧ್ಯಾನಮಾಡಿದರೆಮಾಡಲಿ; ಆದರೆ ಹೀಗೆ ಬೆತ್ತಲೆಯಾಗಿ ಏಕೆಮಾಡಬೇಕು?" ಎಂದಂದುಕೊಂಡು ಬೇಗನೆ ಅವರ ಹತ್ತಿರಹೋಗಿ "ಮಾವ! ಇದೇನಿದು! ಜನಿವಾರವನ್ನು ತೆಗೆದು ಹಾಕಿ ಉಟ್ಟ ಬಟ್ಟೆಗಳನ್ನೂ ಬಿಚ್ಚಿ ಹೀಗೆ ಏಕೆ ಬೆತ್ತಲೆಕೂತೆ? ಎಂದು ಕೇಳಿದನು. ಅದಕ್ಕೆ ಅವರು ಕಣ್ಣುಬಿಟ್ಟುನೋಡಿ "ನಿನಗೇನು ಗೊತ್ತೋ? ಹೀಗೆ ಪಾಶಮುಕ್ತನಾಗಿಯೇ ಧ್ಯಾನಮಾಡಬೇಕಾದದ್ದು. ಮನುಷ್ಯನು ಜನ್ಮಾವಧಿ ದ್ವೇಷ, ಲಜ್ಜೆ, ಕುಲ, ಶೀಲ, ಭಯ, ಮಾನ, ಜಾತಿ, ಅಭಿಮಾನ ಎಂಬ ಅಷ್ಟಪಾಶಗಳಿಂದ ಬದ್ಧನಾಗಿರುತ್ತಾನೆ. ಯಜ್ಞೋಪವೀತವೂ 'ನಾನು ಬ್ರಾಹ್ಮಣ, ಎಲ್ಲರಿಗಿಂತಲೂ ದೊಡ್ಡವನು' ಎಂಬ ಅಭಿಮಾನದ ಗುರುತು, ಮತ್ತು ಒಂದು ಪಾಶ; ತಾಯಿಯನ್ನು ಕುರಿತು ಪ್ರಾರ್ಥಿಸಬೇಕಾದರೆ ಈ ಪಾಶಗಳನ್ನೆಲ್ಲಾ ಕಿತ್ತು ಬಿಸಾಡಿ ಏಕಮನಸ್ಸಿನಿಂದ ಪ್ರಾರ್ಥಿಸಬೇಕು. ಆದ್ದರಿಂದಲೇ ಇವನ್ನೆಲ್ಲ ತೆಗೆದುಹಾಕಿದ್ದೇನೆ. ಧ್ಯಾನ ಮುಗಿದು ಹಿಂದಕ್ಕೆ ಬರುವಾಗ ಪುನಃ ಅವುಗಳನ್ನೆಲ್ಲ ಹಾಕಿಕೊಂಡು ಬರುತ್ತೇನೆ" ಎಂದು ಹೇಳಿದನು. ಹೃದಯನು ಮಾವನಿಗೆ ಏನೇನೋ ಬುದ್ಧಿಹೇಳಬೇಕೆಂದು ನಿಶ್ಚಯಮಾಡಿಕೊಂಡು ಹೋಗಿದ್ದನು. ಆದರೆ ಆಗ ಏನೂ ತೋಚದೆ ಸುಮ್ಮನೆ ಹೊರಟು ಬಂದುಬಿಟ್ಟನು.

ದಿನಗಳು ಕಳೆದಹಾಗೆಲ್ಲ ಪರಮಹಂಸರ ಮನಸ್ಸಿನಲ್ಲಿ ದೇವತಾನುರಾಗವೂ, ವ್ಯಾಕುಲತೆಯೂ ವೃದ್ಧಿಯಾಗುತ್ತಬಂದುವು. ನಿದ್ರಾಹಾರಗಳು ಬೇಕಿಲ್ಲವಾದುವು; ತಲೆಯೂ ಎದೆಯೂ ಯಾವಾಗಲೂ

ಕೆಂಪೇರಿರುತ್ತಿದ್ದುವು. ಮೈಯಲ್ಲಿ ಬೆಂಕಿಬಿದ್ದಹಾಗೆ ತಾಪವಿರುತ್ತಿತ್ತು. ಹೀಗಿರಲು ಕೆಲವು ದಿನಗಳಮೇಲೆ ದೇವೀಮೂರ್ತಿಯ ಪ್ರಥಮದರ್ಶನವಾಯಿತು. ಅದನ್ನು ಕುರಿತು ಪರಮಹಂಸರು ಹೀಗೆ ಹೇಳುತ್ತಿದ್ದರು:—"ಒಂದುದಿನ ದೇವಿಯ ಎದುರಿಗೆ ಕೀರ್ತನೆಯನ್ನು ಹಾಡುತ್ತಾ ಹಾಡುತ್ತಾ—'ಅಮ್ಮಾ, ನಾನು ಎಷ್ಟು ಪ್ರಾರ್ಥಿಸಿದರೂ ನೀನೇಕೆ ಅದನ್ನು ಕಿವಿಯಮೇಲೆ ಹಾಕಿಕೊಳ್ಳುವಹಾಗಿಲ್ಲ? ರಾಮಪ್ರಸಾದರಿಗೆ ಪ್ರತ್ಯಕ್ಷಳಾಗಲಿಲ್ಲವೇ! ನನಗೆ ಯಾಕೆ ಆಗುವುದಿಲ್ಲ?—ಎಂದು ಬಹಳವಾಗಿ ಕೇಳಿಕೊಂಡೆ; ಆದರೂ ದೇವಿಯ ದರ್ಶನವಾಗಲಿಲ್ಲ. ದೇವಿಯು ದರ್ಶನವಾಗದಿದ್ದಮೇಲೆ ಈ ಜೀವವಿದ್ದೇನುಪ್ರಯೋಜನವೆಂದಂದುಕೊಂಡೆ; ಮನಸ್ಸಿಗೆ ಬಹು ಸಂಕಟವಾಯಿತು. ಕೂಡಲೆ ಗರ್ಭಗುಡಿಗೆ ಎದ್ದುಹೋಗಿ ದೇವಿಯ ಕೈಯಲ್ಲಿದ್ದ ಕತ್ತಿಯನ್ನು ತಂದು ಹುಚ್ಚನಹಾಗೆ ಪ್ರಾಣಕಳೆದುಕೊಳ್ಳುವುದಕ್ಕೆ ಹೋದೆನು. ಆ ಸಮಯದಲ್ಲಿ ತಾಯಿಯ ಅದ್ಭುತ ದರ್ಶನವಾಯಿತು.' ಒಡನೆಯೇ ಸಂಜ್ಞಾಶೂನ್ಯನಾಗಿ ಬಿದ್ದುಬಿಟ್ಟೆನು. ಆ ದಿನವೂ ಮರುದಿನವೂ ಏನು ನಡೆಯಿತೋ ನನಗೊಂದೂ ಗೊತ್ತಾಗಲಿಲ್ಲ. ಮನಸ್ಸಿನಲ್ಲಿ ಒಂದಪೂರ್ವವಾದ ಆನಂದವನ್ನು ಅನುಭವಿಸಿದ್ದು ಮಾತ್ರ ಜ್ಞಾಪಕವಿದೆ."

ದೇವಿಯ ಪ್ರಥಮದರ್ಶನವಾದಂದಿನಿಂದ ಪರಮಹಂಸರು ಪೂರ್ವದಂತೆ ಯಥಾವಿಧಿಯಾಗಿ ಪೂಜೆಮಾಡಲಾರದವರಾದರು. ಅವರ ಪೂಜೆಯು ವಿಚಿತ್ರವಾಗುತ್ತ ಬಂತು. ದೇವಿಗೆ ನೈವೇದ್ಯ ಮಾಡುವಾಗ ಒಂದುತುತ್ತು ಅನ್ನವನ್ನು ಕೈಯಲ್ಲಿ ತೆಗೆದುಕೊಂಡು ದೇವಿಯ ಬಾಯಿಯಹತ್ತಿರಕ್ಕೆ ತೆಗೆದುಕೊಂಡು ಹೋಗಿ "ತಾಯೀ, ತಿನ್ನು; ಚೆನ್ನಾಗಿದೆ, ತಿನ್ನು;" ಎಂದು ಹೇಳಿ ಆಮೇಲೆ "ನನ್ನನ್ನು ತಿನ್ನು ಅಂತ ಹೇಳುತ್ತೀ ಏನು? ಮೊದಲು ನಾನು ತಿನ್ನಬೇಕೆ? ಆಗಲಿ, ತಿನ್ನುತ್ತೇನೆ" ಎಂದು ಹೇಳಿ ಅದರಲ್ಲಿ ಸ್ವಲ್ಪತಿಂದು ಮಿಕ್ಕಿದ್ದನ್ನು ದೇವಿಯ ಬಾಯಹತ್ತಿರ ಹಿಡಿದು "ನಾನೇನೊ ತಿಂದೆ, ಇನ್ನು

ನೀನೂ ತಿನ್ನು," ಎಂದು ಹೇಳುವರು. ಅಥವಾ ಪೂಜಾಸನವನ್ನು ಬಿಟ್ಟು ತೂರಾಡುತ್ತ ದೇವಿಯ ಸಿಂಹಾಸನದಮೇಲೆ ಹತ್ತಿ ಗಾನ ಮಾಡುತ್ತ ದೇವಿಯ ಕೈಹಿಡಿದುಕೊಂಡು ಕುಣಿಯುವರು; ಹಾಸ್ಯ ಪರಿಹಾಸ್ಯ ಮಾಡುವರು; ಮಾತನಾಡುವರು; ಅಥವಾ ದೇವಿಯ ಪೂಜೆಗಾಗಿ ತಂದ ಹೂವನ್ನು ಮೊದಲು ತಮ್ಮ ತಲೆ, ಹೃದಯ, ಕಾಲುಗಳಮೇಲೆ ಪೂಜೆಮಾಡಿಕೊಂಡು ಆಮೇಲೆ ಅವನ್ನು ದೇವಿಯ ಪಾದಪದ್ಮದಲ್ಲಿ ಅರ್ಪಣಮಾಡುವರು.

ಇದನ್ನೆಲ್ಲ ನೋಡುತ್ತಿದ್ದ ಹೃದಯನು ಮನಸ್ಸಿನಲ್ಲಿ "ಮಾವ ನಿಗೆ ಖಂಡಿತವಾಗಿ ಹುಚ್ಚುಹಿಡಿದಿರಬೇಕು; ಇಲ್ಲದೆಹೋದರೆ ಪೂಜೆ ಯಲ್ಲಿ ಎಲ್ಲಾದರೂ ಹೀಗೆ ಅನಾಚಾರ ಮಾಡುವುದುಂಟೆ! ರಾಣಿಗೂ ಮಥುರಾನಾಥನಿಗೂ ಈ ವಿಧವಾದ ಪೂಜೆಯ ಸುದ್ದಿ ಗೊತ್ತಾದರೆ ಅವರೇನು ತಿಳಿದುಕೊಳ್ಳುತ್ತಾರೆ!" ಎಂದಂದುಕೊಂಡು ಭಯಪಡು ತ್ತಿದ್ದನು. ಯಾವಾಗ ನೋಡಿದರೂ ಪರಮಹಂಸರ ಅರ್ಚನೆಯು ಹೀಗೆ ವಿಲಕ್ಷಣವಾಗಿರಲು ಅದನ್ನು ಮುಚ್ಚುಮರೆಮಾಡುವುದು ತಾನೇ ಹೇಗೆ? ಹೃದಯನ ಹಾಗೆಯೇ ಅನೇಕರು ಪೂಜಾಕಾಲದಲ್ಲಿ ದೇವಸ್ಥಾನಕ್ಕೆ ಬಂದು ಈ ವಿಚಿತ್ರವಾದ ಆಚರಣೆಯನ್ನು ನೋಡಿ ದೇವಸ್ಥಾನದ ಅಧಿಕಾರಿಗಳಿಗೆ ತಿಳಿಸಿದರು. ಅಧಿಕಾರಿಗಳೂ ಬಂದು ನೋಡಿದರು; ಆದರೆ ಆವೇಶಬಂದಂತಿದ್ದ ಪರಮಹಂಸರನ್ನು ಧಿಕ್ಕ ರಿಸುವುದಕ್ಕೆ ಧೈರ್ಯವಿಲ್ಲದೆ "ಪೂಜಾರಿಗೆ ಹುಚ್ಚುಹಿಡಿದಿದೆ, ಇಲ್ಲವೇ ಪಿಶಾಚಿ ಮೆಟ್ಟಿಕೊಂಡಿದೆ; ಹಾಗಲ್ಲದೆ ಪೂಜಾಕಾಲದಲ್ಲಿ ಯಾರೂ ಯಾವಾಗಲೂ ಹೀಗೆ ಸ್ವೇಚ್ಛಾಚಾರಮಾಡಲಾರರು; ಯಜಮಾನ ರಿಗೆ ಈ ವಿಷಯವನ್ನು ತಿಳಿಸಬೇಕು." ಎಂದೆಂದುಕೊಂಡರು.

ಮಥುರಾನಾಥನಿಗೆ ಈ ವರ್ತಮಾನವು ಹೋಯಿತು. ಆತನು ತಾನೇ ಶೀಘ್ರದಲ್ಲಿ ದಕ್ಷಿಣೇಶ್ವರಕ್ಕೆ ಬರುವುದಾಗಿಯೂ ಅದುವರೆಗೆ ಅರ್ಚಕನು ತನ್ನ ಮನಸ್ಸಿಗೆ ಬಂದಂತೆ ಪೂಜೆಮಾಡುತ್ತಿರಬೇಕೆಂದೂ ಅದಕ್ಕೆ ಯಾರೂ ಯಾವವಿಧವಾದ ಪ್ರತಿಬಂಧಕ ಮಾಡಕೂಡ

ದೆಂದೂ ಹೇಳಿಕಳುಹಿಸಿದನು. ಅದರಂತೆ ಕೆಲವು ದಿನಗಳಾದ ಮೇಲೆ ಯಾರಿಗೂ ತಿಳಿಸದೆ ಒಂದುದಿನ ಪೂಜಾಕಾಲಕ್ಕೆ ದೇವಸ್ಥಾನಕ್ಕೆ ಬಂದು ಸ್ವಲ್ಪಹೊತ್ತು ಪರಮಹಂಸರ ಪೂಜೆಯನ್ನು ದೃಷ್ಟಿಸಿ ನೋಡಿದನು. ಭಾವಾವಿಷ್ಟರಾದ ಪರಮಹಂಸರಿಗೆ ಮಧುರಾನಾಥನು ಬಂದು ಹತ್ತಿರನಿಂತಿದ್ದು ಗೊತ್ತೇ ಆಗಲಿಲ್ಲ; ಹೀಗೆ ಅನನ್ಯಮನಸ್ಕರಾಗಿ ಮಾಡುತ್ತಿದ್ದ ಪೂಜೆ, ದೇವಿಯಹತ್ತಿರ ಮಗುವಿನಹಾಗೆ ಹಟಮಾಡುವುದು, ಪೀಡಿಸುವುದು, ಮುಂತಾದ್ದನ್ನೆಲ್ಲ ನೋಡಿ ಮಧುರಾನಾಥನು ಅವೆಲ್ಲವೂ ಐಕಾಂತಿಕ ಪ್ರೇಮಭಕ್ತಿಯೆಂದು ತಿಳಿದುಕೊಂಡನು. ಹಾಗೆಯೇ ಸ್ವಲ್ಪಹೊತ್ತು ನೋಡುತ್ತಿದ್ದು ಕೊನೆಗೆ ಭಕ್ತಿಯಿಂದ ದೇವಿಗೂ ಪರಮಹಂಸರಿಗೂ ದೀರ್ಘದಂಡ ನಮಸ್ಕಾರಮಾಡಿ ಮನೆಗೆ ಹೋಗಿ ಅಲ್ಲಿಂದ ದೇವಸ್ಥಾನದ ಅಧಿಕಾರಿಗಳಿಗೆ "ಅರ್ಚಕರು ಹೇಗೆಬೇಕಾದರೆ ಹಾಗೆ ಪೂಜೆಮಾಡಲಿ; ಅವರಿಗೆ ಅಡ್ಡಿಮಾಡಕೂಡದು." ಎಂದು ಕಾಗದಬರೆದನು. ರಾಣಿ ರಾಸಮಣಿಗೂ ಈ ಸಮಾಚಾರಗಳೆಲ್ಲ ತಿಳಿಯಬಂದುವು.

ರಾಣಿಯು ಆಗ್ಗಾಗ್ಗೆ ದೇವಸ್ಥಾನಕ್ಕೆ ಹೋಗುತ್ತಿದ್ದಳು. ಆಗ ಪರಮಹಂಸರು ಸುಮಧುರವಾದ ಕಂಠದಿಂದ ಭಕ್ತಿಯುಕ್ತವಾಗಿ ಹಾಡುತ್ತಿದ್ದ ದೇವರ ಕೀರ್ತನೆಗಳನ್ನು ಕೇಳಿ ಬಹಳ ಆನಂದಪಡುತ್ತಿದ್ದಳು. ಒಂದುದಿನ ಹೀಗೆ ದೇವಿಯದರ್ಶನಕ್ಕೆ ಹೋಗಿದ್ದವಳು ಪರಮಹಂಸರನ್ನು ಕರೆದು ಒಂದು ಕೀರ್ತನೆಯನ್ನು ಹಾಡಬೇಕೆಂದು ಕೇಳಿಕೊಂಡಳು. ಅವರು ಹಾಡುತ್ತ ಹಾಡುತ್ತ ಭಾವಾವಿಷ್ಟರಾಗಿ "ಇಲ್ಲಿಯೂ ಅದೇಯೋಚನೆಯೆ?" ಎಂದು ಆಕೆಗೆ ಬಲವಾಗಿ ಒಂದು ಪೆಟ್ಟನ್ನುಕೊಟ್ಟರು, ಅಲ್ಲಿದ್ದವರೆಲ್ಲರೂ ಗಾಬರಿಯಾಗಿ ಕೂಗಾಡಲಾರಂಭಿಸಿದರು. ರಾಣಿಯು ತಾನು ಯಾವುದೋ ಒಂದು ಮೊಖದ್ದಮೆಯ ವಿಚಾರವಾಗಿ ಯೋಚನೆಮಾಡುತ್ತಿದ್ದಳು. ಆದ್ದರಿಂದ ಸಿಟ್ಟಾಗದೆ ತನ್ನನ್ನು ಅರ್ಚಕರು ಶಿಕ್ಷಿಸಿದ್ದು ನ್ಯಾಯವಾಗಿದೆಯೆಂದು ಹೇಳಿ ಅವರೆಲ್ಲರನ್ನೂ ಸಮಾಧಾನಮಾಡಿದಳು.

ಅಂದಿನಿಂದ ಆಕೆಗೆ ತನ್ನ ಹೃದಯವನ್ನೇ ಹೊಕ್ಕು ನೋಡಿದ ಪರಮ ಹಂಸರಲ್ಲಿ ಪ್ರೇಮವೂ ಭಕ್ತಿಯೂ ಇನ್ನೂ ಹೆಚ್ಚಾದುವು.

ದೇವಿಯ ದರ್ಶನವಾದ ಮೇಲೆ, ಪರಮಹಂಸರಿಗೆ ತಮ್ಮ ಮನೆ ದೇವರಾದ ರಘುವೀರನ ದರ್ಶನಮಾಡಬೇಕೆಂಬ ಇಚ್ಛೆ ಹುಟ್ಟಿತು. ಹನುಮಂತನಲ್ಲಿದ್ದಂಥ ಭಕ್ತಿಯಿಂದ ರಾಮಚಂದ್ರನ ದರ್ಶನಲಾಭವಾಗುವ ಸಂಭವವುಂಟೆಂದು ತೋರಿತು. ಆದ್ದರಿಂದ ತಮ್ಮಲ್ಲಿ ಹನುಮಂತನ ಭಾವಾರೋಪಮಾಡಿಕೊಂಡು ಸಾಧನೆಗೆ ಆರಂಭಿಸಿದರು. ಈ ಕಾಲದಲ್ಲಿ ಅವರು ನಿರಂತರವೂ ಆಂಜನೇಯನ ಚಿಂತೆಮಾಡುತ್ತ ಮಾಡುತ್ತ ತಮ್ಮನ್ನೇ ತಾವು ಮರೆತು ಹೋಗಿದ್ದರು. ಈ ವಿಚಾರವಾಗಿ ಅವರು ಹೇಳುತ್ತಿದ್ದದ್ದೇನೆಂದರೆ:— "ಆ ಕಾಲದಲ್ಲಿ ನಾನು ಆಹಾರವಿಹಾರಾದಿಗಳನ್ನೆಲ್ಲಾ ಹನುಮಂತನ ಹಾಗೆಯೇ ಮಾಡುತ್ತಿದ್ದೆ. ಮಾಡಬೇಕು ಅಂತ ಹಾಗೆ ಮಾಡುತ್ತಿರಲಿಲ್ಲ; ಅದರಷ್ಟಕ್ಕೆ ಅದೇ ಹಾಗಾಗುತ್ತಿತ್ತು. ಹಾರಿ ಹಾರಿಕೊಂಡು ನಡೆಯುತ್ತಿದ್ದೆ. ಹಣ್ಣುಹಂಪಲುಗಳನ್ನು ಹೊರತು ಮತ್ತೇನನ್ನೂ ತಿನ್ನುತ್ತಿರಲಿಲ್ಲ; ಅವನ್ನೂ ಸಿಪ್ಪೆತೆಗೆದು ತಿನ್ನುವುದಕ್ಕೆ ಕೂಡ ಮನಸ್ಸು ಬರುತ್ತಿರಲಿಲ್ಲ; ಗಿಡದ ಮೇಲೆಯೇ ಬಹಳಕಾಲ ಇದ್ದುಬಿಡುತ್ತಿದ್ದೆ. ಮತ್ತು ಯಾವಾಗಲೂ 'ರಘುವೀರ' 'ರಘುವೀರ' ಎಂದು ಗಂಭೀರ ಸ್ವರದಿಂದ ಕಿರಿಚುತ್ತಿದ್ದೆ".— ಇತ್ಯಾದಿ.

ಈ ದಾಸ್ಯ ಭಕ್ತಿಸಾಧನಮಾಡುವಾಗ ಅವರಿಗೆ ಮತ್ತೊಂದು ಅಪೂರ್ವವಾದ ಅನುಭವವು ಆಯಿತು. ಅದನ್ನು ಕುರಿತು ಪರಮ ಹಂಸರು ಹೇಳಿರುವುದೇನೆಂದರೆ :—"ಒಂದು ದಿನ ಪಂಚವಟಿಯ ಕೆಳಗೆ ಕೂತಿದ್ದೆ. ನಾನೇನು ಆಗ ಧ್ಯಾನಮಾಡುತ್ತಿರಲಿಲ್ಲ, ಸುಮ್ಮನೆ ಕೂತಿದ್ದೆ. ಆಗ ನಿರುಪಮಯ ಜ್ಯೋತಿರ್ಮಯವಾದ ಸ್ತ್ರೀಮೂರ್ತಿ ನನ್ನ ಎದುರಿಗೆ ಪ್ರತ್ಯಕ್ಷಳಾಗಿ ಆ ಸ್ಥಳವನ್ನೆಲ್ಲ ಕಾಂತಿಯಿಂದ ತುಂಬಿದಳು. ಮೂರ್ತಿಯು ಮಾನವೀಮೂರ್ತಿ: ಯಾಕೆಂದರೆ ತ್ರಿನಯನವುಳ್ಳಂತಾದ ದೇವಿಯ ಲಕ್ಷಣಗಳು ಆ ಮೂರ್ತಿಗೆ ಇರಲಿಲ್ಲ.

ಆವರೆ ಪ್ರೇಮ-ದುಃಖ-ಕರುಣಾ-ಸಹಿಷ್ಣುತಾ-ಪೂರ್ಣವಾದ ಆಕೆಯ ಮುಖದಲ್ಲಿದ್ದಂಥ ತೇಜಸ್ವಿತೆಯನ್ನು ಮತ್ತಾವ ದೇವೀಮೂರ್ತಿಯಲ್ಲಿಯೂ ನಾನು ನೋಡಿರಲಿಲ್ಲ. ಆಕೆಯು ಪ್ರಸನ್ನದೃಷ್ಟಿಯಿಂದ ನನ್ನ ಕಡೆಗೆ ನೋಡುತ್ತಾ ನೋಡುತ್ತಾ ಮೆಲ್ಲಮೆಲ್ಲಗೆ ನನ್ನ ಕಡೆಗೆ ಬಂದಳು. ಸ್ತಂಭಿತನಾಗಿ 'ಈಕೆ ಯಾರು?' ಎಂದು ಯೋಚಿಸುತ್ತಿದ್ದೆ ಅಷ್ಟುಹೊತ್ತಿಗೆ ಎಲ್ಲಿಂದಲೋ ಆಂಜನೇಯನು ಬಂದು ಆಕೆಯ ಕಾಲ ಹತ್ತಿರ ಕೂತುಕೊಂಡ. ಆಗ ನನ್ನ ಮನಸ್ಸಿಗೆ ಹಾಗೇ ಹೊಳೆಯಿತು:—ಸೀತಾ! ಜನ್ಮದುಃಖಿನೀ ಸೀತಾ!! ಜನಕ ರಾಜನಂದಿನೀ ಸೀತಾ!! ರಾಮಮಯ ಜೀವಿತಾ ಸೀತಾ!!! ಆಗ ತಾಯೀ, ತಾಯೀ, ಎಂದು ಆಕೆಯ ಕಾಲಮೇಲೆ ಬೀಳುವುದಕ್ಕೆ ಹೋಗುತ್ತಿದ್ದೆ. ಅಷ್ಟರಲ್ಲಿ ಆಕೆಯು ಚಕಿತಳಾದವಳ ಹಾಗೆ ಬಂದು (ತಮ್ಮ ಶರೀರವನ್ನು ತೋರಿಸಿ) ಇದರೊಳಗೆ ಪ್ರವೇಶಮಾಡಿದಳು. ಆನಂದದಿಂದಲೂ ವಿಸ್ಮಯದಿಂದಲೂ ಬಾಹ್ಯಜ್ಞಾನ ಶೂನ್ಯನಾಗಿ ನೆಲದಮೇಲೆ ಬಿದ್ದುಬಿಟ್ಟೆ".

ಈ ನಾಲ್ಕು ವರ್ಷಗಳಲ್ಲಿಯೇ ಪರಮಹಂಸರು ಇನ್ನೂ ಅನೇಕ ಸಾಧನಗಳನ್ನು ಮಾಡಿದರು. ಮನಸ್ಸಿನಿಂದ ಹಣದಮೇಲಿನ ಆಸಕ್ತಿಯನ್ನು ದೂರಮಾಡುವುದಕ್ಕಾಗಿ ಕೆಲವು ಬಂಗಾರದ ನಾಣ್ಯಗಳನ್ನೂ ಅದರ ಜೊತೆಯಲ್ಲಿ ಸ್ವಲ್ಪ ಮಣ್ಣನ್ನೂ ಹಿಡಿದುಕೊಂಡು ಸದಸದ್ವಿಚಾರ ಮಾಡಲಾರಂಭಿಸಿ, ಸಚ್ಚಿದಾನಂದಸ್ವರೂಪವಾದ ನಿತ್ಯವಸ್ತುವನ್ನು ಪಡೆಯುವುದಕ್ಕೆ ಅದರಿಂದ ಯಾವ ಸಹಾಯವೂ ಆಗುವುದಿಲ್ಲವೆಂದು ನಿರ್ಧರಮಾಡಿಕೊಂಡು, ಮನಸ್ಸಿನಲ್ಲಿ ಅದು ದೃಢವಾಗಿಲ್ಲುವಂತೆ 'ಮಣ್ಣೇಚಿನ್ನ' 'ಚಿನ್ನವೇ ಮಣ್ಣು' ಎಂದು ಮೇಲಿಂದ ಮೇಲೆ ಹೇಳುತ್ತ ಅವೆರಡನ್ನೂ ಗಂಗೆಯೊಳಗೆ ಹಾಕಿಬಿಟ್ಟರು. ಆ ಬ್ರಹ್ಮಸ್ತಂಬ ಪರ್ಯಂತವಾಗಿರತಕ್ಕ ಸಕಲವಸ್ತು ವ್ಯಕ್ತಿಗಳೂ ಜಗನ್ಮಾತೆಯ ಅಂಶವೆಂಬುದನ್ನು ದೃಢಮಾಡಿಕೊಳ್ಳುವುದಕ್ಕಾಗಿ ದೇವಸ್ಥಾನದಲ್ಲಿ ಕಂಗಾಳಿಗಳು ಊಟಮಾಡಿ ಬಿಟ್ಟುಹೋಗಿದ್ದ ಎಂಜಲೆಲೆ

ಯಿಂದ ಕೆಲವು ಅಗುಳುಗಳನ್ನು ತೆಗೆದುಕೊಂಡು ಅದೂ ದೇವಿಯ ಪ್ರಸಾದವೆಂಬ ಬುದ್ಧಿಯಿಂದ ಸ್ವೀಕರಿಸಿದರು. ಮನಸ್ಸಿನಿಂದ ಅಹಂಕಾರಾಭಿಮಾನಗಳನ್ನು ದೂರಮಾಡುವುದಕ್ಕಾಗಿಯೂ ಮತ್ತು ಹೊಲೆಯ ಮಾದಿಗ ಮುಂತಾದ ಜನಗಳಿಗಿಂತಲೂ ತಾವು ಯಾವ ಅಂಶವಲ್ಲಿಯೂ ದೊಡ್ಡವರಲ್ಲವೆಂದು ದೃಢಮಾಡಿಕೊಳ್ಳುವುದಕ್ಕಾಗಿಯೂ ಹಲಾಲುಕೋರರು ತೊಳೆಯತಕ್ಕ ಅಶುಚಿಸ್ಥಾನವನ್ನು ಸ್ವಹಸ್ತದಿಂದ ಚೊಕ್ಕಟಮಾಡಿದರು. ಶ್ರೀಗಂಧ, ಅಮೇಧ್ಯ ಎರಡು ಪದಾರ್ಥಗಳೂ ಪಂಚಭೂತ ವಿಕಾರಗಳೆಂದು ನಿರ್ಧರಮಾಡಿಕೊಂಡು ನಾಲಗೆಯಿಂದ ಅಮೇಧ್ಯವನ್ನು ಮುಟ್ಟಿದರು. ಇವೇ ಮೊದಲಾದ ನಾವು ಹಿಂದೆ ಎಂದೂ ಕೇಳಿಯೇ ಅರಿಯದ ಅನೇಕ ಸಾಧನೆಗಳನ್ನು ಈ ಕಾಲದಲ್ಲಿ ಮಾಡಿದರು. ದಕ್ಷಿಣೇಶ್ವರಕ್ಕೆ ಬಂದ ಒಬ್ಬ ಸಿದ್ಧಪುರುಷನ ಸಹಾಯದಿಂದ ಹಠಯೋಗವನ್ನು ಅಭ್ಯಾಸಮಾಡಿದ್ದೂ ಈ ಕಾಲದಲ್ಲಿಯೇ. ಶಿಷ್ಯಮಂಡಲಿಯಲ್ಲಿದ್ದ ಕೆಲವರು ಈ ಹಠಯೋಗದಲ್ಲಿ ಉಪದೇಶಮಾಡಿಸಿಕೊಳ್ಳಬೇಕೆಂದು ಪರಮಹಂಸರ ಹತ್ತಿರಕ್ಕೆ ಹೋಗಿದ್ದಾಗ ಅವರಿಗೆ ಹೀಗೆಂದು ಉತ್ತರ ಕೊಡುತ್ತಿದ್ದರು:—"ಆ ಸಾಧನಗಳೆಲ್ಲಾ ಈ ಕಾಲಕ್ಕಲ್ಲವೊ! ಕಲಿಗಾಲದಲ್ಲಿ ಜೀವಿಗಳು ಅಲ್ಪಾಯುಗಳು ಮತ್ತು ಅನ್ನಗತಪ್ರಾಣರು; ಈಗ ಹಠಯೋಗ ಅಭ್ಯಾಸಮಾಡಿ ದೇಹಗಟ್ಟಿಮಾಡಿಕೊಂಡು, ರಾಜಯೋಗ ಅಭ್ಯಾಸಮಾಡಿ ಈಶ್ವರನನ್ನು ಪ್ರಾರ್ಥಿಸುವುದಕ್ಕೆ ಸಮಯವೆಲ್ಲಿದೆ? ಅದೂ ಅಲ್ಲದೆ ಹಠಯೋಗವನ್ನು ಅಭ್ಯಾಸಮಾಡಬೇಕಾದರೆ ಅದರಲ್ಲಿ ಸಿದ್ಧನಾದ ಗುರುವಿನ ಜೊತೆಯಲ್ಲಿಯೇ ಮೂರು ಹೊತ್ತೂ ಇದ್ದುಕೊಂಡು ಊಟ ತಿಂಡಿತೀರ್ಥಗಳಲ್ಲೆಲ್ಲಾ ಅವನು ಹೇಳಿದ ಹಾಗೆ ಕೇಳಿಕೊಂಡು ಬಹುಕಾಲ ಕಠೋರ ನಿಯಮದಿಂದಿರಬೇಕು. ನಿಯಮ ಮಾಡುವುದರಲ್ಲಿ ಒಂದಿಷ್ಟು ಹೆಚ್ಚು ಕಮ್ಮಿಯಾಯಿತು ಅಂದರೆ ಏನಾದರೂ ರೋಗಗಳು ತಲೆಹಾಕಿಕೊಳ್ಳುವುವು; ಅನೇಕ ಸಮಯಗಳಲ್ಲಿ ಇಂಥಸಾಧಕರು ಸತ್ತೇಹೋಗುವರು

ಆದಕ್ಕೋಸ್ಕರ ಇದನ್ನೆಲ್ಲಾ ಮಾಡಬೇಡಿ, ಅದೂ ಅಲ್ಲದೆ, ಮನೋ ನಿರೋಧಕೋಸ್ಕರ ತಾನೇ ಪ್ರಾಣಾಯಾಮ, ಕುಂಭಕ ಇವುಗಳನ್ನೆಲ್ಲ ಮಾಡಿ ವಾಯುವನ್ನು ತಡೆದುಕೊಳ್ಳುವದು? ದೇವರಲ್ಲಿ ಭಕ್ತಿ ಯಿಂದ ಧ್ಯಾನಮಾಡುತ್ತ ಹೋದರೆ ಮನಸ್ಸು, ವಾಯು ಎರಡೂ ತಮ್ಮಷ್ಟಕ್ಕೆ ತಾವೇ ನಿರುದ್ಧವಾಗುತ್ತವೆ; ನೋಡಿ ಬೇಕಾದರೆ! ಕಲಿಗಾಲದಲ್ಲಿ ಜೀವಿಗಳು ಅಲ್ಪಾಯು ಅಲ್ಪಶಕ್ತಿಗಳೆಂದು ಅಂದು ಕೊಂಡೇ ಭಗವಂತನು ಅವರಮೇಲೆ ಕೃಪೆಮಾಡಿ ಈಶ್ವರಲಾಭದ ಮಾರ್ಗವನ್ನು ಇಷ್ಟು ಸುಲಭವಾಗಿ ಮಾಡಿಕೊಟ್ಟಿದ್ದಾನೆ. ಹೆಂಡತಿ ಮಕ್ಕಳು ಹೋದರೆ ಹೊಟ್ಟೆಯಲ್ಲಿ ಯಾವ ವಿಧವಾದ ವ್ಯಾಕುಲತೆ ಇರುತ್ತದೆಯೊ ದೇವರಿಗೋಸ್ಕರವಾಗಿ ಅದೇ ವಿಧವಾದ ವ್ಯಾಕು ಲತೆ—ಇಪ್ಪತ್ತುನಾಲ್ಕೇ ಗಂಟೆಯ ಹೊತ್ತು ಸಾಕು—ಯಾರಲ್ಲಿ ಯಾದರೂ ಸ್ಥಾಯಿಯಾಗಿ ಇದ್ದುಬಿಟ್ಟರೆ ಅಂಥವರಿಗೆ ಅವನು ದರ್ಶನ ಕೊಟ್ಟೇಕೊಡುವನು".

ಪರಮಹಂಸರು ಮೇಲೆಹೇಳಿದ ಕಠೋರವಾದ ಸಾಧನಗಳಿಂ ದಲೂ ವ್ಯಾಕುಲತೆಯಿಂದಲೂ ಅನ್ನತಿನ್ನದೆ, ನಿದ್ರೆಮಾಡದೆ, ಮೈ ಯಲ್ಲಿ ಉರಿ ಎಂದು ಸಂಕಟಪಡುತ್ತಿರುತ್ತ, ಆಗಾಗ್ಗೆ ಮೂರ್ಛಿತ ನಂತೆ ಪ್ರಜ್ಞೆತಪ್ಪಿ ಬೀಳುತ್ತ, ಬಡವಾಗಿ ಹೋದದ್ದನ್ನು ನೋಡಿ ಹೃದಯನೂ ಮಥುರಾನಾಥನೂ ಇವೆಲ್ಲಾ ಏನೋರೋಗದ ಲಕ್ಷಣ ಗಳಿರಬಹುದೆಂದು ಯೋಚಿಸಿ ಪ್ರಸಿದ್ಧರಾದ ವೈದ್ಯರನ್ನು ಕರೆತಂದು ಔಷಧಿಯನ್ನು ಕೊಡಿಸಿದರು. ರೋಗವು ಔಷಧಿಯಿಂದ ಹೆಚ್ಚಾ ಯಿತೇ ಹೊರತು ಕಡಿಮೆಯಾಗಲಿಲ್ಲ. ಈ ವರ್ತಮಾನವು ಕಾಮಾರ ಪುಕುರಕ್ಕೆ ತಲಪಿ ಶ್ರೀಮತಿ ಚಂದ್ರಾದೇವಿಯ ಕಿವಿಗೆ ಬಿತ್ತು. ಆಕೆ ಯು ಕೂಡಲೆ ಮಗನನ್ನು ತನ್ನ ಹತ್ತಿರಕ್ಕೆ ಕರೆಸಿಕೊಂಡು ಕಂಡು ಕೇಳಿದ ಔಷಧಿಗಳನ್ನೆಲ್ಲಾ ಮಾಡಿದಳು; ಜಪತಪ ಶಾಂತಿಗಳನ್ನೂ ಮಾಡಿಸಿದ್ದಾಯಿತು; ಯಾವುದರಿಂದಲೂ ಏನೂ ಆಗಲಿಲ್ಲ. ಆದರೂ ಪರಮಹಂಸರಲ್ಲಿ ಒಂದೊಂದು ಸಮಯ ಹಿಂದಿನಂತೆ ಎಲ್ಲ

ರಲ್ಲಿಯೂ ಸರಳವಾದ ನಡತೆ, ದೇವಭಕ್ತಿ, ಮಾತೃಭಕ್ತಿ ಇವುಗಳು ಕಂಡು ಬರುತ್ತಿದ್ದುವು. ಮತ್ತೆ ಕೆಲವು ಕಾಲಗಳಲ್ಲಿ ಎಲ್ಲ ವಿಷಯಗಳಲ್ಲಿಯೂ ಔದಾಸೀನ್ಯ, ಯಾರಿಗೂ ಗೊತ್ತಾಗದ ಒಂದು ವಿಷಯಕ್ಕಾಗಿ ವಿಶೇಷ ವ್ಯಾಕುಲತೆ. ಶ್ಮಶಾನಗಳಲ್ಲಿ ಹಗಲು ರಾತ್ರಿಯನ್ನದೆ ಏಕಾಕಿಯಾಗಿ ಹೋಗಿ ಕುಳಿತುಕೊಳ್ಳುವುದು, ಇದ್ದಕ್ಕಿದ್ದಹಾಗೆ. ತಾಯೀ, ತಾಯೀ, ಎಂದು ಅಳುವುದು ಇವು ಕಂಡುಬರುತ್ತಿದ್ದುವು.

ಕ್ರಮಕ್ರಮವಾಗಿ ದೇಹಸ್ಥಿತಿಯು ಮೊದಲಿನಂತೆ ಆಗುತ್ತ ಬಂತು. ಆದರೆ ಸಾಂಸಾರಿಕ ವಿಚಾರಗಳಲ್ಲಿ ಔದಾಸೀನ್ಯ ಬಾಲ್ಯದಲ್ಲಿ ಹೇಗೋ ಈಗ ಯೌವನದಲ್ಲಿಯೂ ಹಾಗೇ; ಇದನ್ನೆಲ್ಲ ನೋಡಿ ಚಂದ್ರಾದೇವಿಯು ಮಗನಿಗೆ ಮದುವೆಮಾಡಿ ಬಿಡುವುದು ಉತ್ತಮವೆಂದು ಸ್ಥಿರಮಾಡಿಕೊಂಡಳು. ಏಕೆಂದರೆ ಮನೆಯಲ್ಲಿ ಹೆಂಡಿರು ಮಕ್ಕಳಿದ್ದರೆ ಅವರ ಸುಖದುಃಖಗಳನ್ನು ನೋಡಿಕೊಳ್ಳಬೇಕಾದ ಆವಶ್ಯಕತೆ ಬೀಳುವುದರಿಂದ ಸಂಸಾರದಲ್ಲಿ ಔದಾಸೀನ್ಯವು ತನ್ನಷ್ಟಕ್ಕೆ ತಾನೇ ಹೋಗುವುದೆಂದು ಭಾವಿಸಿದಳು.

ಹುಚ್ಚುಬಿಡುವವರೆಗೂ ಮದುವೆಯಾಗದು, ಮದುವೆಯಾಗುವ ವರೆಗೂ ಹುಚ್ಚು ಬಿಡದು ಎಂಬ ಸಮಾಚಾರಕ್ಕೆ ಬಂತು. ಮೊದಲೇ ಬಡವರು; ಹುಡುಗನಸ್ಥಿತಿ ನೋಡಿದರೆ ಹೀಗೆ! ಇದನ್ನು ಕಂಡು ಕಂಡು ಹೆಣ್ಣುಕೊಡುವವರು ಯಾರು? ಎಷ್ಟೆಷ್ಟೋ ಕಡೆ ವಿಚಾರಿಸಿದ್ದಾಯಿತು. ಏನೂ ಪ್ರಯೋಜನವಾಗಲಿಲ್ಲ. ಆದ್ದರಿಂದ ಆ ಮುದುಕಿಯು ಪುನಃ ಕೊರಗಲಾರಂಭಿಸಿದಳು. ಆಗ ಒಂದು ದಿನ ಪರಮಹಂಸರು ಭಾವಾವಿಷ್ಟರಾಗಿ "ಅಲ್ಲಿ ಇಲ್ಲಿ ಹುಡುಕಿ ಪ್ರಯೋಜನವಿಲ್ಲ; ಜಯರಾಮಬಾಟಿಯ ಶ್ರೀರಾಮ ಮುಖ್ಯೋಪಾಧ್ಯಾಯನ ಮನೆಗೆ ಹೋಗಿ ನೋಡಿರಿ; ಮದುವೆಯಾಗುವ ಹುಡುಗಿಯನ್ನು ಮುಡುಪುಕಟ್ಟಿಟ್ಟಿದ್ದಾರೆ". ಎಂದು ಹೇಳಿದರು. ಆಗ ಆ ಮಾತನ್ನು ಯಾರೂ ಲಕ್ಷ್ಯಮಾಡಲಿಲ್ಲ. ಏನಾದರೂ ಆಗಲಿ ಎದ್ದು ಹೋಗುವ ಮಾತು ಬಿದ್ದು ಹೋಗಲಿ ಎಂದು ವಿಚಾ

ರಿಸುವುದಕ್ಕೆ ಹೋದರು. ಹೋಗುವುದೇತಡ, ಅವರು ಕನ್ಯೆಯನ್ನು ಕೊಡುವುದಕ್ಕೆ ಒಪ್ಪಿದರು. ಕೆಲವು ದಿನಗಳಲ್ಲಿ ವಿವಾಹವೂ ನೆರವೇರಿತು. (1859.)

ಮದುವೆಯಾದ ಮೇಲೆ ಪರಮಹಂಸರು ಆರೇಳು ತಿಂಗಳ ದಿವಸ ತಮ್ಮ ಊರಲ್ಲೇ ಇದ್ದರು. ಮನೆಯಲ್ಲಿದ್ದ ಬಡತನದ ತಾಪತ್ರಯಗಳನ್ನು ನೋಡಿ ಕಲ್ಕತ್ತೆಗೆ ಹಿಂತಿರುಗಿಬಂದು ಪುನಃ ಅರ್ಚಕನ ಕೆಲಸಕ್ಕೆ ನಿಂತರು. ಒಂದು ದಿನ ಸರಿಯಾಗಿ ಪೂಜೆ ಮಾಡಿದರೋ ಇಲ್ಲವೋ ಅವರ ಮನಸ್ಸು ದೇವರ ಪೂಜೆಯಲ್ಲಿ ಪೂರ್ತಿಯಾಗಿ ನಿಂತುಹೋಯಿತು. ತಾಯಿ, ಹೆಂಡತಿ, ಸಂಸಾರ, ಸಂಪಾದನೆ ಎಲ್ಲವೂ ಪೂರ್ತಿಯಾಗಿ ಮರೆತುಹೋದುವು. ಪುನಃ "ಏನುಮಾಡಿದರೆ ಸರ್ವದಾ ದೇವಿಯನ್ನು ನೋಡಿಯೇನು" ಎಂಬ ಯೋಚನೆಯು ಮನಸ್ಸನ್ನೆಲ್ಲ ತುಂಬಿಕೊಂಡಿತು. ಹಿಂದಿನ ಚಿಹ್ನೆಗಳೆಲ್ಲ ಮತ್ತೆ ಕಾಣಿಸಿಕೊಂಡುವು. ಎದೆ ಕೆಂಪಗಾಯಿತು; ಕಣ್ಣಿನಿಂದ ನೀರು ಸುರಿಯಲು ಮೊದಲಾಯಿತು; ನಿದ್ರೆಹೋಯಿತು: ಗಾತ್ರ ದಾಹವು ಪ್ರಾರಂಭವಾಯಿತು.

---

# ಏಳನೆಯ ಅಧ್ಯಾಯ.

## ಸಾಧನಗಳು — ಎರಡನೆಯಭಾಗ : 1859—1862.

ಈಗ ಪರಮಹಂಸರು ವಿಧ್ಯುಕ್ತವಾಗಿ ಪೂಜೆಪುರಸ್ಕಾರಗಳನ್ನು ಮಾಡುವುದು ಅಸಾಧ್ಯವಾಗಿ ದೇವಿಯ ಅರ್ಚನೆಯ ಕೆಲಸವನ್ನು ಬಿಟ್ಟಿದ್ದರೂ ದೇವಿಯ ಪೂಜೆಗಾಗಿ ಪ್ರತಿನಿತ್ಯವೂ ಬೆಳಗ್ಗೆಹೊತ್ತು ಹೂಬಿಡಿಸಿಕೊಂಡು ಬಂದು ಮಾಲೆಗಳನ್ನು ಕಟ್ಟಿಕೊಡುತ್ತಿದ್ದರು. ಒಂದುದಿನ ಬೆಳಗ್ಗೆ ಹೀಗೆ ಮಾಲೆಗೆಂದು ಗಂಗಾತೀರದ ಹೂತೋಟದಲ್ಲಿ ಹೂಬಿಡಿಸುತ್ತಿದ್ದರು. ಆಗ ಒಂದು ದೋಣಿಯು ದಕ್ಷಿಣೇಶ್ವರದ ದೇವಸ್ಥಾನದ ಕಡೆಗೆ ಬರುವಂತೆ ಕಂಡುಬಂತು. ಕಾವಿಯ ಸೀರೆಯನ್ನುಟ್ಟು ಭೈರವೀವೇಷಧಾರಿಣಿಯಾದ ಒಬ್ಬ ಹೆಂಗಸು ಕೈಯಲ್ಲಿ ಒಂದು ಪುಸ್ತಕಗಳ ದಫ್ತರವನ್ನು ಹಿಡಿದುಕೊಂಡು ದೋಣಿಯಿಂದ ಇಳಿದು ಬಂದಳು. ಆಕೆಯು ಬರುತ್ತಿದ್ದದ್ದನ್ನು ನೋಡಿ ಪರಮಹಂಸರು ದೇವಸ್ಥಾನಕ್ಕೆ ಹೋಗಿ ಹೃದಯನನ್ನು ಕೂಗಿ ತಾನು ಕರೆದೆನೆಂದು ಹೇಳಿ ಭೈರವೀ ಬ್ರಾಹ್ಮಣಿಯನ್ನು ತಾನಿದ್ದಲ್ಲಿಗೆ ಕರೆದುಕೊಂಡು ಬರಲು ಹೇಳಿದನು. ಹೃದಯನು ಸ್ವಲ್ಪ ಹಿಂದುಮುಂದು ನೋಡಿ "ಹೆಂಗಸು ಅಪರಿಚಿತಳು; ಕರೆದರೆ ತಾನೇ ಇಲ್ಲಿಗೆ ಬರುವಳೇ?" ಎಂದು ಕೇಳಲು, ಪರಮಹಂಸರು "ನನ್ನ ಹೆಸರನ್ನು ಹೇಳಿ ನಾನು ಕರೆಯುತ್ತೇನೆಂತ ಹೇಳು; ಬರುತ್ತಾಳೆ" ಎಂದು ಹೇಳಿದರು. ಅದರಂತೆ ಹೃದಯನು ಹೋಗಿ ಕರೆಯಲು ಭೈರವಿಯು ಹಿಂದೆ ಮುಂದೆ ನೋಡದೆ ಯಾವ ಪ್ರಶ್ನೆಯನ್ನೂ ಮಾಡದೆ ಅವರಿದ್ದೆಡೆಗೆ ಬಂದುಬಿಟ್ಟಳು.

ಪರಮಹಂಸರನ್ನು ನೋಡಿ ಅತ್ಯಂತ ಆನಂದದಿಂದ ಭೈರವಿಯ ಕಣ್ಣಿಂದ ಆನಂದಾಶ್ರುವು ಹರಿಯುವುದಕ್ಕೆ ಆರಂಭವಾಯಿತು.

ಕಣ್ಣೀರನ್ನು ಒರಸಿಕೊಳ್ಳುತ್ತಾ "ನೀನು ಇಲ್ಲಿ ಇದ್ದೀಯೇನು? ನೀನು ಗಂಗಾತೀರದಲ್ಲಿರುವೆ, ಎಂದು ತಿಳಿದು ನಿನ್ನನ್ನು ಹುಡುಕಿಕೊಂಡು ತಿರುಗಾಡುತ್ತಿದ್ದೆನು. ಇಷ್ಟು ದಿನಗಳಮೇಲೆ ನಿನ್ನನ್ನು ನೋಡಿದೆನು" ಎಂದು ಹೇಳಿದಳು. ಪರಮಹಂಸರು "ಅಮ್ಮಾ ನನ್ನ ಸುದ್ದಿ ನಿಮಗೆ ಹೇಗೆ ಗೊತ್ತಾಯಿತು?" ಎಂದು ಕೇಳಲು ಬ್ರಾಹ್ಮಣಿಯು "ಜಗದಂಬೆಯ ಅನುಗ್ರಹದಿಂದ ನನಗೆ ಬಹಳದಿನಗಳ ಹಿಂದೆ ಈ ಸುದ್ದಿಯು ಗೊತ್ತಾಯಿತು" ಎಂದು ಉತ್ತರಕೊಟ್ಟಳು. ಆಮೇಲೆ ಅವರು ಆಕೆಯ ಹತ್ತಿರ ಕುಳಿತು ಮಕ್ಕಳು ತಮ್ಮ ತಾಯಿಯ ಮುಂದೆ ಹೇಳುವಹಾಗೆ ತಮ್ಮ ಅಪೂರ್ವವಾದ ದರ್ಶನಗಳು, ಪೂಜೆಮಾಡುತ್ತ ಮಾಡುತ್ತ ಬಾಹ್ಯಜ್ಞಾನಹೋಗುವುದು, ಮೈಯುರಿ, ನಿದ್ರೆಯಿಲ್ಲ ದಿರುವುದು, ಜನಗಳು ಹುಚ್ಚುಹಿಡಿದಿದೆ ರೋಗಬಂದಿದೆ ಎಂದು ಹೇಳುವುದು ಮುಂತಾದ ವಿಷಯಗಳನ್ನೆಲ್ಲ ಮುಚ್ಚುಮರೆ ಇಲ್ಲದೆ ಹೇಳಿ "ನನಗೆ ಯಾಕೆ ಹೀಗಾಗುತ್ತದೆ? ನನಗೆ ನಿಜವಾಗಿಯೂ ಹುಚ್ಚುಹಿಡಿದಿದೆಯೇ? ದೇವಿಯನ್ನು ಮನಃಪೂರ್ವಕವಾಗಿ ಧ್ಯಾನ ಮಾಡಿದ್ದರಿಂದ ನನಗೆ ರೋಗಬಂದಿದೆಯೆ?" ಎಂದು ಕೇಳಿದರು. ಅದಕ್ಕೆ ಉತ್ತರವಾಗಿ ಭೈರವಿಯು "ನಿನಗೆ ಹುಚ್ಚೆಂದು ಹೇಳಿದವರಾ ರಪ್ಪಾ! ನಿನಗೆ ಹುಚ್ಚುಹಿಡಿದಿಲ್ಲ, ಇದು ಮಹಾಭಾವದಲಕ್ಷಣ. ನಿನ್ನ ಈ ಸ್ಥಿತಿಯು ಯಾರಿಗೂ ಗೊತ್ತಾಗುವುದಿಲ್ಲ. ಆದ್ದರಿಂದಲೇ ಅವರು ಹಾಗೆ ಹೇಳುವುದು. ರಾಧೆಗೂ ಚೈತನ್ಯನಿಗೂ ಹೀಗೆಯೇ ಆಗಿತ್ತು. ಇದೆಲ್ಲವೂ ಭಕ್ತಿಶಾಸ್ತ್ರದಲ್ಲಿ ಬರೆದಿದೆ. ಅದನ್ನೆಲ್ಲ ನಾನು ನಿನಗೆ ಓದಿಹೇಳುತ್ತೇನೆ." ಎಂದು ಹೇಳಿದಳು.

ಭೈರವಿಯು ಭಕ್ತಿಶಾಸ್ತ್ರವನ್ನು ಚೆನ್ನಾಗಿ ಓದಿದ ಪಂಡಿತಳಾ ಗಿದ್ದಳು. ಆಕೆಯು ಚೈತನ್ಯಚರಿತಾಮೃತ, ಚೈತನ್ಯಭಾಗವತ ಮುಂತಾದ ಭಕ್ತಿಶಾಸ್ತ್ರಗ್ರಂಥಗಳಲ್ಲಿ ಚೈತನ್ಯದೇವನ ನಡೆನುಡಿ ಆಚಾರವ್ಯವಹಾರ ಮುಂತಾದುವುಗಳ ವಿಚಾರವಾಗಿ ಏನೇನು ಬರೆ ದಿದೆಯೊ ಅದರೊಡನೆ ಪರಮಹಂಸರ ಲಕ್ಷಣಗಳನ್ನೆಲ್ಲ ಹೋಲಿಸಿ

ನೋಡಿ ಅವರು ಅವತಾರಪುರುಷರಿರಬೇಕೆಂದು ನಿರ್ಧರಿಸಿದಳು. ಈ ಕಾಲದಲ್ಲಿ ಒಂದುದಿನ ಪರಮಹಂಸರು ಪಂಚವಟಿಯ ಒಳಗೆ ಮಥುರಾನಾಥನೊಡನೆ ಕುಳಿತುಕೊಂಡು ಮಾತನಾಡುತ್ತ, ಮಾತಿಗೆ ಮಾತು ಬಂದು ಭೈರವಿಯು ತಮ್ಮ ವಿಚಾರವಾಗಿ ಹೇಳಿದ್ದನ್ನೆಲ್ಲ ಅವನಿಗೆ ತಿಳಿಸಿದರು. ಅದನ್ನು ಕೇಳಿ ಮಥುರನು "ಆಕೆ ಏನು ಹೇಳಿದರೇನು? ಅವತಾರಗಳು ಹತ್ತಕ್ಕಿಂತ ಹೆಚ್ಚು ಉಂಟೇನು? ಆದ್ದರಿಂದ ಆಕೆಯ ಮಾತು ಹೇಗೆ ಸತ್ಯವಾದೀತು? ಆದರೆ ನಿಮ್ಮ ಮೇಲೆ ಜಗದಂಬೆಯ ಕೃಪೆಯಿದೆ ಎಂಬುದೇನೋ ಸತ್ಯ." ಎಂದು ಹೇಳಿದನು. ಇದಾದ ಸ್ವಲ್ಪಹೊತ್ತಿನಮೇಲೆ ಬ್ರಾಹ್ಮಣಿಯು ಅಲ್ಲಿಗೆ ಬಂದಳು. ಪರಮಹಂಸರು ಆಕೆಗೆ ಮಥುರಾನಾಥನ ಪರಿಚಯಮಾಡಿಕೊಟ್ಟು ಆಕೆಯನ್ನು ಕುರಿತು "ಅಮ್ಮಾ, ನೀನು ನನ್ನ ಸಂಬಂಧವಾಗಿ ಹೇಳಿದ್ದನ್ನೆಲ್ಲ ಈತನಿಗೆ ಹೇಳಿದೆ. ಅದಕ್ಕೆ ಈತನು ಅವತಾರಗಳು ಹತ್ತೇಹೊರತು ಹೆಚ್ಚೆಲ್ಲಾದರೂ ಉಂಟೆ ಎಂದನು" ಎಂದು ಹೇಳಿದರು. ಆಗ ಬ್ರಾಹ್ಮಣಿಯು ಮಥುರನಿಗೆ ಆಶೀರ್ವಾದಮಾಡಿ "ಯಾಕೆ? ಭಾಗವತದಲ್ಲಿ ಇಪ್ಪತ್ತನಾಲ್ಕು ಮುಖ್ಯ ಮುಖ್ಯವಾದ ಅವತಾರಗಳಿವೆ ಎಂದೂ ಅಲ್ಲದೆ ಅಸಂಖ್ಯ ಅವತಾರಗಳಿವೆ ಎಂದೂ ಹೇಳಿಲ್ಲವೆ? ವೈಷ್ಣವಗ್ರಂಥಗಳಲ್ಲಿ ಚೈತನ್ಯದೇವನ ಪುನರಾಗಮನದ ಮಾತು ಸ್ಪಷ್ಟವಾಗಿದೆಯಲ್ಲ!" ಎಂದು ಹೇಳಲು ಮಥುರನು ಅದಕ್ಕೆ ಪ್ರತ್ಯುತ್ತರ ಹೇಳುವುದಕ್ಕೆ ತೋರದೆ ಸುಮ್ಮನಾದನು.

ಬ್ರಾಹ್ಮಣಿಯು ಶಾಸ್ತ್ರಜ್ಞಾನವನ್ನು ಪಡೆದ ಪಂಡಿತಳಷ್ಟೇ ಅಲ್ಲ. ಶಾಸ್ತ್ರದಲ್ಲಿ ಹೇಳಿದ ಸಾಧನಗಳನ್ನು ಅನುಷ್ಠಾನಮಾಡಿ ತಿಳಿದುಕೊಂಡಿದ್ದಳು. ಆದ್ದರಿಂದ ಪರಮಹಂಸರನ್ನು ತಂತ್ರಸಾಧನೆ ಮಾಡಲು ಪ್ರೇರೇಪಿಸಿ, ಗುರುರೂಪವಾಗಿ ನಿಂತು ಆತನಿಂದ ಎಲ್ಲ ವಿಧವಾದ (ಸುಮಾರು ಅರವತ್ತನಾಲ್ಕು) ತಂತ್ರಸಾಧನೆಗಳನ್ನೂ ಸಾಂಗೋಪಾಂಗವಾಗಿ ಮಾಡಿಸಿದಳು. ತಂತ್ರಸಾಧನೆಯು ನಮ್ಮ ದೇಶದಲ್ಲಿ ರೂಢಿಯಲ್ಲಿಲ್ಲದಿರುವುದೇ ಮುಂತಾದ ಕಾರಣಗಳಿಂದ

ಅದನ್ನು ಇಲ್ಲಿ ವಿವರಿಸಿಲ್ಲ. ಆದರೆ ತಂತ್ರಶಾಸ್ತ್ರಗಳಲ್ಲಿ ಹೇಳಿರುವ ರೀತಿ ಅನುಷ್ಠಾನಮಾಡುವುದರ ಉದ್ದೇಶವನ್ನು ಮಾತ್ರ ಇಲ್ಲಿ ಸೂಚಿಸುತ್ತೇವೆ. ರೂಪರಸಾದಿಗಳು ಜನರ ಮನಸ್ಸನ್ನು ಆಕರ್ಷಣಮಾಡಿ ಪುನಃಪುನಃ ಅವರನ್ನು ಜನನಮರಣಗಳಲ್ಲಿ ಸಿಕ್ಕಿಸುತ್ತವೆ. ಮತ್ತು ಜ್ಞಾನಸಂಪಾದನೆ ಮಾಡಗೊಡದೆ ಈಶ್ವರಸಾಕ್ಷಾತ್ಕಾರಕ್ಕೆ ಅಡ್ಡಿಯಾಗಿಬರುತ್ತವೆ; ಅಪೂರ್ವವಾದ ಇಂದ್ರಿಯನಿಗ್ರಹದ ಮೂಲಕ ಆ ರೂಪ ರಸಾದಿಗಳನ್ನೂ ಈಶ್ವರಸ್ವರೂಪವೆಂದು ಅಭ್ಯಾಸ ಮಾಡಿಸುವುದೇ ತಾಂತ್ರಿಕ ಕ್ರಿಯೆಗಳ ಸಾಮಾನ್ಯವಾದ ಉದ್ದೇಶ. ಕಠೋರವಾದ ಇಂದ್ರಿಯನಿಗ್ರಹ ಮಾಡಿಕೊಂಡೇ ತಂತ್ರೋಕ್ತ ಸಾಧನಗಳನ್ನು ಅನುಷ್ಠಾನಮಾಡಲು ಮೊದಲುಮಾಡಬೇಕು. ಆದ್ದರಿಂದ ಸಾಮಾನ್ಯರಿಗೆ ಇದು ಅತ್ಯಂತ ಕಠಿಣ. ತಂತ್ರಸಾಧಕನು ಇಂದ್ರಿಯಗಳಿಗೆ ಸ್ವಲ್ಪ ವಶನಾದರೂ ಅವನಿಗೆ ಭಯಂಕರವಾದ ಅಧಃಪತನವಾಗುವುದು. ಬಹುಶಃ ಈ ಕಾರಣದಿಂದಲೇ, ಪರಮಹಂಸರು ಅವುಗಳನ್ನು ತಮ್ಮ ಶಿಷ್ಯರೆದುರಿಗೆ ವಿಸ್ತಾರವಾಗಿ ಹೇಳಿರಲಾರರು.)

ಈ ಸಾಧನೆಗಳು ಮುಗಿದಮೇಲೆ ಪರಮಹಂಸರಿಗೆ ಅಣಿಮಾದ್ಯಷ್ಟಸಿದ್ಧಿಗಳೂ ಸ್ವಾಧೀನವಾದುವು. ಆದರೆ ಅವರು ಅವುಗಳನ್ನು ಅಮೇಧ್ಯದಂತೆ ಹೇಯವೆಂದು ತಿಳಿದು ಅವುಗಳಕಡೆಗೆ ಸ್ವಲ್ಪವೂ ಲಕ್ಷ್ಯಕೊಡುತ್ತಿರಲಿಲ್ಲ. ಮುಂದೆ ಇವೆಲ್ಲ ನಡೆದ ಅನೇಕ ದಿನಗಳಮೇಲೆ ಒಂದುದಿವಸ ಅವರು ಪಂಚವಟಿಯಲ್ಲಿ ತಮ್ಮ ಪ್ರಿಯ ಶಿಷ್ಯರಾದ ವಿವೇಕಾನಂದರನ್ನು ಕರೆದು "ನೋಡೊ! ನನ್ನಲ್ಲಿ ಪ್ರಸಿದ್ಧವಾದ ಅಣಿಮಾದ್ಯಷ್ಟಸಿದ್ಧಿಗಳು ಇವೆ. ಆದರೆ ಅವುಗಳನ್ನು ನಾನು ಯಾವಾಗಲೂ ಪ್ರಯೋಗಮಾಡುವುದಿಲ್ಲ ಎಂದು ಮೊದಲಿನಿಂದಲೂ ಸಂಕಲ್ಪಮಾಡಿದ್ದೆ. ಅವುಗಳನ್ನು ಉಪಯೋಗಿಸಬೇಕಾದ ಅಗತ್ಯವೂ ಬರಲಿಲ್ಲ. ನೀನು ಧರ್ಮಪ್ರಚಾರ ಮೊದಲಾದ ಅನೇಕ ಕಾರ್ಯಗಳನ್ನು ಮಾಡಬೇಕಾಗುತ್ತೆ. ಆದ್ದರಿಂದ ನಿನಗೇ ಇವ

ಸ್ನೆಲ್ಲಾ ದಾನಮಾಡೋಣವೆಂದು ನಿಶ್ಚಯಮಾಡಿದ್ದೇನೆ; ಹಿಡಿ!" ಎಂದು ಹೇಳಿದರು. ಅದಕ್ಕೆ ಸ್ವಾಮಿಗಳು "ಮಹಾಶಯ, ಈಶ್ವರ ಲಾಭಮಾಡಿಕೊಳ್ಳಲು ಇವುಗಳಿಂದ ನನಗೇನಾದರೂ ಪ್ರಯೋಜನ ವಾಗುವುದೇ?" ಎಂದು ಕೇಳಿದರು. ಪರಮಹಂಸರು ಅದಕ್ಕೆ ಉತ್ತರವಾಗಿ "ಧರ್ಮಪ್ರಚಾರ ಮುಂತಾದ ಕಾರ್ಯಗಳಿಗೆ ಅವು ಗಳಿಂದ ಸ್ವಲ್ಪಮಟ್ಟಿಗೆ ಸಹಾಯವಾಗುವುದಾದರೂ ಈಶ್ವರಲಾಭಕ್ಕೆ ಯಾವವಿಧವಾದ ಪ್ರಯೋಜನವೂ ಆಗುವುದಿಲ್ಲ." ಎಂದರು. ಅದನ್ನು ಕೇಳಿ ಸ್ವಾಮಿಗಳು "ಹಾಗಾದರೆ ಅವುಗಳಿಂದ ನನಗೇನೂ ಕೆಲಸವಿಲ್ಲ" ಎಂದುಬಿಟ್ಟರು.

# ಎಂಟನೆಯ ಅಧ್ಯಾಯ

## ಸಾಧನೆಗಳು—ಮೂರನೆಯ ಭಾಗ: 1863—1866.

ತಾಂತ್ರಿಕ ಸಾಧನೆಗಳನ್ನು ಮುಗಿಸಿದಮೇಲೆ ಪರಮಹಂಸರ ಮನಸ್ಸು ಪುನಃ ವೈಷ್ಣವ ಮತದ ಸಾಧನೆಗಳ ಕಡೆಗೆ ತಿರುಗಿತು. ಅವರು ಮೊದಲು ನಾಲ್ಕು ವರ್ಷಗಳಲ್ಲಿ ವೈಷ್ಣವ ಶಾಸ್ತ್ರಗಳಲ್ಲಿ ಹೇಳಿರುವ ಶಾಂತ, ದಾಸ್ಯ, ಸಖ್ಯಭಾವಗಳನ್ನು ಅವಲಂಬನ ಮಾಡಿ ಸಿದ್ಧಿಯನ್ನು ಪಡೆದಿದ್ದರು. ಆದ್ದರಿಂದ ಈಗ ವಾತ್ಸಲ್ಯ, ಮಧುರ ಎಂಬ ಮಿಕ್ಕೆರಡು ಭಾವಗಳ ಸಾಧನೆಯನ್ನು ಮಾಡಿಬಿಡಬೇಕೆಂದು ನಿರ್ಧರಿಸಿದರು. ಈ ಕಾಲದಲ್ಲಿ ಅವರು ಜಗನ್ಮಾತೆಯ ಸಖಿಯೆಂಬ ಭಾವನೆಯಿಂದ ಹುವ್ವಿನ ಸರಗಳನ್ನು ಕಟ್ಟಿ ದೇವಿಗೆ ಅಲಂಕಾರಗಳನ್ನು ಮಾಡುತ್ತಲೂ, ಚಾಮರ ಹಾಕುತ್ತಲೂ, ಸೇವೆಮಾಡುತ್ತಿರುವರು. ಮಧುರಾನಾಥನಿಗೆ ಹೇಳಿ ಹೊಸಹೊಸ ಒಡವೆಗಳನ್ನು ಮಾಡಿಸಿ ದೇವಿಗೆ ಅವುಗಳನ್ನು ಇಟ್ಟು ಶೃಂಗಾರಮಾಡುವರು; ಮತ್ತು ಸ್ತ್ರೀವೇಷದಿಂದ ದೇವಿಯ ಎದುರಿಗೆ ನಿಂತು ನೃತ್ಯಗೀತಗಳನ್ನು ಮಾಡುತ್ತಿರುವರು. ಹೀಗಿರಲು ಈ ಕಾಲಕ್ಕೆ ತಕ್ಕಹಾಗೆ ವಾತ್ಸಲ್ಯಭಾವ ಸಾಧಕನಾದ ಜಟಾಧಾರಿಯೆಂಬ ಒಬ್ಬ ಸಾಧುವು ದಕ್ಷಿಣೇಶ್ವರ ದೇವಸ್ಥಾನಕ್ಕೆ ಬಂದನು.

ಜಟಾಧಾರಿಗೆ ಶ್ರೀರಾಮಚಂದ್ರನಲ್ಲಿ ಅದ್ಭುತವಾದ ಅನುರಾಗವಿತ್ತು. ಬಾಲಕ ರಾಮಚಂದ್ರಮೂರ್ತಿಯೇ ಅವನಿಗೆ ಅತ್ಯಂತ ಇಷ್ಟ. ಇಂಥ ರಾಮಚಂದ್ರಮೂರ್ತಿಯನ್ನು ಬಹುಕಾಲ ವಾತ್ಸಲ್ಯದಿಂದ ಸೇವೆಮಾಡಿದ್ದರಿಂದ ಆತನ ಮನಸ್ಸು ವಾತ್ಸಲ್ಯಭಾವದಿಂದ ತುಂಬಿ ಹೋಗಿತ್ತಲ್ಲದೆ ಶ್ರೀರಾಮಚಂದ್ರನ ಜ್ಯೋತಿರ್ಘನ ಬಾಲವಿಗ್ರಹವು ಪ್ರತ್ಯಕ್ಷವಾಗಿ ಅವನ ಎದುರಿಗೆ ಬಂದು ಭಕ್ತಿಯುಕ್ತವಾದ ಸೇವೆ

ಯನ್ನು ಗ್ರಹಣಮಾಡುತ್ತಿತ್ತಂತೆ. ಹೀಗೆ ಆತನು ಯಾವ ವಿಗ್ರಹದ ಅವಲಂಬನೆಯಿಂದ ತನಗೆ ದಿವ್ಯದರ್ಶನವಾಗಿತ್ತೋ ಆ ರಾಮವಿಗ್ರಹ ವನ್ನೇ ಸೇವೆಮಾಡುತ್ತ ಅನೇಕ ಪುಣ್ಯಕ್ಷೇತ್ರಗಳನ್ನು ಸುತ್ತಿಕೊಂಡು ದಕ್ಷಿಣೇಶ್ವರಕ್ಕೆ ಬಂದಿದ್ದನು.

ಪರಮಹಂಸರು ಜಟಾಧಾರಿಯನ್ನು ನೋಡಿದ ಕೂಡಲೆ, ಅವನ ವೃತ್ತಾಂತವನ್ನೆಲ್ಲ ತಿಳಿದುಕೊಂಡರು. ಮನೆದೇವರಾದ ರಘು ವೀರನನ್ನು ಯಥಾವಿಧಿಯಾಗಿ ಪೂಜೆಮಾಡುವುದಕ್ಕಾಗಿ ಬಹುದಿನಗಳ ಕೆಳಗೆ ರಾಮಮಂತ್ರದ ಉಪದೇಶವನ್ನು ಹೊಂದಿದ್ದರೂ ಅವರಿಗೆ ರಾಮಚಂದ್ರನು ತಾವು ಸೇವಿಸಬೇಕಾದ ಪ್ರಭು ಎಂಬ ದಾಸ ಭಾವವಿತ್ತೇ ಹೊರತು ಬೇರೆ ಭಾವವಿರಲಿಲ್ಲ. ಈಗ ಜಟಾಧಾರಿಯ ಹತ್ತಿರವಿದ್ದ ವಿಗ್ರಹವನ್ನು ನೋಡಿ ಅದೇ ರಾಮಚಂದ್ರನಲ್ಲಿ ವಾತ್ಸಲ್ಯ ಭಾವವು ಉತ್ಪನ್ನವಾಯಿತು. ಮಂತ್ರೋಪದೇಶ ಮೂಲಕ ಜಟಾ ಧಾರಿಯು ಹೇಳಿದ ಮಾರ್ಗವನ್ನು ಹಿಡಿದು ಪರಮಹಂಸರು ಬಾಲ ರಾಮಚಂದ್ರನ ದರ್ಶನಲಾಭವನ್ನು ಪಡೆದರು. ಆ ದಿವ್ಯಮೂರ್ತಿಯ ಧ್ಯಾನದಲ್ಲಿಯೇ ಮಗ್ನರಾಗಿರಲು ಅತ್ಯಲ್ಪಕಾಲದಲ್ಲಿ ಕೆಳಗೆ ಹೇಳುವ ಅಭಿಪ್ರಾಯದ ಪ್ರತ್ಯಕ್ಷಾನುಭವವುಂಟಾಯಿತು :—

ಜೋರಾಂ ದಶರಥಕಿಬೇಟಾ,
ಓಹಿರಾಂ ಘಟ್ ಘಟ್ ಮೇಲೇಟಾ ।
ಓಹಿರಾಂ ಜಗತ್ ಪಸೇರಾ,
ಓಹಿರಾಂ ಸಬ್ಸೇನೇಯಾರಾ ॥

**ಅರ್ಥ.**—ಶ್ರೀರಾಮಚಂದ್ರನು ದಶರಥಪುತ್ರನು ಮಾತ್ರವೇ ಅಲ್ಲ. ಪ್ರತಿಶರೀರವನ್ನೂ ಆಶ್ರಯಮಾಡಿ ಜೀವಭಾವದಿಂದ ಪ್ರಕಾಶಿ ಸುತ್ತಿದ್ದಾನೆ. ಹೀಗೆ ಪ್ರಾಣಿಗಳ ಅಂತರ್ಯದಲ್ಲಿ ಸೇರಿ ಜಗದ್ರೂಪ ವಾಗಿ ಇದ್ದರೂ ಜಗತ್ತಿನ ಎಲ್ಲಾ ಪದಾರ್ಥಗಳಿಂದಲೂ ಬೇರೆಯಾ ಗಿದ್ದಾನೆ. ಯಾವಾಗಲೂ ಮಾಯಾರಹಿತ ನಿರ್ಗುಣ ಸ್ವರೂಪ ದಲ್ಲಿ ಇರುತ್ತಾನೆ.

ಇದಾದಮೇಲೆ ಪರಮಹಂಸರು ಮಧುರಭಾವ ಸಾಧನೆಯಲ್ಲಿ ಪ್ರವೃತ್ತರಾಗಿ ಹೆಂಗಸರಿಗೆ ತಕ್ಕ ವೇಷಭೂಷಣಗಳನ್ನು ಹಾಕಿಕೊಳ್ಳ ಬೇಕೆಂದು ಅಪೇಕ್ಷಿಸಿದರು. ಪರಮಭಕ್ತ ಮಧುರಾಮೋಹನನು ನಾನಾವಿಧವಾದ ಬಹಳ ಬೆಲೆಯುಳ್ಳ ವಸ್ತ್ರಾಭರಣಗಳನ್ನು ತಂದು ಕೊಟ್ಟನು. ಇವೆಲ್ಲವನ್ನೂ ಧರಿಸಿಕೊಂಡು ಪರಮಹಂಸರು ರಾಧೆಯ ಭಾವದಲ್ಲಿ ಎಷ್ಟುರಮಟ್ಟಿಗೆ ಮಗ್ನರಾದರೆಂದರೆ, ಅವರಿಗೆ ತಾವು ಗಂಡ ಸರೆಂಬ ಜ್ಞಾನವೇ ಸಂಪೂರ್ಣವಾಗಿ ಹೋಗಿ ಪ್ರತಿಚಿಂತೆ, ನಡವಳಿಕೆ, ಮಾತು, ಕಥೆ ಎಲ್ಲ ಹೆಂಗಸರ ಹಾಗಾಯಿತು. ಹೃದಯನು ಆ ವಿಚಾರವಾಗಿ, "ಒಂದು ದಿನ ಮಧುರಾನಾಥನು ನನ್ನನ್ನು ಅಂತಃ ಪುರಕ್ಕೆ ಕರೆದುಕೊಂಡುಹೋಗಿ ಹೇಳು ನೋಡೋಣ, ಇವರಲ್ಲಿ ನಿಮ್ಮಮಾವಯಾರು? ಎಂದು ಕೇಳಿದನು. ನಾನು ಎಷ್ಟೋದಿನ ಗಳಿಂದ ಆತನ ಜೊತೆಯಲ್ಲಿಯೇ ಇದ್ದರೂ ಆಗ ಗುರುತು ಹಿಡಿಯು ವುದಕ್ಕಾಗಲಿಲ್ಲ." ಎಂದು ಹೇಳಿದನಂತೆ. ಹೀಗೆ ರಾಧೆಯ ಭಾವದಲ್ಲಿ ಯೇ ತನ್ಮಯರಾಗಿ ಸಾಧನೆಮಾಡುತ್ತಿರಲು ಶ್ರೀ ಕೃಷ್ಣನ ದರ್ಶನ ವಾಯಿತು. ಹಿಂದೆ ಪ್ರತ್ಯಕ್ಷವಾದ ಇತರ ದೇವಮೂರ್ತಿಗಳಂತೆ ಶ್ರೀ ಕೃಷ್ಣನ ಮೂರ್ತಿಯೂ ಅವರ ದೇಹದೊಳಗೇ ಐಕ್ಯವಾಯಿತು.

ಮಧುರಭಾವ ಸಾಧನೆಯು ಮುಗಿದ ಕೆಲವು ದಿನಗಳಲ್ಲಿಯೇ ಪರಮಹಂಸರು ತೋತಾಪುರಿಗೋಸ್ವಾಮಿ ಎಂಬೊಬ್ಬ ಸನ್ಯಾಸಿ ಯಿಂದ ಉಪದೇಶವನ್ನು ಪಡೆದು ವೇದಾಂತಮತಸಾಧನೆಗೆ ಆರಂಭಮಾಡಿದರು. 'ತೋತಾಪುರಿ' ಎಂಬಾತನು, ನರ್ಮದಾ ತೀರದಲ್ಲಿ ಬಹುಕಾಲ ತಪಸ್ಸುಮಾಡಿ ನಿರ್ವಿಕಲ್ಪ ಸಮಾಧಿಯನ್ನು ಹೊಂದಿ ಬ್ರಹ್ಮಸಾಕ್ಷಾತ್ಕಾರವನ್ನು ಪಡೆದಿದ್ದನು. ಬ್ರಹ್ಮಜ್ಞಾನವಾದ ಮೇಲೆ ಆತನ ಮನಸ್ಸಿನಲ್ಲಿ ತೀರ್ಥಾಟನೆ ಮಾಡಬೇಕೆಂಬ ಸಂಕಲ್ಪ ಹುಟ್ಟಿತು. ಈ ಸಂಕಲ್ಪದ ಪ್ರೇರಣೆಯಿಂದ ಆತನು ಪುಣ್ಯಕ್ಷೇತ್ರ ದಿಂದ ಪುಣ್ಯಕ್ಷೇತ್ರಕ್ಕೆ ಹೋಗುತ್ತ ದಕ್ಷಿಣೇಶ್ವರಕ್ಕೆ ಬಂದು ಕಾಳೀ ದೇವಸ್ಥಾನದ ಒಂದು ಮಂಟಪದಲ್ಲಿ ಇಳಿದುಕೊಂಡನು. ಆಗ

ಅದೇ ಮಂಟಪದ ಒಂದು ಮೂಲೆಯಲ್ಲಿಯೇ ಪರಮಹಂಸರೂ ಅನ್ಯಮನಸ್ಕರಾಗಿ ಕುಳಿತಿದ್ದರು. ಅವರ ಮುಖವನ್ನು ನೋಡು ತ್ತಲೆ ತೋತಾಪುರಿಯ ಮನಸ್ಸಿಗೆ ಇಂಥ ಉತ್ತಮವಾದ ಅಧಿಕಾರಿ ಯು ಸಿಕ್ಕುವುದು ಅಪೂರ್ವವೆಂದು ಬೋಧೆಯಾಯಿತು. ತಂತ್ರ ಸಾಧನೆಯೇ ವಿಶೇಷ ಪ್ರಚಾರದಲ್ಲಿರುವ ಬಂಗಾಳಾದೇಶದಲ್ಲೂ ಇಂಥ ವೇದಾಂತಸಾಧನೆಯ ಅಧಿಕಾರಿಯು ಇರುವನೇ ಎಂದು ಆಶ್ಚರ್ಯದಿಂದ ಅವರನ್ನು ಕುರಿತು " ನಿಮ್ಮನ್ನು ನೋಡಿದರೆ ಉತ್ತಮ ವಾದ ಅಧಿಕಾರಿಗಳೆಂದು ತೋರುತ್ತೀರಿ. ನೀವು ವೇದಾಂತಸಾಧನೆ ಮಾಡುತ್ತೀರಾ ?" ಎಂದು ಕೇಳಿದನು. ಆಜಾನುಬಾಹುವಾದ ಜಟಾಧಾರಿಯಾದ, ನಗ್ನಾವಸ್ಥೆಯಲ್ಲಿದ್ದ ಸನ್ಯಾಸಿಯ ಪ್ರಶ್ನೆಯನ್ನು ಕೇಳಿ ಪರಮಹಂಸರು " ಏನುಮಾಡಬೇಕೋ ಏನುಮಾಡಬಾರದೋ ನನಗೆ ಒಂದೂ ಗೊತ್ತಿಲ್ಲ. ನನ್ನ ತಾಯಿಗೆ ಎಲ್ಲಾ ಗೊತ್ತು. ಆಕೆಯು ಅಪ್ಪಣೆಕೊಟ್ಟರೆ ಆಗಬಹುದು." ಎಂದು ಹೇಳಿದರು. ಸನ್ಯಾಸಿಯು "ಹಾಗಾದರೆ ಈಗಲೇ ಹೋಗಿ ನಿಮ್ಮ ತಾಯಿಯನ್ನು ಕೇಳಿ ಬನ್ನಿ. ಏಕೆಂದರೆ ನಾನು ಬಹುಕಾಲ ಇಲ್ಲಿರುವುದಿಲ್ಲ".* ಎಂದು ಹೇಳಿದನು. ಪರಮಹಂಸರೂ ಕೂಡಲೆ ಕಾಳಿಕಾದೇವಸ್ಥಾ ನಕ್ಕೆ ಹೋಗಿ ಅಲ್ಲಿ ಭಾವಾವಿಷ್ಟರಾಗಿ " ಹೋಗು, ಉಪದೇಶ ತೆಗೆದು ಕೊ; ನಿನಗೆ ಉಪದೇಶಮಾಡುವುದಕ್ಕಾಗಿಯೇ ಆ ಸನ್ಯಾಸಿಯು ಇಲ್ಲಿಗೆ ಬಂದಿರುವುದು ". ಎಂಬ ದೈವವಾಣಿಯನ್ನು ಕೇಳಿ ಬಂದು ಅದನ್ನು ತೋತಾಪುರಿಗೆ ತಿಳಿಸಿದರು.

ತೋತಾಪುರಿಗೆ ಸಂತೋಷವಾಯಿತು. ಉಪದೇಶವಾಗುವು ದಕ್ಕೆ ಮುಂಚೆ ಶಿಖಾಯಜ್ಞೋಪವೀತಗಳನ್ನು ಪರಿತ್ಯಾಗಮಾಡಿ ಶಾಸ್ತ್ರೀಯವಾಗಿ ಸನ್ಯಾಸಗ್ರಹಣ ಮಾಡಬೇಕೆಂದು ಹೇಳಲು ಪರಮ ಹಂಸರು ಸ್ವಲ್ಪ ಹಿಂದುಮುಂದು ನೋಡಿ ಗುಟ್ಟಾಗಿ ಹಾಗೆಮಾಡುವು

---

* ಏಕೆಂದರೆ ಮೂರು ದಿನಕ್ಕೆ ಮೇಲ್ಪಟ್ಟು ಆತನು ಒಂದು ಸ್ಥಳ ದಲ್ಲಿ ನಿಲ್ಲುತ್ತಿರಲಿಲ್ಲ.

ವಾದರೆ ಆಗಬಹುದು ಎಂದು ಹೇಳಿದರು. ಆತನು ಅದಕ್ಕೆ ಒಪ್ಪಿ ಒಂದು ಶುಭದಿವಸ ಶ್ರಾದ್ಧಾದಿಕ್ರಿಯೆಗಳನ್ನು ಮಾಡಿಸಿ, ಆತ್ಮ ಪಿಂಡವನ್ನು ಹಾಕಿಸಿ ಸನ್ಯಾಸವನ್ನು ಕೊಟ್ಟನು. ವೇದಾಂತಸಾಧನೆಯನ್ನು ಕುರಿತು ಪರಮಹಂಸರು ಹೀಗೆ ಹೇಳುತ್ತಿದ್ದರು. “ಗೋಸ್ವಾಮಿಯು ದೀಕ್ಷೆಕೊಟ್ಟು ಅನೇಕ ಸಿದ್ಧಾಂತವಾಕ್ಯಗಳನ್ನು ಉಪದೇಶಮಾಡಿ ಮನಸ್ಸನ್ನು ನಿರ್ವಿಕಲ್ಪಮಾಡಿ ಆತ್ಮಧ್ಯಾನದಲ್ಲಿ ಮಗ್ನನಾಗುವಂತೆ ಹೇಳಿದನು. ಆದರೆ ಧ್ಯಾನಮಾಡುವುದಕ್ಕೆ ಕುಳಿತು ಎಷ್ಟು ಪ್ರಯತ್ನಮಾಡಿದರೂ ಮನಸ್ಸನ್ನು ನಿರ್ವಿಕಲ್ಪಮಾಡುವುದಕ್ಕೆ ಎಂದರೆ ನಾಮರೂಪಗಳ ಮೇರೆಯನ್ನು ದಾಟಿಸುವುದಕ್ಕೆ ನನಗೆ ಸಾಧ್ಯವಾಗಲಿಲ್ಲ. ಇತರ ವಿಚಾರಗಳಿಂದ ಮನಸ್ಸು ಸ್ವಾಭಾವಿಕವಾಗಿಯೇ ಪಾರಾಗುತ್ತಿತ್ತು. ಆದರೆ ಹೀಗೆ ಪಾರಾದ ಒಡನೆಯೇ ಅದರಲ್ಲಿ ಜಗದಂಬೆಯು ಚಿರಪರಿಚಿತವಾದ ಚಿದ್ಘನೋಜ್ವಲಮೂರ್ತಿಯು ಆವಿರ್ಭಾವವಾಗಿ ಎಲ್ಲವಿಧವಾದ ನಾಮರೂಪಗಳನ್ನು ತ್ಯಾಗಮಾಡಬೇಕೆಂಬ ಸಂಕಲ್ಪವನ್ನು ಮರೆಸಿಬಿಡುತ್ತಿತ್ತು. ಮೇಲಿಂದ ಮೇಲೆ ಹೀಗಾಗುವುದನ್ನು ನೋಡಿ ನಿರಾಶೆಯಾಗಿ ಅವನನ್ನು ಕುರಿತು—ಆಗುವದಿಲ್ಲ! ಮನಸ್ಸನ್ನು ಸಂಪೂರ್ಣವಾಗಿ ನಿರ್ವಿಕಲ್ಪಮಾಡಿ ಆತ್ಮಧ್ಯಾನದಲ್ಲಿ ಮುಳುಗಿಸಲು ನನ್ನ ಕೈಲಾಗುವುದಿಲ್ಲ—ಎಂದು ಹೇಳಿದೆನು. ಅದಕ್ಕೆ ಆತನು ಬಹಳ ಸಿಟ್ಟಾಗಿ ಏನು! ಆಗುವುದಿಲ್ಲವೆ? ಎಂಥಮಾತು! ಎಂದು ಹೇಳಿ, ಆ ಕೊಠಡಿಯಲ್ಲಿ ಬಿದ್ದಿದ್ದ ಒಂದು ಗಾಜಿನಚೂರನ್ನು ತೆಗೆದುಕೊಂಡು ತೀಕ್ಷ್ಣವಾದ ಅದರ ಮೊನೆಯಿಂದ ನನ್ನ ಹುಬ್ಬಿನನಡುವೆ ಜೋರಾಗಿ ಎಳೆದು ಗಾಯಮಾಡಿ ಈ ಬಿಂದುವಿನ ಬಲದಿಂದ ಮನಸ್ಸನ್ನು ತಿರುಗಿಸು—ಎಂದು ಹೇಳಿದನು. ಆಗ ಪುನಃ ದೃಢಸಂಕಲ್ಪಮಾಡಿ ಧ್ಯಾನಕ್ಕೆ ಕುಳಿತೆನು. ಹಿಂದಿನಹಾಗೆ ಜಗದಂಬೆಯ ಮೂರ್ತಿಯು ಆವಿರ್ಭಾವವಾದ ಒಡನೆಯೇ ಜ್ಞಾನಖಡ್ಗದಿಂದ ಅದನ್ನು ಮನಸ್ಸಿನಲ್ಲಿಯೇ ಎರಡು ಹೋಳಾಗಿ ಸೀಳಿಹಾಕಿದೆನು. ಆಮೇಲೆ ಯಾವವಿಧವಾದ ಸಂಕಲ್ಪ

ವಿಕಲ್ಪವೂ ಉಳಿಯಲಿಲ್ಲ. ಇದ್ದಕ್ಕಿದ್ದಹಾಗೆ ಸಮಾಧಿಯಲ್ಲಿ ಮಗ್ನ ನಾದೆನು."

ಹೀಗೆ ಶಿಷ್ಯನು ಸಮಾಧಿಸ್ಥನಾಗಲು ತೋತಾಪುರಿಯು ಸ್ವಲ್ಪ ಹೊತ್ತು ಅಲ್ಲಿಯೇ ಇದ್ದು ಅನಂತರ ಯಾರಾದರೂ ಬಂದು ತೊಂದರೆ ಮಾಡಿಯಾರೆಂಬ ಯೋಚನೆಯಿಂದ ಕುಟೀರದ ಬಾಗಿಲನ್ನು ಹಾಕಿ ಬೀಗಹಾಕಿಕೊಂಡು ಪಂಚವಟಿಗೆಹೋಗಿ ಅಲ್ಲಿ ಶಿಷ್ಯನು ಎಚ್ಚೆತ್ತು ಕೂಗುವುದನ್ನೇ ನಿರೀಕ್ಷಿಸಿಕೊಂಡು ಕುಳಿತಿದ್ದನು. ಹಗಲೆಲ್ಲ ಕಳೆಯಿತು; ರಾತ್ರಿಯಾಯಿತು; ರಾತ್ರಿಯೂ ಕಳೆಯಿತು; ಒಂದುದಿನವಾಯಿತು, ಎರಡುದಿನವಾಯಿತು, ಮೂರುದಿನವಾಯಿತು; ಆದರೂ ಪರಮಹಂಸರು ಕೂಗಲೇ ಇಲ್ಲ. ಆಶ್ಚರ್ಯದಿಂದ ತೋತಾಪುರಿಯು ಎದ್ದುಬಂದು ನೋಡಲು ಶಿಷ್ಯನು ಇನ್ನೂ ಸಮಾಧಿಸ್ಥನಾಗಿಯೇ ಇದ್ದಾನೆ! ದೇಹದಲ್ಲಿ ಪ್ರಾಣದಚಿಹ್ನೆಯೇ ಇಲ್ಲ! ಆದರೆ ಮುಖವು ಮಾತ್ರ ಪ್ರಶಾಂತವಾಗಿಯೂ, ಗಂಭೀರವಾಗಿಯೂ, ಜ್ಯೋತಿಃಪೂರ್ಣವಾಗಿಯೂ ಇತ್ತು. ಸಮಾಧಿರಹಸ್ಯವನ್ನು ತಿಳಿದ ತೋತಾಪುರಿಯು ಆ ಸ್ಥಿತಿಯನ್ನು ನೋಡಿ "ಇದೇನು ಆಶ್ಚರ್ಯ! ನಾನು ನಲವತ್ತುವರ್ಷಗಳಕಾಲ ಕಠೋರಸಾಧನೆಮಾಡಿ ಯಾವುದನ್ನು ಪಡೆದೆನೋ ಅದನ್ನು ಈ ಮಹಾಪುರುಷನು ನಿಜವಾಗಿಯೂ ಒಂದೇ ದಿನದಲ್ಲಿ ಹೊಂದಿದನೇ!" ಎಂದು ಪುನಃ ಶಿಷ್ಯನದೇಹದಲ್ಲಿ ಕಾಣುತ್ತಿದ್ದ ಲಕ್ಷಣಗಳನ್ನು ಪರೀಕ್ಷಿಸಿ ನೋಡಿದನು. ಸತ್ಯವಾಗಿಯೂ ನಿರ್ವಿಕಲ್ಪ ಸಮಾಧಿ! ಆಗ ಆತನು ಅತ್ಯಾಶ್ಚರ್ಯದಿಂದ "ಇದೇನು ದೇವರ ಅದ್ಭುತಮಾಯೆ!" ಎಂದಂದುಕೊಂಡು ತಾನೇ ಶಿಷ್ಯನನ್ನು ಎಬ್ಬಿಸಿದನು.

ಮೂರುದಿನಕ್ಕೆ ಹೆಚ್ಚಾಗಿ ಎಲ್ಲಿಯೂ ನಿಲ್ಲದೆ ತಿರುಗುತ್ತಿದ್ದ ತೋತಾಪುರಿಯು ದಕ್ಷಿಣೇಶ್ವರದಲ್ಲಿ ಹನ್ನೊಂದು ತಿಂಗಳಿದ್ದನು. ಈ ಕಾಲದಲ್ಲಿ ಪರಮಹಂಸರು ನಿರ್ವಿಕಲ್ಪ ಸಮಾಧಿಯಲ್ಲಿ ದೃಢಪ್ರತಿಷ್ಠಿತರಾಗಿ, ಸಮಾಧಿಯಲ್ಲಿಯೇ ಇದ್ದುಬಿಡಬೇಕೆಂದು ಕುಳಿತರು.

ಆರುತಿಂಗಳಕಾಲ ಸಮಾಧಿ ಭಂಗವಾಗಲಿಲ್ಲ. ಅಷ್ಟುಹೊತ್ತಿಗೆ ಸರಿಯಾಗಿ ಒಬ್ಬ ಸಾಧುವು ಅಲ್ಲಿಗೆ ಅಕಸ್ಮಾತ್ತಾಗಿ ಬಂದು ಪರಮಹಂಸರಿಂದ ಮುಂದೆ ವಿಶೇಷವಾಗಿ ಲೋಕಕಲ್ಯಾಣವಾಗತಕ್ಕದ್ದಿದೆ ಎಂದು ಹೇಳಿ ನಾನಾ ಉಪಾಯಗಳಿಂದ ಅವರ ದೇಹವನ್ನು ಕಾಪಾಡಿಕೊಂಡು ಬಂದನು. ಆರನೆಯತಿಂಗಳ ಕೊನೆಯಲ್ಲಿ ಅವರಿಗೆ ವಿಚಿತ್ರ ದಿವ್ಯಾನುಭವವಾಗಿ ಜಗದಂಬೆಯು ಅಶರೀರವಾಣಿಯಿಂದ ಮೂರುಸಲ "ಭಾವಮುಖದಲ್ಲಿರು!" "ಭಾವಮುಖದಲ್ಲಿರು!" "ಭಾವಮುಖದಲ್ಲಿರು!" ಎಂದು ಆಜ್ಞೆಮಾಡಿದ್ದನ್ನು ಕೇಳಿದರು.

ಇದಾದ ಕೆಲವು ದಿನಗಳಮೇಲೆ ಗೋವಿಂದರಾಯನೆಂಬೊಬ್ಬ ಮಹಮ್ಮದೀಯಧರ್ಮಸಾಧಕನು ದಕ್ಷಿಣೇಶ್ವರಕ್ಕೆ ಬಂದನು. ಆತನನ್ನು ನೋಡಿ ಪರಮಹಂಸರಿಗೆ ಮಹಮ್ಮದೀಯ ಧರ್ಮವನ್ನೂ ಅಭ್ಯಾಸಮಾಡಬೇಕೆಂಬ ಪ್ರವೃತ್ತಿಹುಟ್ಟಿತು. ಆ ಸಂಗತಿಯನ್ನು ಕುರಿತು ಅವರು ಹೇಳಿರುವುದೇನೆಂದರೆ, "ಆ ಕಾಲದಲ್ಲಿ ಅಲ್ಲಾ ಮಂತ್ರವನ್ನು ಜಪಿಸುತ್ತಿದ್ದೆ. ಮುಸಲ್ಮಾನರ ಹಾಗೆ ವೇಷಭೂಷಗಳನ್ನು ಹಾಕಿಕೊಳ್ಳುತ್ತಿದ್ದೆ. ಮೂರುಹೊತ್ತು ನಮಾಜುಮಾಡುತ್ತಿದ್ದೆ. ಹಿಂದೂಭಾವವು ಮನಸ್ಸಿನಲ್ಲಿ ಸುತರಾಂ ಲೋಪವಾಗಿ ಹೋಗಿತ್ತು. ಹಿಂದೂ ದೇವತೆಗಳಿಗೆ ನಮಸ್ಕಾರಮಾಡುವುದು ಹಾಗಿರಲಿ, ಅವುಗಳ ದರ್ಶನಮಾಡುವುದಕ್ಕೂ ಮನಸ್ಸು ಬರುತ್ತಿರಲಿಲ್ಲ. ಹೀಗೆ ಮೂರುದಿವಸಗಳು ಕಳೆದಮೇಲೆ ಇಸ್ಲಾಂ ಮತಸಾಧನವು ಫಲಿಸಿತು."

ಇದರಂತೆ ಪರಮಹಂಸರಿಗೆ ಕ್ರಿಸ್ತನು ದರ್ಶನಕೊಟ್ಟಂತೆಯೂ ಕ್ರೈಸ್ತಮತದ ಅನುಭವವೂ ಬಂದಂತೆಯೂ ಹೇಳಲ್ಪಟ್ಟಿದೆ.

# ಒಂಬತ್ತನೆಯ ಅಧ್ಯಾಯ.

## ಕಾಮಾರಪುಕುರಕ್ಕೆ ಹೋಗಿ ಬಂದದ್ದು ; ತೀರ್ಥಯಾತ್ರೆ.

ಆರುತಿಂಗಳಕಾಲ ಸರಿಯಾದ ಅನ್ನಾಹಾರಗಳಿಲ್ಲದೆ ನಿರ್ವಿಕಲ್ಪ ಸಮಾಧಿಯಲ್ಲಿ ಇದ್ದದ್ದರಿಂದಲೋ ಏನೋ ಪರಮಹಂಸರಿಗೆ ಈ ಸಮಯದಲ್ಲಿ ಒಂದು ಭಯಂಕರವಾದ ಹೊಟ್ಟೆಯನೋವು ಪ್ರಾಪ್ತ ವಾಯಿತು. ಏನೇನೋ ಚಿಕಿತ್ಸೆ ಮಾಡಿದರು. ರೋಗವು ಯಾವು ದಕ್ಕೂ ಜಗ್ಗದೆ ಸುಮಾರು ಆರುತಿಂಗಳ ಕಾಲ ಅದನ್ನು ಅನುಭವಿಸ ಬೇಕಾಯಿತು. ಈಗ ಸ್ವಲ್ಪ ಶಮನವಾಯಿತು. ಮನಸ್ಸು ಭಾವ ಮುಖದಲ್ಲಿ ದ್ವೈತಾದ್ವೈತ ಭೂಮಿಯಲ್ಲಿರುವುದಕ್ಕೆ ಅಭ್ಯಾಸವಾ ಗುತ್ತ ಬಂತು. ಆದರೆ ದೇಹಸ್ಥಿತಿ ಮಾತ್ರ ಮೊದಲಿನಂತೆ ಇರಲಿಲ್ಲ. ಮಳೆಗಾಲ ಬಂದು ಗಂಗಾನದಿಯ ನೀರೆಲ್ಲ ಕದಡಿಹೋಗಿ ಆ ನೀರನ್ನು ಕುಡಿದರೆ ಮತ್ತೆ ಹೊಟ್ಟೆನೋವು ಕಾಣಿಸಿಕೊಳ್ಳಬಹು ದೆಂಬ ಹೆದರಿಕೆಯಾಯಿತು. ಆದ್ದರಿಂದ 1867 ನೇ ಇಸವಿಯಲ್ಲಿ ಇನ್ನೂ ವರ್ಷಾಕಾಲ ಹುಟ್ಟುವುದಕ್ಕೆ ಸ್ವಲ್ಪ ಮುಂಚೆಯೇ ಪರಮ ಹಂಸರು ಜೊತೆಯಲ್ಲಿ ಹೃದಯನನ್ನೂ ಭೈರವಿ ಬ್ರಾಹ್ಮಣಿ*ಯನ್ನೂ ಕರೆದುಕೊಂಡು ಕಾಮಾರಪುಕುರಕ್ಕೆ ಹೋದರು.

---

* ಭೈರವಿಬ್ರಾಹ್ಮಣಿಯು ಪರಮಹಂಸರನ್ನು ಇನ್ನೂ ಬಿಟ್ಟು ಹೋ ಗಿರಲಿಲ್ಲ ವೇದಾಂತಸಾಧನೆಯ ಕಾಲದಲ್ಲಿಯೂ ಆಕೆ ದಕ್ಷಿಣೇಶ್ವರ ದಲ್ಲಿಯೇ ಇದ್ದಳು; ಆದರೆ ವೇದಾಂತ ಮಾರ್ಗವು ಶುಷ್ಕಮಾರ್ಗ ವೆಂದೂ ಅದನ್ನು ಅಭ್ಯಾಸಮಾಡಲು ತೋತಾಪುರಿಯ ಹತ್ತಿರಕ್ಕೆ ಹೋಗ ಕೂಡದೆಂದೂ ಪರಮಹಂಸರಿಗೆ ಹೇಳುತ್ತಿದ್ದಳು. ಅವರು ಶ್ರೀ ಶಾರದಾ ದೇವಿಗೆ ಶ್ರದ್ಧೆವಹಿಸಿ ಶಿಕ್ಷಣವನ್ನು ಕೊಡುತ್ತಿದ್ದರೆ ಅದನ್ನು ಕಂಡು ಅವರ ಬ್ರಹ್ಮಚರ್ಯದಲ್ಲಿ ಸಂಶಯ ಹುಟ್ಟಿತಂತೆ. ಇದು ತನ್ನ

ಬಹುಕಾಲದ ಮೇಲೆ ಪುನಃ ಅಲ್ಲಿಗೆ ಬಂದದ್ದನ್ನು ನೋಡಿ ಎಲ್ಲರಿಗೂ ಬಹು ಸಂತೋಷವಾಯಿತು. ಜಯರಾಮವಾಟಿಯಿಂದ ಶ್ರೀ ಶಾರದಾದೇವಿಯನ್ನು ಕರೆಸಬೇಕೆಂದು ಮನೆಯಲ್ಲಿ ಹೆಂಗಸರು ಮಾತನಾಡಿಕೊಂಡರು. ಇದು ಪರಮಹಂಸರ ಕಿವಿಗೆ ಬಿತ್ತು. ಆದರೂ ಅವರು ಮಾತ್ರ ಉದಾಸೀನಭಾವದಿಂದಿದ್ದರು. ಬೇಡವೆನ್ನದಿದ್ದರೆ ಸಮ್ಮತಿಸಿದ ಹಾಗೆಯೇ ಎಂದುಕೊಂಡು ಆಕೆಯನ್ನು ಕಾಮಾರಪುಕುರಕ್ಕೆ ಬರಮಾಡಿಕೊಂಡರು.

ಆಗ ಶಾರದಾದೇವಿಗೆ ಹದಿನಾಲ್ಕು ವರ್ಷ ತುಂಬಿ ಹದಿನೈದನೆಯ ವರ್ಷ ನಡೆಯುತ್ತಿತ್ತು. ಆಕೆಯು ಕಾಮಾರಪುಕುರಕ್ಕೆ ಬಂದ ಕೂಡಲೆ ಪರಮಹಂಸರು ಆಕೆಗೆ ಮನೆಗೆಲಸಮಾಡುವುದು ಮೊದಲುಗೊಂಡು ಜನಗಳ ಸ್ವಭಾವವನ್ನು ಹೇಗೆ ತಿಳಿದುಕೊಳ್ಳಬೇಕು, ದುಡ್ಡನ್ನು ಹೇಗೆ ಸದ್ವ್ಯವಹಾರ ಮಾಡಬೇಕು, ಈಶ್ವರನಿಗೆ ಸರ್ವಸ್ವವನ್ನೂ ಸಮರ್ಪಣೆಮಾಡಿ ಹೇಗೆ ಸಾಧನೆ ಭಜನೆಗಳನ್ನು ಮಾಡಬೇಕು ಎಂಬ ಪರ್ಯಂತ ಸಮಸ್ತವಿಷಯಗಳನ್ನೂ ತಿಳಿಸಿದರು. ಆಕೆಯೂ ಪತಿಯು ಈಶ್ವರನಿಗಾಗಿ ತನುಮನಧನಗಳನ್ನು ಧಾರೆಯೆರೆದು ಕೊಟ್ಟಿದ್ದಕ್ಕೆ ಪೂರ್ಣ ಸಮ್ಮತಿಯನ್ನು ಕೊಟ್ಟು, ಅಲೌಕಿಕವಾದ ಸ್ವಾರ್ಥತ್ಯಾಗಮಾಡಿ, ಕಾಮಗಂಧರಹಿತವಾದ ಶುದ್ಧವಾದ ದಿವ್ಯಪ್ರೇಮದಿಂದ ತೃಪ್ತಳಾಗಿ ಆತನನ್ನು ಸಾಕ್ಷಾತ್ ಇಷ್ಟದೇವತೆಯಂತೆ ಸೇವಿಸುತ್ತ ಬಂದಳು. ಆಕೆಯ ಮಹತ್ವವನ್ನೂ ಪುಣ್ಯವನ್ನೂ ವರ್ಣಿಸಬಲ್ಲವರಾರು?

---

ದೋಷವೆಂದು ಕೆಲವು ದಿನದಮೇಲೆ ಬ್ರಾಹ್ಮಣಿಯ ಮನಸ್ಸಿಗೆ ಬಂದು ಅವರ ಕ್ಷಮಾಪಣೆಯನ್ನು ಕೇಳಿಕೊಂಡಳು. ಮತ್ತು ಪರಮಹಂಸರ ಅನುಗ್ರಹದಿಂದ ವೇದಾಂತ ಮಾರ್ಗದ ಮೇಲಿದ್ದ ದುರಭಿಪ್ರಾಯವನ್ನು ಬಿಟ್ಟು ಎಲ್ಲಾ ಮಾರ್ಗಗಳ ಲಕ್ಷ್ಯವೂ ಒಂದೇ ಎಂಬ ಅನುಭವವನ್ನು ತಂದುಕೊಳ್ಳಲು ತಪಸ್ಸು ಮಾಡುವುದಕ್ಕಾಗಿ ಕಾಶಿಗೆ ಹೊರಟುಹೋದಳು. ಅಂತು ಆಕೆಯು ದಕ್ಷಿಣೇಶ್ವರದಲ್ಲಿ ಸುಮಾರು ಆರು ವರ್ಷ ಇದ್ದಳು.

ಪರಮಹಂಸರು ಕಾಮಾರಪುಕುರದಲ್ಲಿ ಸುಮಾರು ಏಳುತಿಂಗಳಿದ್ದು ಆಮೇಲೆ ದಕ್ಷಿಣೇಶ್ವರಕ್ಕೆ ಹಿಂತಿರುಗಿ ಬಂದರು. (ಶಾರದಾದೇವಿಯನ್ನು ಅವರ ತೌರುಮನೆಯವರು ಬಂದು ಕರೆದುಕೊಂಡು ಹೋದರು.) ಅಲ್ಲಿಗೆ ಬಂದ ಸುಮಾರು ಮೂರು ತಿಂಗಳಿಗೆ ಮಥುರಾನಾಥನು ಸಪರಿವಾರನಾಗಿ ಪರಮಹಂಸರನ್ನೂ ಜೊತೆಯಲ್ಲಿ ಕರೆದುಕೊಂಡು ಕಾಶಿ, ಬೃಂದಾವನ ಮುಂತಾದ ಪುಣ್ಯಕ್ಷೇತ್ರಗಳಿಗೆ ಹೋಗಿ ತೀರ್ಥಯಾತ್ರೆ ಮಾಡಿಕೊಂಡು ಬಂದನು. ಈ ತೀರ್ಥಯಾತ್ರೆಯಲ್ಲಿ, ಸಾಧುಸಂತರು, ಗುರುಗಳು, ಮಹಾತ್ಮರು ಅಲ್ಲಲ್ಲಿ ಯಾರಾದರೂ ಇದ್ದರೆಂದು ಕೇಳಿದರೆ ಪರಮಹಂಸರು ಅವರನ್ನು ದರ್ಶನಮಾಡಿಕೊಂಡು ಬರುತ್ತಿದ್ದರು. ಅನೇಕ ಸಾಧಕರೂ ಪರಮಹಂಸರನ್ನು ಕಂಡು ಅವರಿಂದ ಸಹಾಯಪಡೆದು ಕೃತಾರ್ಥರಾದರು. ಈ ತೀರ್ಥಯಾತ್ರೆ ಮಾಡುತ್ತಿರುವಾಗಲೇ ಅವರು ಒಂದು ಹಳ್ಳಿಯಲ್ಲಿ ಕೆಲವು ತೀರ ದರಿದ್ರರನ್ನು ನೋಡಿ ಕಣ್ಣೀರುಹಾಕಿ ಅವರಿಗೆಲ್ಲ ಅಭ್ಯಂಗನ ಸುಖವಾದಊಟಗಳನ್ನು ಮಾಡಿಸಿ ಒಂದೊಂದು ಬಟ್ಟೆಯನ್ನು ಕೊಟ್ಟಹೊರತು ತಾವು ಮುಂದಕ್ಕೆ ಹೊರಡುವುದಿಲ್ಲವೆಂದು ಹಟಮಾಡಿ ಅಳುತ್ತ ಕುಳಿತುಕೊಂಡರಂತೆ. ಆಗ ಮಥುರಾನಾಥನು ಸಾವಿರಾರು ರೂಪಾಯಿ ವೆಚ್ಚಮಾಡಿ ಅವರ ಅಭಿಪ್ರಾಯದಂತೆ ನಡೆಸಿದಮೇಲೆ ಪ್ರಯಾಣವು ಮುಂದಕ್ಕೆ ಸಾಗಿತು.

ಇತ್ತ ಶಾರದಾದೇವಿಯು ಜಯರಾಮವಾಟಿಯಲ್ಲಿ ವಾಸಮಾಡುತ್ತ ತನ್ನ ಸ್ವಾಮಿಯು ಬಂದು ತನ್ನನ್ನು ಯಾವಾಗ ಕರೆದುಕೊಂಡು ಹೋಗುವನೋ ಎಂದು ಎದುರುನೋಡುತ್ತಿದ್ದಳು. ಅವರನ್ನು ಕಾಮಾರಪುಕುರದಲ್ಲಿ ನೋಡಿದಮೇಲೆ ನಾಲ್ಕು ವರ್ಷಗಳು ಕಳೆದು ಹೋದುವು. ಆದರೂ ಇನ್ನೂ ಕರೆಸಿಕೊಳ್ಳದ್ದನ್ನು ನೋಡಿ ಆಕೆಯ ಮನಸ್ಸಿಗೆ ಬಹಳ ಕೊರತೆಯಾಯಿತು. ಆದರೂ ಕಾಮಾರಪುಕುರದಲ್ಲಿ ಅವರ ಜೊತೆಗೆ ವಾಸಮಾಡುತ್ತಿದ್ದಾಗ ಪತಿಯು ತೋರಿಸುತ್ತಿದ್ದ ಪ್ರೀತಿ, ವಿಶ್ವಾಸಗಳನ್ನು ಜ್ಞಾಪಕ ಮಾಡಿ

ಕೊಂಡು ತನ್ನನ್ನು ಎಂದಿಗೂ ಮರೆಯಲಾರರೆಂದೂ ತನ್ನನ್ನು ಎಂದಿಗೂ ನಿರಾಕರಿಸಲಾರರೆಂದೂ ಸಮಯವನ್ನು ನಿರೀಕ್ಷಿಸುತ್ತಿರಬಹುದೆಂದೂ ಸರಿಯಾದ ಅವಕಾಶ ಸಿಕ್ಕಿದಾಗ ಬಂದು ಕರೆದು ಕೊಂಡು ಹೋಗಬಹುದೆಂದೂ ಸಮಾಧಾನ ಹೇಳಿಕೊಂಡಳು. ಊರಿನಲ್ಲಿ ಜನರು ತನ್ನ ಗಂಡನು ಮೈಮೇಲಿನ ಬಟ್ಟೆಯನ್ನು ಕೂಡ ಬಿಟ್ಟು "ಹರಿಹರಿ" ಎಂದು ಅಲೆಯುತ್ತಾನೆಂದು ಆಗಾಗ ಅಂದು ಕೊಳ್ಳುವುದನ್ನೂ. ಹೆಂಗಸರು "ಹುಚ್ಚನ ಹೆಂಡತಿ" ಎಂದು ಅಂದು ಕೊಳ್ಳುವುದನ್ನೂ ಕೇಳಿ "ಹಾಗಾದರೆ ಕಾಮಾರಪುಕುರದಲ್ಲಿದ್ದ ಹಾಗೆ ಈಗ ಇಲ್ಲವೆ? ಜನಗಳು ಹೇಳುವ ಹಾಗೆ ಅವರಿಗೆ ಈ ಅವಸ್ಥೆಯಾ ಗಿರುವುದೇ? ಅದೃಷ್ಟವಶಾತ್ ಹಾಗಾಗಿದ್ದರೆ ನಾನು ಇಲ್ಲಿರುವುದು ಯುಕ್ತವಲ್ಲ. ಅವರ ಹತ್ತಿರವೇ ಇದ್ದು ಸೇವೆಮಾಡುವುದು ಉಚಿತ" ಎಂದು ನಿರ್ಧರಮಾಡಿಕೊಂಡು ಈ ಮಾತನ್ನು ತನ್ನ ತಂದೆಗೆ ತಿಳಿಸಿದಳು. ಆತನು ಅದಕ್ಕೆ ಸಮ್ಮತಿಸಿ ಮಗಳು ಅಸ್ವಸ್ಥಳಾಗಿದ್ದರೂ ದಕ್ಷಿಣೇಶ್ವರಕ್ಕೆ ಕರೆದುಕೊಂಡು ಹೋದನು. (1872.)

ಶಾರದಾದೇವಿಯು ರೋಗಪೀಡಿತಳಾಗಿರುವಾಗಲೇ ಹೊರಟು ಬಂದದ್ದನ್ನು ನೋಡಿ ಪರಮಹಂಸರಿಗೆ ಬಹುವ್ಯಥೆಯಾಯಿತು. ಆದ್ದರಿಂದ ತಮ್ಮ ಕೊಠಡಿಯಲ್ಲಿಯೇ ಬೇರೆಯೊಂದು ಹಾಸಿಗೆಯಲ್ಲಿ ಆಕೆಯು ಮಲಗುವಂತೆ ಏರ್ಪಾಡುಮಾಡಿ ಮೂರುನಾಲ್ಕು ದಿನ ಹಗಲು ರಾತ್ರಿ ಔಷಧಿ ಪಥ್ಯಗಳನ್ನು ಕೊಟ್ಟು ತಾವೇ ಉಪಚಾರ ಮಾಡಿದರು. ಜ್ವರವು ವಾಸಿಯಾಗಲು ಆಕೆಯು ಅಲ್ಲಿಯೇ ಇರಬೇಕೆಂದು ನಿಶ್ಚಯವಾಯಿತು. ಆಕೆಯ ತಂದೆಯೂ ಸಂತೋಷ ದಿಂದ ಮಗಳನ್ನು ಬಿಟ್ಟು ತಮ್ಮ ಊರಿಗೆ ಹಿಂತಿರುಗಿ ಹೊರಟು ಹೋದನು.

ಇಲ್ಲಿಂದ ಮುಂದಕ್ಕೆ ಶಾರದಾದೇವಿಗೆ ದಕ್ಷಿಣೇಶ್ವರವೇ ಮನೆಯಾಯಿತು. ಆಕೆಗೂ ಪರಮಹಂಸರಿಗೂ ಇದ್ದ ಪರಸ್ಪರಸಂಬಂಧ, ಕಾಮಗಂಧ ಹೀನವಾದ ವಿಶುದ್ಧ ಪ್ರೇಮ, ಆಕೆಗೆ ಕೊಟ್ಟ ಶಿಕ್ಷಣ,

ಅವರ ಆದರ್ಶಸ್ವರೂಪವಾದ ಸಾಂಸಾರಿಕ ಜೀವನ ಮುಂತಾದ ವಿಚಾರಗಳು ಕೇವಲ ಉಪಯುಕ್ತವಾಗಿದ್ದರೂ ಗ್ರಂಥವಿಸ್ತಾರ ಭಯದಿಂದ ಅವನ್ನು ಇಲ್ಲಿ ಬರೆಯಲು ಹಿಂತೆಗೆಯುವೆವು. "ಶ್ರೀ ಶ್ರೀರಾಮಕೃಷ್ಣ ಲೀಲಾಪ್ರಸಂಗ" ವನ್ನು ಓದಿ ಪಾಠಕರು ಅವೆಲ್ಲವನ್ನೂ ತಿಳಿದುಕೊಳ್ಳಬಹುದು.

---

ಜ್ಯೇಷ್ಠ ಬಹುಳ ಅಮಾವಾಸ್ಯೆ. ಆ ದಿನ ಜಗದಂಬೆಯ ಪೂಜೆಗಾಗಿ ಬೇಕಾದ ಸಾಮಗ್ರಿಗಳೆಲ್ಲ ಸಿದ್ಧವಾಗಬೇಕಾದರೆ ರಾತ್ರಿ ಒಂಬತ್ತುಗಂಟೆಯಾಯಿತು. ಪರಮಹಂಸರು ಪೂಜೆಮಾಡುವುದಕ್ಕೆ ಮೊದಲು ಶಾರದಾದೇವಿಗೆ ಹೇಳಿ ಕಳುಹಿಸಿದರು. ಆಕೆಯು ಬಂದ ನಂತರ ಪೂಜೆಗೆ ಆರಂಭವಾಗಿ ಕಲಶಾರ್ಚನೆ ಶಂಖಾರ್ಚನೆಗಳು ಮುಗಿದುವು. ಆಗ ಪರಮಹಂಸರು ಶಾರದಾದೇವಿಯನ್ನು ಪೂಜಾಸನದಮೇಲೆ ಹೋಗಿ ಕುಳಿತುಕೊಳ್ಳುವಂತೆ ಹೇಳಲು ಆಕೆಯು ಭಾವಾವಿಷ್ಟಳಾಗಿ ತಾನು ಏನು ಮಾಡುತ್ತೇನೆಂಬುದೇ ತಿಳಿಯದೆ ಹೋಗಿ ಕುಳಿತುಕೊಂಡಳು. ಪರಮಹಂಸರು ಯಥಾವಿಧಿಯಾಗಿ ಆಕೆಗೆ ಷೋಡಶೋಪಚಾರ ಪೂಜೆಯನ್ನು ಮಾಡಿ ಮಂತ್ರವನ್ನು ಉಚ್ಚರಿಸುತ್ತ ಉಚ್ಚರಿಸುತ್ತ ಸಮಾಧಿಮಗ್ನರಾದರು. ಪತ್ನಿಯನ್ನು ದೇವಭಾವದಿಂದ ಪೂಜೆಮಾಡಿದ ಪರಮಹಂಸರ ಮಹತ್ವವನ್ನು ಪಾಮರರಾದ ನಾವು ಗ್ರಹಿಸುವುದು ಹೇಗೆ?

ಸ್ವಲ್ಪ ಹೊತ್ತಾದಮೇಲೆ ಬಾಹ್ಯಜ್ಞಾನದ ಚಿಹ್ನೆಗಳು ಕಾಣಿಸಲಾರಂಭಿಸಿದುವು. ಎಚ್ಚರವಾದಮೇಲೆ ತಮ್ಮ ಸಾಧನಗಳ ಫಲವನ್ನೂ, ಜಪಮಾಲೆ ಮುಂತಾದ ಸಮಸ್ತಸಾಧನ ಸಾಮಗ್ರಿಗಳನ್ನೂ

ದೇವಿಯ ಪಾದಪದ್ಮಗಳಲ್ಲಿ ವಿಸರ್ಜನೆಮಾಡಿ, "ಸರ್ವಮಂಗಳ ಮಾಂಗಲ್ಯೇ ಶಿವೇಸರ್ವಾರ್ಥಸಾಧಕೆ। ಶರಣ್ಯೇತ್ರ್ಯಂಬಕೇ ದೇವಿ ನಾರಾಯಣಿ ನಮೋಽಸ್ತುತೆ॥" ಎಂದು ಮಂತ್ರಹೇಳಿ ಪ್ರಣಾಮ ಮಾಡಿದರು.

ಪೂಜೆ ಮುಗಿಯಿತು. ಪರಮಹಂಸರ ಸಾಧನಗಳೂ ಪರಿಸಮಾಪ್ತಿಯಾದುವು.

# ಹತ್ತನೆಯ ಅಧ್ಯಾಯ.

## ಸಾಧಕಭಾವಸಮಾಲೋಚನೆ.

ಸ್ವಾಮಿವಿವೇಕಾನಂದರೇ ಮುಂತಾದ ಶಿಷ್ಯರು ಪರಮಹಂಸರ ಸೇವೆಗೆ ಬಂದುನಿಂತಾಗ ಅವರ ಸಾಧನೆಗಳೆಲ್ಲವೂ ಮುಗಿದುಹೋಗಿದ್ದುವು. ತೋತಾಪುರಿ, ಭೈರವಿಬ್ರಾಹ್ಮಣಿ ಮುಂತಾದ ಗುರುಸಾಧಕರೆಲ್ಲರೂ ದಕ್ಷಿಣೇಶ್ವರವನ್ನು ಬಿಟ್ಟು ಹೊರಟುಹೋಗಿದ್ದರು. ಮಧುರಾನಾಥ, ರಾಣಿ ರಾಸಮಣಿ, ರಾಮೇಶ್ವರ ಮುಂತಾದವರೆಲ್ಲರೂ ಸ್ವರ್ಗಸ್ಥರಾಗಿದ್ದರು. ಈ ಸಾಧನೆಗಳನ್ನೆಲ್ಲ ಕಣ್ಣಾರ ನೋಡಿ, ಅವುಗಳಲ್ಲಿ ಆಸಕ್ತಿಯಿಟ್ಟು ತತ್ಸಾವಧಾನ ಮಾಡಿನೋಡಿದ ಜನರು ಆಗ ಯಾರೂ ಇರಲೇ ಇಲ್ಲವೆಂದು ಹೇಳಬಹುದು. ಆದ್ದರಿಂದ ಪರಮಹಂಸರು ತಮ್ಮಸಾಧನಗಳನ್ನು ಕುರಿತು ಪ್ರಸ್ತಾಪಿಸಿ ಶಿಷ್ಯಮಂಡಲಿಗೆ ವಿಸ್ತಾರವಾಗಿ ಅವೆಲ್ಲವನ್ನೂ ತಿಳಿಯಪಡಿಸದಿದ್ದರೆ ಅವರು ಮಾಡಿದ ಸಾಧನಗಳು ಜನಗಳಿಗೆ ತಿಳಿಯಬರುತ್ತಲೇ ಇರಲಿಲ್ಲವೆಂದು ತೋರುತ್ತದೆ. ಈ ಭಾಗವೆಲ್ಲ ಬಹುಮಟ್ಟಿಗೆ ಅವರು ಸ್ವಂತವಾಗಿ ಆಡಿದಮಾತುಗಳಿಂದಲೇ ಗ್ರಥಿತವಾಗಿದೆ. ಅಲ್ಲಲ್ಲಿ ಅವರ ಮಾತುಗಳನ್ನೆ ವಾಕ್ಯವೇಷ್ಟನದಲ್ಲಿ ಬರೆದಿರುವುದನ್ನು ನೋಡಿ ಪಾಠಕರು ಆಗಲೇ ಈ ವಿಷಯವನ್ನು ಸ್ವಲ್ಪಮಟ್ಟಿಗಾದರೂ ಊಹಿಸಿರಬಹುದು.

ನಮ್ಮ ಕಡೆಯಲ್ಲಿ ಅನೇಕರು ಈ ಸಾಧನೆಗಳ ಹೆಸರನ್ನೇ ಕೇಳಿಲ್ಲ. ಪ್ರಾಣಾಯಾಮ ಮಾಡುವುದು ಬಟ್ಟೆಯನ್ನು ನುಂಗಿ ತೆಗೆದು ಅಥವಾ ದೇಹದೊಳಕ್ಕೆ ನೀರನ್ನು ಸೆಳೆದುಕೊಂಡು ಶುದ್ಧಿ ಮಾಡಿಕೊಳ್ಳುವುದು ಮುಂತಾದುವುಗಳನ್ನು ಕೆಲವರು ನೋಡಿರ

ಬಹುದು. ಮತ್ತೆ ಕೆಲವರು ಕಾಪಾಲಿಕ ಮುಂತಾದವರ ಪೂಜೆಪುರಸ್ಕಾರಗಳ ವಿಚಾರವಾಗಿ ಗ್ರಂಥಗಳಲ್ಲಿ ಓದಿರಬಹುದು. 'ದೇವಿಯ ಉಪಾಸಕರು,' 'ನರಸಿಂಹದೇವರ ಉಪಾಸಕರು' ಎಂದು ಮುಂತಾಗಿ ಜನಗಳು ಹೇಳುತ್ತಿರುವುದನ್ನು ಕೇಳಿರಬಹುದು. ಇವೆಲ್ಲವೂ ಉದ್ದೇಶ್ಯಹೀನವಾಗಿ, ಮಾಡುವವರಿಗೆ ಅಹಂಕಾರ ಜನಕವಾಗಿ, ನೋಡುವವರಿಗೆ ಕುತೂಹಲ ಜನಕವಾಗಿ, ಕ್ಷುದ್ರವಾದ ಫಲಜನಕವಾಗಿ ಪರಿಣಮಿಸಿವೆಯೆಂದು ಹೇಳಿದರೆ ಸುಳ್ಳಾಗಲಾರದು. ಉದಾಹರಣೆಗಾಗಿ ಶ್ರೀಚಕ್ರ ಮುಂತಾದುವುಗಳನ್ನು ಪೂಜೆಮಾಡತಕ್ಕವರು ಅದರ ವಿಸ್ತಾರವಾದ ಪೂಜಾಕಲಾಪಗಳಲ್ಲಿ ಮುಳುಗಿಹೋಗಿ ಹೊರಗಿನ ಆಡಂಬರಗಳನ್ನೇ ಮೆಚ್ಚುತ್ತಿರುವರು. ಸಂಚಿತವಾದ ಅಲ್ಪಸ್ವಲ್ಪ ಯೋಗಶಕ್ತಿಯನ್ನು ಮತ್ತೊಬ್ಬರಿಗೆ ಕೇಡುಮಾಡುವುದರಲ್ಲಿಯೋ, ರೋಗ ರುಜಿನಗಳನ್ನು ವಾಸಿಮಾಡುವುದರಲ್ಲಿಯೋ ವ್ಯಯಮಾಡಿಬಿಡುವರು. ಜನಗಳು ಇವರನ್ನು ಹೊಗಳಿದರೆಂದರೆ ಅಹಂಕಾರವು ಹೆಚ್ಚುವುದು. (ಕಾಮಕ್ರೋಧಾದಿಗಳನ್ನು ತಡೆದು, ಸಂಯಮವನ್ನು ಬಲಪಡಿಸಿಕೊಂಡು, ಅಭ್ಯಾಸ ವೈರಾಗ್ಯಗಳ ಮೂಲಕ ಚಿತ್ತೈಕಾಗ್ರತೆಯನ್ನೂ ಚಿತ್ತಶುದ್ಧಿಯನ್ನೂ ಪಡೆದು ಈಶ್ವರಸಾಕ್ಷಾತ್ಕಾರಮಾಡಿಕೊಳ್ಳುವುದೇ ಈ ಸಾಧನಗಳ ಉದ್ದೇಶ್ಯ.) ಅದಕ್ಕೆ ಗಮನಕೊಡದೆ ಇನ್ನೂ ಕಾಮಕ್ರೋಧಗಳಿಗೆ ಅವಕಾಶಕೊಡುತ್ತ ಅಹಂಕಾರ ಮಮಕಾರಗಳ ಪಾಶಕ್ಕೆಸಿಕ್ಕಿ ತಾವೂ ಮರುಳಾಗಿ ಜನಗಳನ್ನೂ ಮರುಳುಗೊಳಿಸುತ್ತ ಹೋದರೆ ಸಾಧನಗಳ ಉದಾರವಾದ ಉದ್ದೇಶ್ಯವೇ ಮರೆತು ಹೋಗಿ, ಇಂಥ ತಾಂತ್ರಿಕ ಮುಂತಾದ ಸಾಧಕರಲ್ಲಿ ಒಂದು ವಿಧವಾದ ಭಯವೂ ಅಸಹ್ಯತೆಯೂ ಹುಟ್ಟಿದರೆ ಆಶ್ಚರ್ಯವೇನು?

ಶ್ರೀ ಶ್ರೀರಾಮಕೃಷ್ಣ ಪರಮಹಂಸರ ಸಾಧಕಭಾವವನ್ನು ಆಲೋಚನೆಮಾಡಿದರೆ ಈ ಕೆಳಗೆ ಬರೆದಿರುವ ಅಂಶಗಳು ವಿಶದವಾಗಿ ತಿಳಿಯಬರುವುವು.

(1) ಎಷ್ಟು ಕ್ಲೇಶಕರಗಳಾಗಲಿ ಅಸಹ್ಯಕರಗಳಾಗಲಿ ಶಾಸ್ತ್ರೋಕ್ತವಾದ ಸಾಧನಗಳೆಲ್ಲವೂ ಸತ್ಯ.

(2) ಎಲ್ಲಾ ಮತಗಳೂ ಸತ್ಯ.

(3) ಈಶ್ವರಸಾಕ್ಷಾತ್ಕಾರವೇ ಅವೆಲ್ಲವುಗಳ ಉದ್ದೇಶ್ಯವೂ ಆಗಿದೆ: ಸಿದ್ಧಿಗಳನ್ನು ಪಡೆಯುವುದಲ್ಲ.

(4) ವಿಷಯಸುಖದಲ್ಲಿ ವೈರಾಗ್ಯ ಹುಟ್ಟಿದಹೊರತು ಸಿದ್ಧಿಯಾಗುವುದಿಲ್ಲ. *

(5) ನಿಜವಾದ ವ್ಯಾಕುಲತೆಯಿದ್ದರೆ ಯಾವ ಸಾಧನೆಯ ಸಹಾಯವೂ ಇಲ್ಲದೆ ಈಶ್ವರಸಾಕ್ಷಾತ್ಕಾರವಾಗುವುದು. ಬೇಕಾದ ಅನುಕೂಲಗಳೆಲ್ಲವೂ ತಾವಾಗಿಯೇ ಒದಗಿಬರುವುವು.

(6) ವ್ಯಾಕುಲತೆಯೂ, ವೈರಾಗ್ಯವೂ ಎಷ್ಟು ಪ್ರಬಲವಾಗಿದ್ದರೆ ಅಷ್ಟು ಬೇಗ ಸಿದ್ಧಿಯಾಗುವುದು (ಎಷ್ಟೋ ಸಾಧನೆಗಳಲ್ಲಿ ಪರಮಹಂಸರು ಮೂರುದಿನಗಳೊಳಗಾಗಿ ಸಿದ್ಧರಾದರೆಂಬುದನ್ನು ಇಲ್ಲಿ ಪಾಠಕರು ಜ್ಞಾಪಿಸಿಕೊಳ್ಳಬೇಕು.)

(7) ಎಂಥ ಉತ್ತಮನಾದ ಸಾಧಕನಿಗೂ ಗುರುಸಹಾಯ ಬೇಕು. ಇತ್ಯಾದಿ.—

ವೇದಕಾಲದಿಂದ ಇಂದಿನವರೆಗೆ ಪ್ರಚಾರದಲ್ಲಿದ್ದ ಮುಖ್ಯ ಮುಖ್ಯವಾದ ಸಕಲ ಸಾಧನಗಳನ್ನೂ, ಮಾರ್ಗಗಳನ್ನೂ, ಮತಗಳನ್ನೂ ಅನುಷ್ಠಾನಮಾಡಿ ಅವುಗಳೆಲ್ಲವೂ ಸತ್ಯವೆಂದೂ ಅವುಗಳ ಉದ್ದೇಶ್ಯವೆಲ್ಲವೂ ಒಂದೇಯೆಂದೂ ತೋರಿಸಿಕೊಟ್ಟ ಪರಮಹಂಸರ ಮಹಿಮೆಯನ್ನು ಎಷ್ಟೆಂದು ಹೇಳೋಣ! ಇಂಥವರನ್ನು ಅವತಾರ ಪುರುಷರೆಂದೆನ್ನದೆ ಮತ್ತೇನೆನ್ನಬೇಕು? ಸಂಸಾರವನ್ನು ತ್ಯಾಗಮಾಡಿ ಆಜೀವನವೂ ಶ್ರಮಪಟ್ಟರೂ ಒಂದೊಂದು ಮಾರ್ಗದಲ್ಲಿಯಾದರೂ ಸಿದ್ಧರಾಗುವುದು ಕಷ್ಟ. ಅಂಥವರಲ್ಲಿ ಒಂದಾದಮೇಲೆ ಒಂದರಂತೆ ಅವರು ಎಷ್ಟು ಸಾಧನೆಗಳನ್ನು ಮಾಡಿ ಮುಗಿಸಿ ಸಿದ್ಧರಾದರು!

* *Cf.* You cannot serve both God and Mammon.

ಎಷ್ಟು ಮತಗಳನ್ನು ಅಭ್ಯಾಸಮಾಡಿದರು! ಅವುಗಳಿಗೆ ತಕ್ಕಂತೆ ಅನುಕೂಲಗಳು ಸರಿಯಾಗಿ ಹೇಗೆ ಒದಗಿ ಬಂದುವು!

ಇದಕ್ಕೆ ಅವರು ಎಂಥ ಉತ್ತಮವಾದ ಅಧಿಕಾರಿಗಳಾಗಿದ್ದರೆಂಬುದನ್ನು ಜ್ಞಾಪಕದಲ್ಲಿಟ್ಟುಕೊಂಡಿರಬೇಕು. ಮೊದಲಿನಿಂದಲೂ "ಅಕ್ಕಿ ಬೇಳೆ ಸಂಪಾದನೆಮಾಡುವ ವಿದ್ಯೆ" ಯ ಮೇಲೆ ಅಭಿಲಾಷೆಯಿರದೆ, ಪುರಾಣ ಪುಣ್ಯಕಥೆಗಳನ್ನು ಹೇಳುವುದು ಕೇಳುವುದು, ದೇವಮೂರ್ತಿಗಳನ್ನು ಮಾಡುವುದು, ಕೀರ್ತನೆಗಳನ್ನು ಹೇಳುವುದು, ದೇವತೆಗಳ ವೇಷವನ್ನು ಹಾಕಿಕೊಳ್ಳುವುದು ಇವುಗಳಲ್ಲಿ ಅಪಾರವಾದ ಆಸಕ್ತಿಯೂ, ಸೃಷ್ಟಿ ಸೌಂದರ್ಯ ದೇವತಾಮಹಿಮೆ ಮುಂತಾದ್ದರಲ್ಲಿ ತನ್ಮಯರಾಗಿ ಹೋಗುವಿಕೆಯೂ, ಬುದ್ಧಿಶಕ್ತಿ, ನಿಷ್ಠೆ, ವಿಚಾರಬುದ್ಧಿ, ಹಿಡಿದದ್ದನ್ನು ಸಾಧಿಸತಕ್ಕ ಕೆಚ್ಚು, ಪವಿತ್ರತೆ, ಸ್ವಾರ್ಥಹೀನತೆ, ಇವೇ ಮುಂತಾದ ಅಲೌಕಿಕ ಗುಣಗಳೂ ಅವರಲ್ಲಿ ಸ್ವಭಾವ ಸಿದ್ಧವಾಗಿದ್ದುವು.

ಇನ್ನಿಷ್ಟು ಈ ವಿಚಾರವಾಗಿ ಬರೆಯುತ್ತ ಹೋದರೂ ವಾಚಕರಿಗೆ ಇವೆಲ್ಲವೂ ನಿಜವೆಂದು ನಂಬುಗೆ ಹುಟ್ಟುವುದೇ ಕಷ್ಟ. ಆದರೂ ಈ ಭಾಗವೆಲ್ಲ ಪರಮಹಂಸರ ಮಾತುಗಳನ್ನೇ ಅನುಸರಿಸಿ ಬರೆದಿರುವುದರಿಂದ ವಿಚಾರಾರ್ಹವಾಗಿದೆಯೆಂದು ಹೇಳುವೆವು. ವಿಚಾರಮಾಡಿದ ಹೊರತು ಸತ್ಯವು ಹೊರಪಡದು.

# ಹನ್ನೊಂದನೆಯ ಅಧ್ಯಾಯ.

## ಶ್ರೀ ಶ್ರೀರಾಮಕೃಷ್ಣಪರಮಹಂಸರ

## ಗುರುಭಾವ.

ಅವಜಾನಂತಿಮಾಂ ಮೂಢಾ ಮಾನುಷೀಂತನು ಮಾಶ್ರಿತಂ ।
ಪರಂಭಾವ ಮಜಾನಂತೋ ಮಮಭೂತ ಮಹೇಶ್ವರಂ ॥

ಗೀತಾ ೯—೧೧.

ಹೂ ಅರಳಿತು. ಅರಳಿ ಮಕರಂದದಿಂದ ತುಂಬಿ ತುಳುಕಾಡುತ್ತ ದುಂಬಿಗಳ ಆಗಮನವನ್ನು ಎದುರುನೋಡುತ್ತ ಕಾದುಕೊಂಡು ಕುಳಿತಿದ್ದು ಅವು ಬಂದಹಾಗೆಲ್ಲ ವಿಶ್ವಾಸದಿಂದ ಬರಮಾಡಿಕೊಂಡು, ತಾಯಿಯು ಮಕ್ಕಳನ್ನು ಆದರಿಸುವಂತೆ ಅವುಗಳಿಗೆ ಮಕರಂದ ವನ್ನು ಊಡಿ ತೃಪ್ತಿಗೊಳಿಸಿತು. ಅವೂ ಮಕರಂದಪಾನಮಾಡಿ ಆನಂದದಿಂದ ಝೇಂಕರಿಸುತ್ತ ನಾನಾ ಕಡೆಗೆ ಹಾರಿಹೋಗಿ ಆ ಮಧುಮಾಹಾತ್ಮ್ಯೆಯನ್ನು ವಿವರಿಸಿದುವು.

ಹೂ ಎಷ್ಟು ದೊಡ್ಡದಾದರೆ ಅರಳುವುದಕ್ಕೆ ಅಷ್ಟು ಹೆಚ್ಚು ಕಾಲಬೇಕು. ಆದ್ದರಿಂದ ರಾಮಕೃಷ್ಣ ಮಹಾಕುಸುಮವು ಚೆನ್ನಾಗಿ ಅರಳುವುದಕ್ಕೆ ಹನ್ನೆರಡು ವರ್ಷಕಾಲ ಹಿಡಿಯಿತು. ಈಗ ಅರಳಿ, ಕಳಿತ ಆ ಕುಸುಮವು ಹೊರಲಾರದಷ್ಟು, ಹಿಡಿಸಲಾರದಷ್ಟು ಜ್ಞಾನ ಮಕರಂದವು, ಅದರಲ್ಲಿ ಶೇಖರಿಸಲ್ಪಟ್ಟಿದ್ದಿತು. ಶಿಷ್ಯ ಭೃಂಗಗಳೂ ವಾಸನೆಯನ್ನು ಹಿಡಿದು ಒಂದೊಂದಾಗಿ, ನಾಲ್ಕುನಾಲ್ಕಾಗಿ ಗುಂಪು ಗುಂಪಾಗಿ ಬರಲು ಮೊದಲುಮಾಡಿದುವು. ಸ್ತನ್ಯವುಸೇರಿ ಅದನ್ನು ಇನ್ನೂ ಶಿಶುವು ಕುಡಿಯದೇ ಇದ್ದದ್ದರಿಂದ ಉತ್ಪನ್ನವಾಗುವ ಒಂದು

ವಿಧವಾದ ವ್ಯಥೆಯನ್ನು ಸಹಿಸಿಕೊಂಡಿದ್ದು, ಶಿಸುವು ಎದ್ದುಬರುವು ದನ್ನೇ ನಿರೀಕ್ಷಿಸಿಕೊಂಡಿರುತ್ತಾ, ಎದ್ದುಬಂದಕೂಡಲೆ ಆನಂದದಿಂದ ಆಲಿಂಗಿಸಿಕೊಂಡು ಅದಕ್ಕೆ ಸ್ತನ್ಯವನ್ನು ಊಡಿ ಸುಖಿಯೂ ಸ್ವಸ್ಥ ಚಿತ್ತಳೂ ಆಗುವ ತಾಯಿಯಂತೆ ಈ ಗುರುಕುಸುಮವು ಶಿಷ್ಯ ಭೃಂಗಗಳು ತಡಮಾಡಿದ್ದಕ್ಕಾಗಿ ಒದ್ದಾಡುತ್ತಿದ್ದು ಬಂದಕೂಡಲೆ ಶೇಖರಿಸಿಕೊಂಡಿದ್ದ ಅಮೃತವನ್ನು ಪಾನಮಾಡಿಸಿ ಕೃತಕೃತ್ಯ ಬುದ್ಧಿ ಯನ್ನು ಪಡೆಯಿತು. ಮಧುಪಗಳೂ ಅದೇ ಬುದ್ಧಿಯಿಂದ ತಾವು ಪಡೆದುಕೊಂಡ ಅಮೃತವನ್ನು ಜೀವರಾಶಿಗಳ ಉಪಯೋಗಕ್ಕಾಗಿ ನಾನಾ ದಿಕ್ಕುಗಳಿಗೂ ತೆಗೆದುಕೊಂಡು ಹೋದುವು. ಎಂಥಪುಷ್ಪ ವೋ ಅಂಥ ಮಕರಂದ! ಎಂಥ ಮಕರಂದವೋ ಅಂಥ ದುಂಬಿ ಗಳು !!

ಶ್ರೀ ವಿವೇಕಾನಂದ ಸ್ವಾಮಿಗಳು ಪರಮಹಂಸರನ್ನು ಮೊದಲು ಸಾರಿ ನೋಡಿದ್ದು ಒಂದಪೂರ್ವದ ಘಟನೆ. ಅದರ ವರ್ಣನೆ ಯನ್ನು ಪಾಠಕರು ಅನ್ಯತ್ರ ನೋಡಬಹುದು. ಸ್ವಲ್ಪ ಹೆಚ್ಚು ಕಡಿಮೆ ಅವರು ಬಂದ ಕಾಲದಲ್ಲಿಯೇ ಪ್ರಮುಖರಾದ ಇತರ ಶಿಷ್ಯ ರೆಲ್ಲರೂ ಬಂದು ಸೇರಿದರು. ಅಲ್ಲಿಂದ ಮುಂದಕ್ಕೆ ಪರಮಹಂಸರ ಗುರುಭಾವವೂ ಜನಗಳಲ್ಲಿ ವಿಶೇಷವಾಗಿ ಪ್ರಕಟವಾಯಿತು. ಆದರೆ ಅವರ ಗುರುಭಾವವು ಆಗಲೇ ಆರಂಭವಾಯಿತೆಂದು ತಿಳಿಯಬಾರದು. ಏಕೆಂದರೆ ಸಾಧನಕಾಲ ಮುಗಿದಮೇಲೆ ಅದರ ಪೂರ್ಣವಿಕಾಸ ವಾದರೂ, ಪರಮಹಂಸರ ಬಾಲ್ಯದಿಂದಲೂ ಆ ಗುರುಭಾವವು ಆಗ್ಗಾಗ್ಗೆ ಕಾಣಿಸಿಕೊಳ್ಳುತ್ತಲೇ ಇತ್ತು. ಇನ್ನೂ ಚಿಕ್ಕವಯಸ್ಸಿನಲ್ಲಿಯೇ ಲಾಹಾಬಾಬುವಿನ ಮನೆಯಲ್ಲಿ ನಡೆದ ಸಂಗತಿಯೂ * ಯೌವನ ಕಾಲದಲ್ಲಿ ರಾಣಿರಾಸ್ಮಣಿಗೆ ಆದ ಶಿಕ್ಷೆಯೂ * ಪಾಠಕರ ನೆನಪಿನಲ್ಲಿರ ಬಹುದು. ಅಲ್ಲಿಂದೀಚೆಗೆ, ಕಲ್ಕತ್ತೆಗೆ ಬಂದಮೇಲೆ, ವಿವೇಕಾನಂದ ಸ್ವಾಮಿಗಳು ಬರುವುದಕ್ಕೆ ಬಹಳ ಮುಂಚೆಯೇ, ಪರಮಹಂಸರ

* ೩೦ ಮತ್ತು ೫೪ ನೇ ಪುಟಗಳನ್ನು ನೋಡಿ.

ಹತ್ತಿರಕ್ಕೆ, ಕರ್ತಾಭಜಾ, ರಾಮಾಯಿತ, ವೈಷ್ಣವ, ತಾಂತ್ರಿಕ ಮುಂತಾದ ಸಕಲ ಸಂಪ್ರದಾಯಗಳ ಸಾಧುಗಳೂ, ಸಾಧಕರೂ, ವೈಷ್ಣವಚರಣ ಗೌರೀಪಂಡಿತ ಮುಂತಾದ ಶಾಸ್ತ್ರಜ್ಞರೂ, ಪಂಡಿತರೂ ಬಂದು ಅವರ ಸಹಾಯದಿಂದ ಧರ್ಮಲಾಭವನ್ನು ಹೊಂದಿ ಹೊರಟು ಹೋಗಿದ್ದರು. ಇದನ್ನು ಕಲ್ಕತ್ತೆಯ ನಿವಾಸಿಗಳೇ ಅನೇಕರು ಅರಿಯರು.

ಗುರುಭಾವವು ಪೂರ್ಣವಾಗಿ ವಿಕಾಸವಾದ ಮೇಲೆ ಅದೇ ಸಹಜವಾದ ಭಾವವಾಗಿ ನಿಂತುಕೊಂಡಿತು. ಆಗ ಪರಮಹಂಸರು ಜಗನ್ಮಾತೆಯಿಂದ ನಿರ್ದಿಷ್ಟರಾದ ಭಕ್ತರ ಆಗಮನವನ್ನೇ ನಿರೀಕ್ಷಿಸಿಕೊಂಡು ಕುಳಿತಿದ್ದರು. ಜಾಗ್ರತೆಯಲ್ಲಿಯೇ ಇವರೂ ಇತರರೂ ಬರಲು ಮೊದಲು ಮಾಡಿದರು. ಅಲ್ಲಿಂದ ದೇಹತ್ಯಾಗ ಮಾಡುವ ವರೆಗೂ ಮಿಕ್ಕಿದ್ದ ಐದಾರು ವರ್ಷಗಳೂ ಶಿಕ್ಷಣ, ಉಪದೇಶ ಇವುಗಳಲ್ಲಿಯೇ ವಿಶೇಷವಾಗಿ ಕಳೆದು ಹೋದುವು.

ನಿಜವಾದ ಗುರುಗಳ ಚರಿತ್ರೆಗಳೆಲ್ಲಾ ಹೀಗೆಯೇ! ಅಂಥವರು ಗುರುಭಾವವನ್ನು ಬೆನ್ನಿಗೆ ಕಟ್ಟಿಕೊಂಡೇ ಹುಟ್ಟುವರು. ಕುಂಬಳಕಾಯಿ ಪಡವಲಕಾಯಿ ಮುಂತಾದ ಗಿಡಗಳಲ್ಲಿ ಕಾಯಿ ಬಿಡುವ ಹೂಗಳನ್ನು ಹೂ ಅರಳುವುದಕ್ಕೆ ಮುಂಚೆಯೇ ಹೇಳಿಬಿಡಬಹುದು. ಏಕೆಂದರೆ ಅಂಥ ಮೊಗ್ಗಿನ ಹಿಂದೆ ಒಂದು ಸಣ್ಣ ಹೀಚು ಅಂಟಿಕೊಂಡಿರುವುದು. ನಿಜವಾದ ಗುರುವಿನಲ್ಲಿಯೂ ಹೀಗೆಯೇ; ಮೊದಲು ಗುರುಭಾವ; ಆಮೇಲೆ ಮಾನುಷಭಾವ. ಅದಕ್ಕೆ ತಕ್ಕಂತೆ ಹುಟ್ಟಿದ್ದು ಮೊದಲ್ಗೊಂಡು ಆ ಗುರುಭಾವವು ಬಲಿತು ರಸತುಂಬಿ ಪ್ರಕಾಶಕ್ಕೆ ಬರಲು ಅನುಕೂಲವಾದ ಸಂದರ್ಭಗಳು ತಾವಾಗಿಯೇ ಒದಗಿಬರುತ್ತವೆ. ಇವೆಲ್ಲಾ ಗುರುಭಾವವನ್ನು ಸಂಪಾದಿಸಿಕೊಡುತ್ತವೆ ಎಂದರ್ಥವಲ್ಲ. ಆ ಗುರುಭಾವವಿರುವುದರಿಂದ ಅದರ ಪ್ರಕಾಶಕ್ಕೋಸ್ಕರ ಇವೆಲ್ಲಾ ಸಂಘಟಿಸುತ್ತವೆ.

ಅದಕ್ಕೆ ಉದಾಹರಣೆಯಾಗಿ ಪರಮಹಂಸರ ಬಾಲ್ಯಚರಿತ್ರೆ

ಯನ್ನು ನೋಡಿ! ಅವರು ಓದುವುದು ಬರೆಯುವುದನ್ನೇನೋ ಕಲಿತುಕೊಂಡರು. ಆದರೆ ಲೌಕಿಕವಿದ್ಯೆ ಯಾವುದನ್ನೂ ಕಲಿಯಲು ಅವಕಾಶವಾಗಲಿಲ್ಲ. ಕೊನೆಯವರೆಗೂ "ಈ ಅಕ್ಕಿ ಬಾಳೆಹಣ್ಣು (ಬೇಳೆ?) ಸಂಪಾದನೆಮಾಡುವ ವಿದ್ಯೆ ಏಕೆ?" ಎಂದು ಹೇಳುತ್ತಿದ್ದರು. ಪುರಾಣಪುಣ್ಯಕಥೆಗಳೆಂದರೆ ಕೇವಲ ಆಸಕ್ತಿ; ಅವುಗಳನ್ನು ಹೇಳುತ್ತಿರುವ ಕಡೆಗೆ ಹೋಗಿ ಆದರದಿಂದ ಕೇಳುತ್ತಿದ್ದರಲ್ಲದೆ ಅವುಗಳನ್ನು ಹೇಗೆಹೇಳಿದರೆ ಸ್ವಾರಸ್ಯವಾಗಿರಬಹುದು, ಹೇಗೆಹೇಳಿದರೆ ಮನಸ್ಸಿಗೆ ಅಂಟಬಹುದು ಎಂಬುದನ್ನು ಚೆನ್ನಾಗಿ ಗಮನಿಸುತ್ತಿದ್ದರು. ಅಸಾಧಾರಣವಾದ ಜ್ಞಾಪಕಶಕ್ತಿ ಇದ್ದದ್ದರಿಂದ ಇವುಗಳಲ್ಲೊಂದನ್ನೂ ಮರೆಯದೆ ಮುಂದೆ ಸಮಯೋಚಿತವಾಗಿ ಶಿಷ್ಯರಿಗೂ ಭಕ್ತರಿಗೂ ಹೇಳುತ್ತಿದ್ದರು. ದೇವರೆಂದರೆ ಮೊದಲಿಂದಲೂ ಕೇವಲ ಭಕ್ತಿ. ದೇವಮೂರ್ತಿಗಳನ್ನು ಮಾಡುವುದೂ ಬರೆಯುವುದೂ ಬಹು ಚೆನ್ನಾಗಿ ಬರುತ್ತಿತ್ತು. ದೇವತೆಗಳ ವೇಷವನ್ನು ಧರಿಸಿ ಬಹು ಚೆನ್ನಾಗಿ ಅಭಿನಯಿಸುವುದಕ್ಕೆ ಬರುತ್ತಿತ್ತು. ಹೇಗೋ ಗೊಸಾಯಿಗಳೂ ವೈರಾಗಿಗಳೂ ಸನ್ಯಾಸಿಗಳೂ ಗಂಟು ಬಿದ್ದು ಅವರ ನಡತೆ, ಭಕ್ತಿ, ವೈರಾಗ್ಯ ನಿತ್ಯಾನಿತ್ಯವಸ್ತು ವಿಚಾರ ಮುಂತಾದುವುಗಳೇ ಮುಂದಟ್ಟಾಗುತ್ತ ಬಂದುವು. ಜನರ ಒಂದೊಂದು ಮಾತನ್ನೂ ಒಂದೊಂದು ಕಾರ್ಯವನ್ನೂ ಕಣ್ಣಲ್ಲಿ ಕಣ್ಣಿಟ್ಟು ನೋಡುತ್ತ, ಒಳ್ಳೆಯದು ಕೆಟ್ಟದ್ದು ಎಲ್ಲವನ್ನೂ ಗ್ರಹಿಸುತ್ತಿದ್ದರು. ಇದರಿಂದ ಮುಂದೆ ಭಕ್ತರ ಮನಸ್ಸಿಗೆ ಹಿಡಿಯುವಂತೆ ಬೋಧಿಸುವುದು ಮಾತ್ರವಲ್ಲದೆ, ಹೆಂಗಸರು ಗಂಡಸರನ್ನು ಮೋಹಗೊಳಿಸುವ ರೀತಿ, ಗಂಡಸರು ಹೆಂಗಸರನ್ನು ಮೋಹಗೊಳಿಸುವ ರೀತಿ ಮುಂತಾದುವುಗಳನ್ನು ಸಹಜವಾಗಿರುವಂತೆ ಅಭಿನಯಿಸಿಕೂಡ ತೋರಿಸುತ್ತಿದ್ದರಂತೆ! ಬಾಲ್ಯ ಕಳೆದಮೇಲೆ, ತಂದೆ ತೀರಿಹೋದನು. ಅಣ್ಣನು ಕಲ್ಕತ್ತೆಗೆ ಬರಬೇಕಾಯಿತು. ಅಣ್ಣನ ಹಿಂದೆ ತಮ್ಮನೂ ಬರಬೇಕಾಯಿತು. ಹೊಸದಾಗಿ ಕಟ್ಟಿದ ರಾಣಿರಾಸ್ಮಣಿಯ ದೇವಸ್ಥಾನದಲ್ಲಿ ಮೊದಲು

ಅಣ್ಣನೂ ಆಮೇಲೆ ತಮ್ಮನಾದ ರಾಮಕೃಷ್ಣಪರಮಹಂಸರೂ ಪೂಜಾರಿಯ ಕೆಲಸವನ್ನು ವಹಿಸಬೇಕಾಯ್ತು. ಇಲ್ಲಿ ಪೂಜೆಮಾಡುತ್ತ ಅನನ್ಯವಾದ ಭಕ್ತಿಯಿಂದ ಜಗನ್ಮಾತೆಯ ರೂಪವಾಗಿ ಅಲ್ಲಿ ನೆಲೆಸಿದ್ದ ಭಗವಂತನನ್ನು ಸಾಕ್ಷಾತ್ಕಾರ ಮಾಡಿಕೊಂಡರು. ಇದಾದ ಮೇಲೆ ಕ್ರಮವಾಗಿ ವೈಷ್ಣವ, ವೇದಾಂತ, ಯೋಗ, ತಾಂತ್ರಿಕ, ಮಹಮ್ಮದೀಯ, ಕ್ರೈಸ್ತ ಮುಂತಾದ ನಾನಾಮಾರ್ಗಗಳನ್ನು ಅನುಸರಿಸಿ ಅದೇ ಅನುಭವವನ್ನು ಪಡೆದು "ಏಕಂಸದ್ವಿಪ್ರಾಬಹುಧಾವದಂತಿ" ಎಂಬುದನ್ನು ತಿಳಿದುಕೊಂಡರು. ಈ ಹನ್ನೆರಡುವರ್ಷ ಸಾಧನಕಾಲದಲ್ಲಿ ಅವರೊಡನೆ ಹುಟ್ಟಿದ ಗುರುಭಾವವು ಕ್ರಮೇಣ ವಿಕಸಿತವಾಗಿ ಪ್ರಫುಲ್ಲವಾಯಿತು. ಇದರಲ್ಲಿ ವಿಶೇಷವಾದ ಸಂಗತಿ ಏನೆಂದರೆ ಅವರಿಗೆ ಯಾವ ಕಾಲದಲ್ಲಿ ಯಾವ ಮಾರ್ಗವನ್ನು ಅಭ್ಯಾಸಮಾಡಬೇಕೆಂದು ಮನಸ್ಸಿಗೆ ಬರುತ್ತಿತ್ತೋ ಆ ಕಾಲಕ್ಕೆ ತಕ್ಕಹಾಗೆ ವೇದಾಂತ ಪಂಡಿತನಾಗಲಿ, ಯೋಗಿಯಾಗಲಿ, ವಿಷ್ಣುಭಕ್ತನಾಗಲಿ, ಖಾಜಿಯಾಗಲಿ ಬಂದುಬಿಡುತ್ತಿದ್ದರು. ಬಂದವರೆಲ್ಲರೂ ಇವರು ಮಹಾತ್ಮರೆಂದೂ ಅವತಾರಪುರುಷರೆಂದೂ ಹೊಗಳಿ ತಮಗೆ ತಿಳಿದಿದ್ದನ್ನು ಸ್ವಲ್ಪ ಸೂಚಿಸುತ್ತಲೇ ಪರಮಹಂಸರು ಎಲ್ಲವನ್ನೂ ಗ್ರಹಿಸಿಬಿಡುತ್ತಿದ್ದರು. ಕೊನೆಗೆ ಗುರುಗಳೇ ಶಿಷ್ಯನಿಂದ ಎಷ್ಟೋ ವಿಷಯಗಳನ್ನು ಕಲಿತುಕೊಂಡು ತಾವು ಧನ್ಯರಾಗಿ ಹೊರಟುಹೋದರು.

ಗುರುವೆಂದರೇನು? ಸಂಸಾರಸಾಗರದಿಂದ ಪಾರುಮಾಡಿ. ಮಾಯಾಪಾಶವನ್ನು ಕಡಿದುಹಾಕಿ, ನಮಗೆ ಮೋಕ್ಷಮಾರ್ಗವನ್ನು ತೋರಿಸತಕ್ಕವನೇ ಗುರು. ಇಂಥವನು ಈಶ್ವರನೊಬ್ಬನೇ ಹೊರತು ಮಾಯಾಪಾಶದಲ್ಲಿ ಸಿಕ್ಕಿ ನರಳುತ್ತಿರುವ ಮನುಷ್ಯನೆಂದಿಗೂ ಆಗಲಾರನು. ಮನುಷ್ಯನು ಮನುಷ್ಯನಿಗೆ ಈ ವಿಚಾರದಲ್ಲಿ ಸಹಾಯ ಮಾಡುವುದೆಂದರೆ " ಅಂಧೇನೈವನೀಯಮಾನಾಯಥಾಂಧಾಃ " (ಕುರುಡನು ಕುರುಡನಿಗೆ ದಾರಿತೋರಿಸಿದಹಾಗೆ) ಎಂಬಂತಾಗುವುದು.

ಜ್ಞಾನದಾಯಕವಾದ ಗುರುಭಾವವು ಎಂದಿಗೂ ಮಾನುಷಿಕವಲ್ಲ. ಅದು ದೈವಿಕ. ಆದ್ದರಿಂದ ಗುರುವು ಒಬ್ಬನೇ. ಆದರೆ ಆ ಗುರುಭಾವವು ಮಾತ್ರ ಬೇರೆಬೇರೆ ದೇಹಗಳ ಮೂಲಕವಾಗಿ ಪ್ರಕಾಶಿತವಾಗಬಹುದು. ಆ ಗುರುಭಾವವು ಯಾವ ದೇಹದ ಮೂಲಕ ವ್ಯಕ್ತವಾಗುವುದೋ ಅವನ್ನು ಗುರುವೆಂದು ಕರೆಯುವುದು ವಾಡಿಕೆ. ಆ ಶರೀರವನ್ನು ಅವಲಂಬಿಸಿಕೊಂಡೇ ಗುರುಪೂಜೆಯನ್ನು ಮಾಡಬೇಕು. ಅದೇ ನಮಗೆ ಶ್ರೇಯಸ್ಕರ.

ರಾಮಕೃಷ್ಣಪರಮಹಂಸರು ಗುರುಗಳಾಗಿ ಬೋಧಿಸಿದುದರಲ್ಲಿ ಹೊಸವಿಷಯವೇನು? ಯಾರೂ ಹೇಳಿಲ್ಲದ ವಿಷಯವನ್ನು ಅವರೇನು ಹೇಳಿದರು? ಎಂದು ಕೇಳಬಹುದು. ಧರ್ಮವಿಚಾರದಲ್ಲಿ ಹೊಸದಾಗಿ ಹೇಳುವುದೇನಿದೆ? ಎಲ್ಲವೂ ಹಿಂದೆ ಶಾಸ್ತ್ರದಲ್ಲಿ ಉಕ್ತವಾಗಿರುವುದೇ; ಎಲ್ಲವೂ ಹಿಂದೆ ಅವತಾರ ಪುರುಷರು ಬೋಧಿಸಿರುವುದೇ; "ನರಿಗಳು ಕೂಗುವುದೆಲ್ಲ ಒಂದೇವಿಧ" ವೆಂದು ಪರಮಹಂಸರು ಹೇಳುತ್ತಿದ್ದರು. ಮಹಾಪುರುಷರಾದವರು ಎಂದಿಗೂ ಶಾಸ್ತ್ರಕ್ಕೆ ವಿರುದ್ಧವಾದ ಅಥವಾ ಹೊರಗಾದ ವಿಷಯಗಳನ್ನು ಬೋಧಿಸುವುದಿಲ್ಲ. (ಶಾಸ್ತ್ರಸಂಪ್ರದಾಯವನ್ನು ರಕ್ಷಿಸುವುದು ಅವರ ಮುಖ್ಯಕರ್ತವ್ಯ. ಅದೇ ಅವರ ಲಕ್ಷಣ. * ಮಹಾತ್ಮರು, ಅವತಾರಮಾಡುವುದು ಶಾಸ್ತ್ರದಲ್ಲಿಲ್ಲದ ಹೊಸ ವಿಷಯವನ್ನು ಹೇಳುವುದಕ್ಕಲ್ಲ. ಕಾಲಗುಣದಿಂದ ಧರ್ಮದ ಮೇಲೆ ಬಿದ್ದಿರುವ ದೂಳನ್ನು ತೊಡೆದು, ದೇಶಕಾಲ ಮುಂತಾದುವುಗಳಿಂದ ಬದಲಾಯಿಸಿರುವ ನಮ್ಮ ಮನೋಭಾವಗಳಿಗೆ ತಕ್ಕಂತೆ ಆ ಹಳೆಯ ವಿಷಯವನ್ನೇ ವಿವರಿಸಿ ಅದೇ ಸತ್ಯವೆಂದು ಸ್ಥಾಪಿಸುವುದಕ್ಕೆ; ಆ ಕಾಲದಲ್ಲಿ ಉಂಟಾದ ಧರ್ಮಗ್ಲಾನಿಯ ಮೂಲಕಾರಣವನ್ನು ಕಿತ್ತುಹಾಕಿ ಎಲ್ಲರಿಗೂ ದಾರಿಯನ್ನು ತೋರಿಸಿ ಮೇಲ್ಪಂಕ್ತಿಯಾಗಿರುವಂತೆ ತಾವು ಜೀವಿಸಿಕೊಂಡಿದ್ದು ತತ್ಕಾಲಕ್ಕೆ ಅನುಕೂಲವಾದ ರೀತಿಯಲ್ಲಿ ಬೋಧಿಸಿ ಹೋಗುವುದಕ್ಕೆ.)

---

* *Cf.* I have come to fulfil and not to destroy.—Christ.

ಎಲ್ಲಾ ಮಹಾಪುರುಷರೂ ಹೀಗೆಯೇ; ಅವರು ಎಷ್ಟೇ ಕಠಿನವಾದ ವಿಷಯಗಳನ್ನು ತೆಗೆದುಕೊಂಡರೂ ಸುಲಭವಾದ ಮಾತುಗಳಿಂದ ಮನಸ್ಸಿಗೆ ಅಂಟುವಂತೆಯೂ ಮರೆಯದಂತೆಯೂ ಅವುಗಳನ್ನು ವಿವರಿಸಿ ಹೇಳುವರು. ಸಂದರ್ಭಕ್ಕೆ ಅನುಕೂಲವಾದ ಕಥೆಗಳನ್ನೂ ಉಪಮಾನಗಳನ್ನೂ ಹೇಳುವುದೂ ಇವರಲ್ಲಿ ಒಂದು ಸಾಮಾನ್ಯವಾದ ಗುಣ. ಇದಕ್ಕೆ ಒಂದೆರಡು ಉದಾಹರಣೆಗಳನ್ನು ಕೊಟ್ಟರೆ ವ್ಯಕ್ತವಾಗಬಹುದು ಒಂದುನಾರಿ ಸಾಂಖ್ಯ ದರ್ಶನದ ಪ್ರಸ್ತಾಪ ಬಂದಾಗ ರಾಮಕೃಷ್ಣಪರಮಹಂಸರು ಹೇಳಿದ್ದು ಏನೆಂದರೆ "ಪುರುಷ ಅಕರ್ತಾ, ಏನೂ ಮಾಡುವುದಿಲ್ಲ; ಪ್ರಕೃತಿಯೇ ಎಲ್ಲಾ ಕಾರ್ಯವನ್ನೂ ಮಾಡುವುದು. ಪುರುಷನು ಪ್ರಕೃತಿಯ ಈ ಸಕಲ ಕಾರ್ಯಗಳನ್ನೂ ಸಾಕ್ಷಿರೂಪವಾಗಿ ನೋಡುತ್ತಿರುತ್ತಾನೆ. ಪ್ರಕೃತಿಯೂ ಪುರುಷನನ್ನು ಬಿಟ್ಟು ತಾನಾಗಿ ತಾನು ಯಾವ ಕೆಲಸವನ್ನೂ ಮಾಡುವುದಕ್ಕೆ ಆಗುವುದಿಲ್ಲ". ಇದು ಕೇಳಿದವರೆಲ್ಲರಿಗೂ ಅರ್ಥವಾಗಲಿಲ್ಲ. ಅದನ್ನು ನೋಡಿ "ಮನೆಗಳಲ್ಲಿ ನೋಡಿಲ್ಲವೇನಪ್ಪ! ಯಜಮಾನನಾದವನು ಸುಖವಾಗಿ ಒಂದು ದಿಂಬು ಒರಗಿಕೊಂಡು ಕೂತು, ಮಾಡಬೇಕಾದ ಕೆಲಸವನ್ನು ಹೇಳುತ್ತಾನೆ. ಯಜಮಾನಿ ಮಾತ್ರ ನೆರಿಯನ್ನೂ ಸೆರಗನ್ನೂ ಸೆಕ್ಕಿಕೊಂಡು, ಒಂದುಸಲ ಅತ್ತಲಾಗಿ ಒಂದುಸಲ ಇತ್ತಲಾಗಿ ಹೋಗುತ್ತ ಆ ಕೆಲಸವಾಯಿತೇ ಇಲ್ಲವೇ, ಈ ಕೆಲಸವನ್ನು ಮಾಡಿದರೇ ಇಲ್ಲವೇ ಎಂದು ನೋಡುತ್ತಾಳೆ; ಕೇಳುತ್ತಾಳೆ; ಮನೆಯಲ್ಲಿರುವ ಮಕ್ಕಳು ಮರಿಗಳ ಯೋಗಕ್ಷೇಮಗಳನ್ನು ನೋಡುತ್ತಾಳೆ. ಮಧ್ಯೆಮಧ್ಯೆ ಬಂದು ಗಂಡನಿಗೆ "ಅದು ಹಾಗಾಯಿತು; ಇದು ಹೀಗಾಯಿತು. ಅದು ಮಾಡುವುದಕ್ಕೆ ಆಗುತ್ತದೆ. ಇದು ಮಾಡುವುದಕ್ಕೆ ಆಗುವುದಿಲ್ಲ" ಎಂದು ಹೇಳುತ್ತಾಳೆ. ಯಜಮಾನನು ಮಾತ್ರ ತಂಬಾಕನ್ನು ತೀಡುತ್ತಲೋ ನಶ್ಯವನ್ನು ಮಾಡುತ್ತಲೋ 'ಹು ಹು' ಎನ್ನುತ್ತಲೂ ತಲೆಯನ್ನೂ ಕೈಯನ್ನೂ ಅಲ್ಲಾಡಿಸುತ್ತಲೂ

ಇರುತ್ತಾನೆ. ಹೀಗೆತಾನೆ ಸಾಂಖ್ಯ ಎಂದರೆ? ಇನ್ನೇನು?" ಎಂದು ಹೇಳಿದರು. ಆಮೇಲೆ ವೇದಾಂತಪ್ರಸ್ತಾಪ ಬಂತು. "ವೇದಾಂತದಲ್ಲಿ ಬ್ರಹ್ಮ, ಬ್ರಹ್ಮಶಕ್ತಿ, ಪುರುಷ, ಪ್ರಕೃತಿ ಇವೆಲ್ಲ ಬೇರೆಯಲ್ಲ; ಒಂದೇ ಪದಾರ್ಥ; ಕೆಲವುವೇಳೆ ಪುರುಷಭಾವದಲ್ಲಿ, ಮತ್ತೆ ಕೆಲವುವೇಳೆ ಪ್ರಕೃತಿಭಾವದಲ್ಲಿ ಇರುತ್ತದೆ." ಎಂದು ಹೇಳಿದರು. ಅದು ಎಲ್ಲರಿಗೂ ಗೊತ್ತಾಗಲಿಲ್ಲ. ಆಗ "ಅದು ಹೇಗೆ ಅಂತ ಮಾಡಿಕೊಂಡಿದ್ದೀರಿ? ಈಗ, ಹಾವು ಇದೆ. ಅದು ಹರಿದು ಹೋಗುತ್ತಿರುವುದೂ ಉಂಟು; ಸುಮ್ಮನೆ ಬಿದ್ದಿರುವುದೂ ಉಂಟು. ಅದು ಸುಮ್ಮನೆ ಬಿದ್ದಿರುವಾಗ ಪುರುಷಸ್ಥಿತಿಯು ಹಾಗಾಯಿತು. ಆಗ ಪ್ರಕೃತಿಯು ಪುರುಷನೊಡನೆ ಸೇರಿ ಐಕ್ಯವಾಗಿರುವುದು. ಅದು ಯಾವಾಗ ಹರಿದು ಹೋಗುತ್ತದೆಯೋ ಆಗ ಪ್ರಕೃತಿ ಇದ್ದಹಾಗೆ. ಅದು ಆಗ ಪುರುಷನಿಂದ ಬೇರೆಯಾಗಿ ಕಾರ್ಯಗಳನ್ನು ಮಾಡುತ್ತಿರುವ ಹಾಗೆ" ಎಂದು ಹೇಳಿದರು. ಇದರಿಂದ ಪುರುಷಪ್ರಕೃತಿಗಳಿಗೆ ನಿರ್ದೋಷವಾದ ಲಕ್ಷಣವನ್ನು ಹೇಳಿದ ಹಾಗಾಗಲಿಲ್ಲ. ನಿಜ. ಆದರೆ ಇದಕ್ಕಿಂತಲೂ ಸುಲಭವಾದ ಮಾತಿನಲ್ಲಿ, ಸುಲಭವಾದ ರೀತಿಯಲ್ಲಿ, ಇಂಥ ವಿಚಾರಗಳನ್ನು ಸಾಮಾನ್ಯ ಜನರಿಗೆ ತಿಳಿಸುವುದು ಅಸಾಧ್ಯ.*

ಆದರೆ ಅವರು ಆಡುವಮಾತು ಸುಲಭವಾಗಿ ಕಂಡರೂ ಎಷ್ಟು ಭಾವ, ಅರ್ಥಗಳಿಂದ ಗರ್ಭಿತವಾಗಿರುತ್ತದೆ ಎಂಬುದು ಮೊದಲುಸಾರಿ ಕೇಳಿದಾಗ ಅಥವಾ ಓದಿದಾಗ ಗೊತ್ತಾಗುವುದಿಲ್ಲ. ಎಲ್ಲರಿಗೂ ಹೆಚ್ಚು ಅರ್ಥವನ್ನು ಗ್ರಹಿಸುವುದೂ ಸಾಧ್ಯವಲ್ಲ. ಅದು ಅವರವರ ಸಾಮರ್ಥ್ಯದ ಮೇಲೆ ಹೋಗುತ್ತದೆ. ವಿವೇಕಾನಂದ ಸ್ವಾಮಿಗಳು ಒಂದುದಿನ ತಮ್ಮ ಸ್ನೇಹಿತರೊಬ್ಬರೊಡನೆ, ರಾಮ

---

* ಈಗ ಕನ್ನಡದಲ್ಲಿ ಪ್ರಕಟವಾಗಿರುವ ಉಪದೇಶವಾಕ್ಯಾವಳಿಯನ್ನು ನೋಡಿದರೆ ಇಂಥ ಸಾಮತಿಗಳು ಮತ್ತೂ ಕಥೆಗಳು ಎಷ್ಟೋ ಸಿಕ್ಕುವುವು.

ಕೃಷ್ಣಪರಮಹಂಸರು ಹೇಳಿದ ಒಂದೊಂದು ವಿಷಯವನ್ನು ತೆಗೆದು ಕೊಂಡೂ ಒಂದೊಂದು ದೊಡ್ಡ ಗ್ರಂಥವನ್ನು ಬರೆಯಬಹುದೆಂದ ರಂತೆ. ಆಗ ಅವರು "ಹಾಗೆ! ಎಲ್ಲಿ ನೋಡೋಣ; ಯಾವುದಾದರೂ ಒಂದು ವಿಷಯವನ್ನು ಪ್ರಸ್ತಾಪಿಸಿ!" ಎಂದರಂತೆ. ಆಗ ಸ್ವಾಮಿ ಗಳು "ಅದನ್ನು ಕೇಳಿ ತಿಳಿದುಕೊಳ್ಳುವುದಕ್ಕೆ ತಕ್ಕ ಸಾಮರ್ಥ್ಯ ವಿರಬೇಕಷ್ಟೆ!" ಎಂದುಹೇಳಿ, ನಾರಾಯಣನು ಎಲ್ಲೆಲ್ಲಿಯೂ ಇದ್ದಾ ನೆ ಎಂದು ಬೋಧಿಸುವ "ಆನೆಯೂ ನಾರಾಯಣ, ಮಾಹುತನೂ ನಾರಾಯಣ" ಎಂಬ ಕಥೆಯನ್ನು ಕುರಿತು ಹೇಳುವುದಕ್ಕೆ ಮೊದಲು ಮಾಡಿ, ದೈವಾಯತ್ತ ಪುರುಷಕಾರಗಳ ಪ್ರಸ್ತಾಪವನ್ನೆತ್ತಿ, ಈ ವಿಚಾರ ವಾಗಿ ನಮ್ಮವರು ಮತ್ತು ಪರದೇಶದವರು ಬಹುಕಾಲದಿಂದಲೂ ಮಾಡುತ್ತಿರುವ ತರ್ಕ ವಿತರ್ಕ, ಆದರೂ ಯಾವಸಿದ್ಧಾಂತವೂ ಸರಿ ಯಾಗಿಲ್ಲದೆ ಶ್ರೀ ಶ್ರೀ ಪರಮಹಂಸರವರು ಹೇಳಿರುವ ಒಂದು ಅಪೂ ರ್ವವಾದ ಸಮಾಧಾನ ಮುಂತಾದ ವಿಷಯಗಳನ್ನು ಕುರಿತು ಮೂರುದಿವಸ ಒಂದೇ ಸಮನಾಗಿ ತಿಳಿಯಹೇಳಿದರಂತೆ. ಹೀಗೆ ಅವರ ವಾಕ್ಯಗಳು ಅಷ್ಟು ಅರ್ಥಗರ್ಭಿತವಾಗಿರುತ್ತವೆ.

ಪ್ರಾಯಶಃ ಪರಮಹಂಸರು ಹೊನ್ನು ಮಣ್ಣುಗಳೆರಡೂ ಒಂದೇ ಎಂಬ ಬುದ್ಧಿ ಹುಟ್ಟುವುದಕ್ಕೆ ಮಾಡಿದ ಸಾಧನೆಯನ್ನು ಕೇಳದವರೇ ಇರಲಾರರು. ಹೀಗೆಯೇ ಪ್ರತಿಯೊಬ್ಬ ಸ್ತ್ರೀಯೂ ಜಗನ್ಮಾತೆಯ ರೂಪವೆಂಬ ಬುದ್ಧಿ ಹುಟ್ಟುವಂತೆ ಸಾಧನೆಮಾಡಿ ಇವೆರಡರಲ್ಲಿಯೂ ತಾವು ಸಿದ್ಧರಾದ ಬಳಿಕ ಕೊನೆಯವರೆಗೂ "ಕಾಮಿನೀಕಾಂಚನ" ಗಳನ್ನು ತ್ಯಾಗಮಾಡಬೇಕೆಂದು ಸಾರಿಸಾರಿ ಹೇಳುತ್ತಿದ್ದರು. ಇದು ಎಷ್ಟು ಸಾಮಾನ್ಯವಾಗಿ ಕಾಣುತ್ತದೆ! ಆದರೆ ಇವುಗಳನ್ನು ಬಿಡ ಬೇಕೆಂದರೆ ಎಷ್ಟು ಕಷ್ಟ! ಒಂದುವೇಳೆ ನಾವು ಅವುಗಳನ್ನು ಬಿಟ್ಟ ರೂ ಅವು ನಮ್ಮನ್ನು ಬಿಡವು. ಬಾಯಲ್ಲಿ ಇವು ಬೇಡವೆಂದು ಹೇಳುವವರೇ ಅಪರೂಪ. ಅಂತರ್ಯದಲ್ಲಿಯೂ ಇವುಗಳಮೇಲೆ ಆಶೆಯನ್ನು ಪೂರ್ತಿಯಾಗಿ ಬಿಡಬೇಕಾದರೆ ಎಲ್ಲರೂ ರಾಮಕೃಷ್ಣ

ಪರಮಹಂಸರೇ ಆಗಬೇಕು. ಇದರ ಮೇಲೆ ವಿವಾಹದ ಉದಾರ ವಾದ ಉದ್ದೇಶ್ಯವನ್ನು ಮರೆತು, ಇಂದ್ರಿಯ ಸುಖವೊಂದೇ ಅದರ ಉಪಯೋಗವೆಂದು ತಿಳಿದುಕೊಂಡು "ಋಣಂಕೃತ್ವಾಘೃತಂಪಿ ಬೇತ್" ಎಂದು ಹೇಳುತ್ತ ಸರ್ವ ಪ್ರಯತ್ನದಿಂದಲೂ ಧನಸಂಪಾದನೆ ಮಾಡಿ ಅದರಿಂದ ಐಹಿಕ ಭೋಗವನ್ನು ಹೆಚ್ಚಿಸಿಕೊಳ್ಳುವುದು ಹೇಗೆ ಎಂದೇ ಸದಾಧ್ಯಾನಮಾಡುತ್ತ, ಅದನ್ನು ಬಿಟ್ಟು ಮತ್ತೆ ಯಾವುದನ್ನೂ ಯೋಚಿಸಲೇ ಆರದ ನಮ್ಮಗಳಿಗೆ ಕಾಮಿನೀಕಾಂಚನ ಗಳನ್ನು ತ್ಯಾಗಮಾಡಬೇಕೆಂದು ಎಷ್ಟು ಒತ್ತಿಹೇಳಿದರೆ ತಾನೇ ಸಾಕಾದೀತು? ಬ್ರಹ್ಮಚರ್ಯವನ್ನು ಸರಿಯಾಗಿ ಕಾಪಾಡಿಕೊಳ್ಳದೆ ಕೇವಲ ಅಶಕ್ತರಾಗಿ ನಾನಾ ವಿಧದಲ್ಲಿಯೂ ದೇಶದ ಅವನತಿಗೆ ಕಾರಣರಾದ ನಮಗೆ, ಆಮುಷ್ಮಿಕ ಸಾಧನದಲ್ಲಿ ಪತಿಪತ್ನಿಯರು ಪರಸ್ಪರ ಸಹಾಯಕರಾಗದೆ ದೇವರೆಂಬುದನ್ನೇ ಮರೆತು ವಿಲಾಸ ವೈಭವಗಳಲ್ಲಿ ಮೆರೆಯುತ್ತಿರುವ ನಮಗೆ, ಇದನ್ನು ಎಷ್ಟುಬಾರಿ ಹೇಳಿದರೆ ತಾನೇ ಸಾಕಾದೀತು? ಇದರಿಂದ ಎಲ್ಲರೂ ರಾಮಕೃಷ್ಣ ರಂತಾಗಬೇಕೆಂದಲ್ಲ.—ಅದು ಸಾಧ್ಯವೂ ಅಲ್ಲ. ಈ ಸಂದರ್ಭ ದಲ್ಲಿ ಅವರು, "ಎಲಾ ನಾನು ಹದಿನಾರಾಣೆಯ ಪಾಲುಮಾಡಿದರೆ ನೀವು ಒಂದು ಪಾಲನ್ನಾದರೂ ಮಾಡಿರೊ!" ಎಂದು ಹೇಳುತ್ತಿದ್ದರು. ಅದರಂತೆ ಅವರನ್ನು ಮೇಲ್ಪಂಕ್ತಿಯಾಗಿಟ್ಟುಕೊಂಡು ಎಷ್ಟು ಸಾಧನೆ ಮಾಡುತ್ತ ಒಂದರೆ ಅಷ್ಟು ಶ್ರೇಯಸ್ಕರ ವೆಂಬುದರಲ್ಲಿ ಸಂದೇಹವಿಲ್ಲ.

ಕಾಮಿನೀಕಾಂಚನಗಳನ್ನು ತ್ಯಾಗಮಾಡುವ ವಿಚಾರ ಬಂ ದಾಗ "ಹಾಗಾದರೆ ಶ್ರೀ ರಾಮಕೃಷ್ಣಪರಮಹಂಸರವರು ಮದುವೆ ಯನ್ನೇಕೆ ಮಾಡಿಕೊಂಡರು?" ಎಂದು ಕೇಳಬಹುದು. ಪರಮ ಹಂಸರ ಇತರ ಕಾರ್ಯಗಳಂತೆ ಅವರ ವಿವಾಹವೂ ಲೋಕಕಲ್ಯಾ ಣಾರ್ಥವಾಗಿಯೇ ಕೈಕೊಂಡದ್ದೆಂದು ತೋರುತ್ತದೆ. ಈಗಿನ ಕಾಲ ದಲ್ಲಿ ನಮ್ಮಗಳಿಗೆ ವಿವಾಹವಿಚಾರದಲ್ಲಿರತಕ್ಕ ಒಂದು ವಿಧವಾದ

ಪಶುಭಾವವನ್ನು ಹೋಗಲಾಡಿಸಿ ಉಚ್ಚಾದರ್ಶವನ್ನು ತೋರಿಸುವುದೇ ಅವರ ಉದ್ದೇಶವೆಂದು ಹೇಳಬಹುದು.—ಅವರು ಆಗ್ಗಾಗ್ಗೆ "ಈ ದೇಹವು ಮಾಡುವುದೆಲ್ಲ ನಿಮಗೋಸ್ಕರ; ಎಲೋ ನಾನು ಹದಿನಾರಾಣೆಯ ಪಾಲನ್ನು ಮಾಡಿದರೆ ನೀವು ಒಂದಾಣೆಯ ಪಾಲನ್ನಾದರೂ ಮಾಡುತ್ತೀರಿ." ಎಂದು ಹೇಳುತ್ತಿದ್ದರು.* ಇಷ್ಟು ಹೊರತು ನಮ್ಮ ಕೀಳುಬುದ್ಧಿಯಿಂದ ಅವರ ಮಾಹಾತ್ಮ್ಯೆಯನ್ನು ಅಳೆದು ಎಂದಿಗೂ ಅವರಲ್ಲಿ ಇಲ್ಲದ್ದನ್ನು ಆರೋಪಿಸಬಾರದು. ಏಕೆಂದರೆ ಸ್ತ್ರೀಸಾಮಾನ್ಯದಲ್ಲಿಯೂ (ಜಗನ್ಮಾತೆಯೆಂದು ಬುದ್ಧಿಯನ್ನಿಟ್ಟುಕೊಂಡಿದ್ದ ಪರಮಹಂಸರಿಗೆ, ನಿರ್ವಿಕಲ್ಪ ಸಮಾಧಿಯನ್ನು ಪಡೆದು ದೇಹಬುದ್ಧಿಯನ್ನೂ ಇಂದ್ರಿಯಸುಖವನ್ನೂ ಪೂರ್ತಿಯಾಗಿ ಮರೆತುಬಿಟ್ಟವರಿಗೆ. ಸ್ತ್ರೀಯಲ್ಲಿ ಅನ್ಯಥಾ ಬುದ್ಧಿ ಹೇಗೆ ಹುಟ್ಟಬೇಕು?) ಕೆಲವರು "ನಾವು ಆ ಕಾಲದಲ್ಲಿದ್ದಿದ್ದರೆ ಪರಮಹಂಸರ ಸ್ಥೈರ್ಯವನ್ನು ಪರೀಕ್ಷೆಮಾಡಿ ಬಿಡುತ್ತಿದ್ದೆವು. ಅಸಿಧಾರಾವ್ರತವು ಯಾರಿಂದ ಸಾಧ್ಯ?" ಎಂದು ಹೇಳಬಹುದು. ಆಗಿನಕಾಲದಲ್ಲಿ ಪರಮಹಂಸರ ಶಿಷ್ಯಮಂಡಲಿಯಲ್ಲಿಯೇ ಇಂಥ ಸಂದೇಹ ಶೀಲರಾದ ಜನರಿಗೆ ಏನೂ ಅಭಾವವಿರಲಿಲ್ಲ. ನಮಗೆ ಒಂದು ಕಾಸಿನಷ್ಟು ಸಂದೇಹವಾದರೆ ಅವರಿಗೆ ಒಂದು ಬೆಟ್ಟದಷ್ಟು ಸಂದೇಹವಿರುತ್ತಿತ್ತು. ಅದಕ್ಕೋಸ್ಕರ ಅವರ ಶಿಷ್ಯರಲ್ಲೊಬ್ಬರು ರಾತ್ರೆ ಪರಮಹಂಸರು ತಮ್ಮ ಪತ್ನಿಯೊಡನೆ ಮಲಗಿರುವ ಮನೆಗೆ ಹೋಗಿ ಬಗ್ಗಿಕೂಡನೋಡಿದರಂತೆ. ಭಕ್ತರ ಹೃದಯದಲ್ಲಿ ನಡೆಯುವ ವ್ಯಾಪಾರಗಳನ್ನೆಲ್ಲಾ ಚೆನ್ನಾಗಿ ತಿಳಿದ ಗುರುಮಹಾರಾಜರು ಆಗ್ಗಾಗ್ಗೆ "ಯಾವುದನ್ನೂ ಚೆನ್ನಾಗಿ ಪರೀಕ್ಷೆ ಮಾಡಬೇಕಪ್ಪ! ನಿಮ್ಮ ಗುರುಗಳನ್ನೂ ಚೆನ್ನಾಗಿ ಪರೀಕ್ಷೆ ಮಾಡಬೇಕು; ಹಾಗೆ ಮಾಡಿದರೆ ತಾನೆ ಆಮೇಲೆ ದೃಢವಾದ ನಂಬುಗೆ ಯುಂಟಾಗುವುದು." ಎಂದು ಹೇಳುತ್ತಿದ್ದರು. ಇದು

---

* ಈ ವಿಷಯವನ್ನು ಶಾರದಾನಂದಸ್ವಾಮಿಗಳು ತಮ್ಮ ಗ್ರಂಥದಲ್ಲಿ ವಿಸ್ತಾರವಾಗಿ ವಿಚಾರಮಾಡಿದ್ದಾರೆ.

ಪರಮಹಂಸರಲ್ಲಿದ್ದ ಅನನ್ಯ ಸಾಮಾನ್ಯವಾದಗುಣ. ಪೂರ್ವ ದಿಂದಲೂ ದೇವರನ್ನೂ ಸತ್ಯವನ್ನೂ ಪರೀಕ್ಷೆ ಮಾಡಬಾರದೆಂದು ಹೇಳುತ್ತಿರುವುದು ಸರಿಯಷ್ಟೆ. ಆದರೆ ಅವರುಮಾತ್ರ ನಮ್ಮ ಸಂದೇಹ ನಿವೃತ್ತಿಯಾಗುವುದಕ್ಕೆ ಎಷ್ಟು ಬೇಕೋ ಅಷ್ಟನ್ನೂ ಮಾಡುತ್ತಿದ್ದರು. ಬಂಗಾಳಿಯಲ್ಲಿ ಶ್ರೀ ಶ್ರೀ ಪರಮಹಂಸರವರ ಜೀವನ ಚರಿತ್ರೆಯನ್ನು ಬರೆದ ಶಾರದಾನಂದ ಸ್ವಾಮಿಗಳವರು ಶಿಷ್ಯರಲ್ಲ ನೇಕರು ಎಷ್ಟೆಷ್ಟೋ ಬುದ್ಧಿವಂತಿಕೆಯಿಂದ ಪರೀಕ್ಷೆ ಮಾಡುತ್ತಿದ್ದ ರೆಂದೂ ಆದರೆ ಎಲ್ಲಾ ವೇಳೆಯಲ್ಲಿಯೂ ಗುರುಮಹಾರಾಜರೇ ಜಯಶೀಲರಾಗುತ್ತಿದ್ದರೆಂದೂ ಬರೆದಿದ್ದಾರೆ. ವಿವೇಕಾನಂದ ಸ್ವಾಮಿ ಗಳು ಪರಮಹಂಸರು ಕಾಣದಂತೆ ಅವರ ಹಾಸಿಗೆಯಕೆಳಗೆ ಒಂದು ರೂಪಾಯಿ ಹಾಕಿ ಅವರನ್ನು ಪರೀಕ್ಷೆ ಮಾಡಿದ ವಿಚಾರವು ಎಲ್ಲ ರಿಗೂ ಗೊತ್ತೇ ಇರಬಹುದು. ಅಲ್ಲದೆ ಅವರು ಆಗ್ಗಾಗ್ಗೆ "ಯಾರು ರಾಮನಾಗಿದ್ದನೋ ಯಾರು ಕೃಷ್ಣನಾಗಿದ್ದನೋ ಅವನೇ ಈಗ ಇಲ್ಲಿ ರಾಮಕೃಷ್ಣನಾಗಿದ್ದಾನೆ" ಎಂದು ಹೇಳುತ್ತಿದ್ದರು. ವಿವೇಕಾ ನಂದರಿಗೆ ಇದರಲ್ಲಿ ನಂಬುಗೆ ಹುಟ್ಟಿಯೇ ಇರಲಿಲ್ಲ. ಕೊನೆಗೆ ಪರಮಹಂಸರು ಗಂಟಲೆಲ್ಲ ಹುಣ್ಣಾಗಿ ಮಾತನಾಡಲಾರದೆ ದೇಹ ತ್ಯಾಗಮಾಡಲು ಇನ್ನೆರಡುಗಳಿಗೆ ಇದೆ ಎನ್ನುವಾಗ ವಿವೇಕಾನಂದರು "ಗುರುಮಹಾರಾಜರು ನಿಜವಾಗಿ ಅವತಾರಪುರುಷರಾಗಿದ್ದರೆ ಈಗ ಇನ್ನೊಂದುಸಾರಿ ಆ ಮಾತು ಹೇಳಲಿ." ಎಂದಂದುಕೊಂಡರಂತೆ. ಆ ಯೋಚನೆ ಹೊಳೆಯಿತೋ ಇಲ್ಲವೋ ಆ ಕೂಡಲೆ, "ಏನಪ್ಪಾ! ಇನ್ನೂ ನಂಬಿಕೆ ಬೇಡವೆ? ಯಾರು ರಾಮನಾಗಿದ್ದನೋ, ಯಾರು ಕೃಷ್ಣನಾಗಿದ್ದನೋ ಅವನೇ ಈಗ ಇಲ್ಲಿ ರಾಮಕೃಷ್ಣನಾಗಿದ್ದಾನೆ." ಎಂದು ಹೇಳಿದರಂತೆ.

ಬುದ್ಧ, ಶಂಕರಾಚಾರ್ಯ, ರಾಮಾನುಜಾಚಾರ್ಯ, ಕ್ರಿಸ್ತ ಮುಂತಾದ ಅವತಾರ ಪುರುಷರ ಚರಿತ್ರೆಯನ್ನು ವಿಚಾರಮಾಡಿ ನೋಡಿದರೆ ಅವರು ತಮ್ಮ ತಮ್ಮ ಕಾಲಗಳಲ್ಲಿ ಧರ್ಮಗ್ಲಾನಿಯುಂ

ಟಾಗುವುದಕ್ಕೆ ಮೂಲಕಾರಣವನ್ನು ತಿಳಿದು ಮುಖ್ಯವಾಗಿ ಅವನ್ನು ಬೇರುಸಹಿತ ಕಿತ್ತುಹಾಕಿ ಧರ್ಮವನ್ನು ಪುನಃ ಉದ್ಧಾರಮಾಡು ವುದಕ್ಕೆ ಪ್ರಯತ್ನಪಟ್ಟು ಅದರಲ್ಲಿ ಕೃತಕೃತ್ಯರಾದ ಬಳಿಕ ದೇಹವನ್ನು ತ್ಯಜಿಸಿದಂತೆ ತೋರುತ್ತದೆ. ಪಾಶ್ಚಿಮಾತ್ಯನಾಗರಿಕತೆಯೆಂಬ ಪ್ರವಾಹಕ್ಕೆ ಸಿಕ್ಕಿ, ಇಂದ್ರಿಯಾತೀತವಾದ ಆಧ್ಯಾತ್ಮಿಕ ವಿಚಾರಗಳಲ್ಲಿ ನಂಬುಗೆಯಿಲ್ಲದೆ, ಸಂದೇಹದಲ್ಲಿಯೂ ನಾಸ್ತಿಕವಾದದಲ್ಲಿಯೂ ದೇಶವೇ ತೇಲಿಹೋಗುತ್ತಿರುವಾಗ ಶ್ರೀ ಶ್ರೀರಾಮಕೃಷ್ಣಪರಮ ಹಂಸರು ಅವತಾರ ಮಾಡಿದ್ದನ್ನು ನೋಡಿದರೆ ವಿಜ್ಞಾನಶಾಸ್ತ್ರದ ಪ್ರಾಬಲ್ಯ ಮುಂತಾದ ಕಾರಣಗಳಿಂದುಂಟಾದ ಸಂಶಯವೇ ನಮ್ಮ ಕಾಲದ ಧರ್ಮಗ್ಲಾನಿಗೆ ಮುಖ್ಯಕಾರಣವೆಂದೂ ಅದರ ಮೂಲೋ ತ್ಪಾಟನೆಯ ಮೂಲಕ ಧರ್ಮವನ್ನು ಜೀರ್ಣೋದ್ಧಾರ ಮಾಡು ವುದೇ ಅವರು ಅವತಾರ ಮಾಡಿದ್ದರ ಮುಖ್ಯ ಉದ್ದೇಶವೆಂದೂ ಹೇಳಬೇಕಾಗುತ್ತದೆ. ಅದಕ್ಕೆ ತಕ್ಕಂತೆ ಅವರು ನಾನಾ ಮಾರ್ಗ ಗಳಿಂದ ದೇವರು ಪರಲೋಕ ಮುಂತಾದುವುಗಳಲ್ಲಿ ಸಂದೇಹವನ್ನು ದೂರಮಾಡಿ ನಂಬುಗೆಯನ್ನು ಹುಟ್ಟಿಸಿ ಭಕ್ತರನ್ನು ದಾರಿಹತ್ತಿಸು ತ್ತಿದ್ದರು. ಸಂಶಯ ದೂರವಾಗದೇ ಶ್ರದ್ಧೆಹುಟ್ಟದೇ ಯಾವುದೂ ಆಗದು. ಯೋಗಶಾಸ್ತ್ರಕಾರರೂ ಸಂಶಯವು ದೊಡ್ಡ ಅಡಚಣೆ ಯೆಂದು ಹೇಳಿದ್ದಾರೆ. "ಸಂಶಯಾತ್ಮಾ ವಿನಶ್ಯತಿ" ಎಂಬುದು ಎಲ್ಲರೂ ಕೇಳಿದ ವಿಷಯವೇ ಆಗಿದೆ. ಅದರಂತೆ "ಶ್ರದ್ಧಾವಾ ಲಭತೆಜ್ಞಾನಂ" ಎಂಬುದನ್ನು ಓದಿದ್ದೇವೆ. ಈ ಶ್ರದ್ಧೆಯಿದ್ದು ದೇವ ರನ್ನು ಕಾಣಬೇಕೆಂದು ನಿಜವಾದ ವ್ಯಾಕುಲತೆ ಇದ್ದರೆ ಮತ್ತಾವ ಸಲಕರಣಗಳೂ ಬೇಕಾಗಿಲ್ಲ. ಅದನ್ನು ಪರಮಹಂಸರು ತಮ್ಮ ಉದಾಹರಣೆಯಿಂದಲೇ ತೋರ್ಪಡಿಸಿದ್ದಾರೆ. ಅವರು ಯಾವ ವೇದಾಂತ ಜ್ಞಾನವೂ ಯೋಗಾಭ್ಯಾಸವೂ ಇಲ್ಲದೆಯೇ, ತಮ್ಮ ಶ್ರದ್ಧಾ ಭಕ್ತಿಗಳಿಂದಲೇ ಮೊದಲು ದೇವರನ್ನು ಒಲಿಸಿಕೊಳ್ಳಲಿಲ್ಲವೇ?

ಹೀಗೆಂದು ಹೇಳಿದ ಕೂಡಲೆ ಅನೇಕರು "ನಮಗೆ ದೇವರನ್ನು

ನೋಡಬೇಕೆಂಬ ಕುತೂಹಲವಿಲ್ಲವೇ? ದೇವರೇಕೆ ನಮಗೆ ಪ್ರತ್ಯಕ್ಷವಾಗುವುದಿಲ್ಲ?" ಎಂದು ಕೇಳಬಹುದು. ಇಂಥವರಿಗೆ ರಾಮಕೃಷ್ಣಪರಮಹಂಸರು "ಇಂಥ ಬೀಳುಭಕ್ತಿಯಿಂದ ಆಗುವುದೇನು? ಏನಾದರೂ ಆಗಲಿ ದೇವರನ್ನು ನೋಡಿಯೇ ಬಿಡುತ್ತೇನೆ, ಇಂದೇ ನೋಡಿಯೇ ಬಿಡಬೇಕು. ಎಂದು ಹೇಳುವಂಥವರಾಗಬೇಕು.* ಅಷ್ಟು ಉತ್ಸಾಹವೂ ಶ್ರದ್ಧೆಯೂ ಇರಬೇಕು" ಎಂದು ಹೇಳಿ ತಾವು ಪಟ್ಟ ಶ್ರಮಗಳನ್ನೆಲ್ಲಾ ವಿವರಿಸುತ್ತಿದ್ದರು. ಕೆಲವರು "ಇದರಿಂದೆಲ್ಲಾ ಏನಾದೀತು? ದೇವರೇ, ದೇವರೇ ಎಂದು ಕೂಗುತ್ತಾ ಕುಳಿತಿದ್ದರೆ ಬಂದದ್ದೇನು? ಎಷ್ಟೆಷ್ಟೋ ಯೋಗಾಭ್ಯಾಸಮಾಡಿ, ನಾಲ್ಕೈದು ಮೊಳ ನೆಲದಿಂದ ಮೇಲಕ್ಕೆದ್ದು, ಎಂಥೆಂಥ ಅದ್ಭುತ ಕಾರ್ಯಗಳನ್ನು ಮಾಡಲು ಶಕ್ತಿಯಿದ್ದವರ ಪಾಡೇ ಏನೇನೋ ಆಗಿಹೋಯಿತು." ಎಂದು ಆಕ್ಷೇಪಿಸಬಹುದು. ಏಕೆಂದರೆ ಈಗಿನ ಕಾಲದಲ್ಲಿ ಯಾರು ಹಠಯೋಗವನ್ನೂ, ಪ್ರಾಣಾಯಾಮಾದಿಗಳನ್ನೂ ಅಭ್ಯಾಸಮಾಡಿ ಸಿದ್ಧಿಗಳನ್ನು ಪಡೆಯುತ್ತಾರೋ ಅವರೇ ದೇವರನ್ನು ಪ್ರತ್ಯಕ್ಷಮಾಡಿಕೊಳ್ಳತಕ್ಕವರೆಂದೂ ಆ ಮಾರ್ಗವನ್ನು ಬಿಟ್ಟರೆ ಬೇರೆ ಮಾರ್ಗವೇ ಇಲ್ಲವೆಂದೂ ಅನೇಕರು ತಿಳಿದುಕೊಂಡಿದ್ದಾರೆ. ಶ್ರೀ ಶ್ರೀ ಪರಮಹಂಸರವರು "ಈಗಿನ ಕಾಲದಲ್ಲಿ ಹಠಯೋಗ ಮುಂತಾದುವುಗಳನ್ನು ಅಭ್ಯಾಸಮಾಡುವುದಕ್ಕೆ ಅವಕಾಶವೆಲ್ಲಿದೆಯೋ? ಭಗವಂತನು ಈಗಿನ ಕಾಲಕ್ಕೆ ಸುಲಭವಾಗಿರುವಂತೆ ಭಕ್ತಿಮಾರ್ಗವನ್ನು ವಿಧಿಸಿದ್ದಾನೆ" † ಎಂದು ಹೇಳುತ್ತಿದ್ದರು. ಅಣಿಮಾದ್ಯಷ್ಟಸಿದ್ಧಿಗಳನ್ನೂ ಅದ್ಭುತ ಶಕ್ತಿಯನ್ನೂ ಪಡೆಯುವ ವಿಚಾರದಲ್ಲಿ ಅವರ ಉಪದೇಶವು

---

* ತೀವ್ರಸಂವೇಗಾನಾಮಾಸನ್ನಃ. ಯೋ. ಸೂ.

† ಯೋಗಿನಾಮಪಿ ಸರ್ವೇಷಾಂ ಮದ್ಗತೇನಾಂತರಾತ್ಮನಾ । ಶ್ರದ್ಧಾವಾನ್ ಭಜತೆಯೋಮಾಂ ಸಮೇಯುಕ್ತತಮೋಮತಃ ॥ ಗೀತಾ ೬—೪೭. ಮಯ್ಯಾವೇಶ್ಯಮನೋಯೇಮಾಂ. ನಿತ್ಯಯುಕ್ತಾ ಉಪಾಸತೆ । ಶ್ರದ್ಧಯಾಪರಯೋಪೇತಾ ಸ್ತೇಮೇಯುಕ್ತತಮಾಮತಾಃ ॥ ಗೀತಾ.೧೨—೨.

ಮುಂದಟ್ಟು ಮಾಡಿಕೊಳ್ಳತಕ್ಕದ್ದು. ಇವುಗಳಿಂದ ಅಹಂಕಾರ ವೃದ್ಧಿಯಾಗಿ, ದೇಹಬುದ್ಧಿ ಬಲವಾಗಿ, ಮನಸ್ಸು ಹೆಚ್ಚು ಆಸೆಗೊಳಗಾಗಿ, ಸ್ವಾರ್ಥಹೆಚ್ಚಿ, ಕಾಮಿನೀಕಾಂಚನಗಳಲ್ಲಿ ಆಸಕ್ತಿಹುಟ್ಟುವುದು. ಪರಲೋಕಸಾಧನೆಗೆ ಅಡಚಣೆಯಾಗುವದಷ್ಟೇ ಅಲ್ಲ. ಆದರಿಂದ ಕೇವಲ ಅವನತಿಯೇ ಉಂಟಾಗುವುದು. ಕ್ರಮೇಣ ಅವನಲ್ಲಿದ್ದ ಶಕ್ತಿಯೂ ವೆಚ್ಚವಾಗಿಹೋಗಿ "ಇತೋಭ್ರಷ್ಟಸ್ತತೋ ಭ್ರಷ್ಟಃ" ಎಂಬಂತಾಗುವುದು.* ಆದ್ದರಿಂದ ಈ ಸಿದ್ಧಿಗಳಿಗೆ ಗಮನಕೊಡದಂತೆಯೂ ಶ್ರದ್ಧೆ ಭಕ್ತಿ ಪವಿತ್ರತೆ ವೈರಾಗ್ಯ ಚಿತ್ತಸಂಯಮ ಇವುಗಳನ್ನು ಪಡೆದುಕೊಳ್ಳುವಂತೆಯೂ ಎಲ್ಲರಿಗೂ ಹೇಳುತ್ತಿದ್ದರು. ಅವರ ಹತ್ತಿರಕ್ಕೆ ಇಂಥ ಶಕ್ತಿಯುಳ್ಳವರಾರಾದರೂ ಬಂದರೆ ಅವರ ಕ್ಷೇಮಲಾಭಕ್ಕಾಗಿ ಆಶಕ್ತಿಯನ್ನು ಕಿತ್ತುಕೊಂಡು ಬಿಡುತ್ತಿದ್ದರು. ಅಲ್ಲದೆ ನೀರಿನಮೇಲೆ ನಡೆಯುವುದು, ಬೆಂಕಿಯಮೇಲೆ ನಡೆಯುವುದು, ಒಂದು ಪ್ರಾಣಿಯನ್ನು ಸಾಯಿಸುವುದು, ಬದುಕಿಸುವುದು ಮುಂತಾದ ಡೊಂಬರಾಟವನ್ನು ಆಡಬಹುದಾದ ಶಕ್ತಿಯಿಂದ ಬಂದಫಲವೇನು? ನೋಡತಕ್ಕವರಿಗೆ ಆಶ್ಚರ್ಯವೂ ಮೋಸವೂ ಹೊರತು ಮಾಡತಕ್ಕವನಿಗೆ ಏನೂಲಾಭವಿಲ್ಲ. ಯೋಗಶಕ್ತಿಯನ್ನು ಇವರಲ್ಲೆಲ್ಲಾ ವೆಚ್ಚಮಾಡತಕ್ಕವನು ಮೇರುಪರ್ವತವನ್ನೇ ಹೊತ್ತು ತರುವುದಕ್ಕೆ ಹೋಗಿ ಒಂದು ಕಬ್ಬಿಣದ ಮೊಳೆಯನ್ನು ಹಿಡಿದು ತಂದಂತಾಗುವುದು.

ವಿಚಾರಶೀಲವಾದ ಈಗಿನಕಾಲದಲ್ಲಿ ಶ್ರದ್ಧಾಭಕ್ತಿಗಳು ಬೇಕೆಂದು ಹೇಳಿದೊಡನೆಯೇ ಅನೇಕರು ಇದಕ್ಕೆ ಒಡಂಬಡುವುದಿಲ್ಲ. "ಇದೆಲ್ಲಾ (Blind belief) ಕುರುಡುನಂಬಿಕೆ, ಮೂಢಭಕ್ತಿ; ಯಾರುಯಾರು ಏನುಏನು ಹೇಳಿದರೆ ಅದನ್ನು ಶುದ್ಧಗಗ್ಗರಹಾಗೆ ನಂಬುವುದಕ್ಕಾದೀತೆ?" ಎನ್ನುವರು. ಅದನ್ನು ಸ್ವಲ್ಪ ವಿಚಾರ ಮಾಡಬೇಕು. ಮೊದಲು ಗಗ್ಗರಹಾಗೆ ನಂಬಬೇಕೆಂದು ಹೇಳಿದವ

* ತೇಸಮಾಧಾವುಪಸರ್ಗಾವ್ಯುತ್ಥಾನೇ ಸಿದ್ಧಯಃ—ಯೋ. ಸೂ.

ರಾರು? ವಿಚಾರಮಾಡಿಯೇ ನಂಬಬಹುದು. ಸ್ವಲ್ಪವಿಚಾರ ಬುದ್ಧಿಯೂ ಬೇಕು. ಅದಕ್ಕಾಗಿಯೇ ವಿವೇಕಾನಂದಸ್ವಾಮಿಗಳು ಜ್ಞಾನಮಿಶ್ರವಾದ ಭಕ್ತಿಯೇ ಉತ್ತಮವೆಂದು ಬೋಧಿಸುತ್ತಿದ್ದರು. ರಾಮಕೃಷ್ಣಪರಮಹಂಸರೂ ಒಂದುದಿನ ತಮ್ಮ ಶಿಷ್ಯರಲ್ಲೊಬ್ಬರು ಅಜಾಗರೂಕತೆಯಿಂದ ಏನೋ ಒಂದು ತಪ್ಪುಮಾಡಿದ್ದನ್ನು ಕಂಡು "ಭಕ್ತನಾಗಿರು ಎಂದರೆ ಗಗ್ಗನೇಕೆ ಆದೆಯೊ?" ಎಂದು, ತಾವು ಹೇಗೆ ಮೂರುಹೊತ್ತೂ ದೇವರಮೇಲೆ ಮನಸ್ಸಿದ್ದರೂ ಸರ್ವಕಾರ್ಯ ಗಳಲ್ಲಿಯೂ ಜಾಗರೂಕರಾಗಿರುತ್ತಿದ್ದರೆಂದು ಬೋಧಿಸಿದರಂತೆ. ಈ ಸಂದರ್ಭದಲ್ಲಿಯೇ "ಯಾವಾಗಲೂ ವಿಚಾರಮಾಡುತ್ತಿರಬೇಕು. ಯಾವುದು ಸತ್ಪದಾರ್ಥ, ಯಾವುದು ಅಸತ್ಪದಾರ್ಥ, ಯಾವುದು ನಿತ್ಯ, ಯಾವುದು ಅನಿತ್ಯ ಎಂದು ವಿಚಾರಮಾಡುತ್ತಾ, ಅನಿತ್ಯ ವಾದುವುಗಳನ್ನು ತ್ಯಜಿಸುತ್ತ, ನಿತ್ಯವಾದುವುಗಳಮೇಲೆ ಮನಸ್ಸಿ ಡುತ್ತಾ ಬರಬೇಕು" ಎಂದು ಹೇಳುತ್ತಿದ್ದರು. ಆದ್ದರಿಂದ ವಿಚಾರ ಬುದ್ಧಿಯೇನೋ ಆವಶ್ಯಕ. ಆದರೆ ಆಧ್ಯಾತ್ಮಿಕ ವಿಚಾರಗಳಲ್ಲಿ ಮಾತ್ರ ವಿಚಾರಮಾಡುತ್ತ ಹೋದರೆ ಕೊನೆಮೊದಲಿಲ್ಲದೇ ಹೋಗು ತ್ತದೆ. ಅನೇಕ ಸಂಶಯಗಳು ಹುಟ್ಟಿ ಅವು ಪರಿಹಾರವಾಗುವುದೇ ಇಲ್ಲ. "ಮದುವೆಯಾದಹೊರತು ಹುಚ್ಚುಬಿಡದು ಹುಚ್ಚುಬಿಟ್ಟ ಹೊರತು ಮದುವೆಯಾಗದು" ಎಂಬುದೊಂದು ಗಾದೆಯುಂಟು. ಹಾಗೆ ಈ ಸಂಶಯ ನಿವಾರಣೆಯಾದ ಹೊರತು ನಮಗೆ ಶ್ರದ್ಧಾ ಭಕ್ತಿಗಳು ಹುಟ್ಟುವಹಾಗಿಲ್ಲ. ಶ್ರದ್ಧಾಭಕ್ತಿಗಳು ಹುಟ್ಟಿದಹೊರತು ಜ್ಞಾನ ಸಂಪಾದನೆಯಾಗುವಹಾಗಿಲ್ಲ. ಜ್ಞಾನವುಂಟಾಗಿ ಇಂದ್ರಿಯಾ ತೀತವಾದ ಪರಬ್ರಹ್ಮವಸ್ತುವಿನ ಅನುಭವವಾದ ಹೊರತು ಸಂಶಯ ಗಳು ದೂರವಾಗುವುದಿಲ್ಲ.* ಇದರ ಮೇಲೆ "ಕುರುಡುನಂಬಿಕೆ"

---

* ಜ್ಞಾನಸಂಛಿನ್ನಸಂಶಯಂ—ಗೀತಾ.

ಭಿದ್ಯತೆಹೃದಯಗ್ರಂಥಿಶ್ಛಿದ್ಯಂತೆ ಸರ್ವಸಂಶಯಾಃ । . . . .
ತಸ್ಮಿನ್‌ದೃಷ್ಟೆಪರಾವರೆ.—ಮುಂಡಕೋಪನಿಷತ್ತು.

"ಕುರುಡುಭಕ್ತಿ" ಎಂದರೇನು? ಕಣ್ಣಿರುವನಂಬಿಕೆ ಯಾವುದು? ಇಲ್ಲದ್ದುಯಾವುದು? ನಂಬಿಕೆಯೆಲ್ಲಾ ಕುರುಡೆ! ನಂಬಿದರೆ ನಂಬಿಕೆಯಾಯ್ತು, ಇಲ್ಲದಿದ್ದರೆ ಜ್ಞಾನ ಅಥವಾ ಅನುಭವವಾಯ್ತು. ವಿಜ್ಞಾನಶಾಸ್ತ್ರಕಾರರು ತಮ್ಮ ಗ್ರಂಥಗಳಲ್ಲಿ ಹೇಳಿರುವ ವಿಷಯಗಳೆಲ್ಲವನ್ನೂ ನಮ್ಮ ಅನುಭವಕ್ಕೆ ತಂದುಕೊಂಡೇ ನಂಬುತ್ತೇವೇನು? ಅವರು ಹೇಳುವುದೆಲ್ಲವನ್ನೂ ಮೂಢರಂತೆ, ಕುರುಡರಂತೆಯೇ ನಂಬುವುದಿಲ್ಲವೋ? 'ತಕ್ಕ ಯಂತ್ರಗಳೂ ಸಾಧನ ಸಾಮಗ್ರಿಗಳೂ ಅನುಭವವೂ ಇದ್ದರೆ, ನಾವೇ ಅವೆಲ್ಲವನ್ನೂ ಅನುಭವಕ್ಕೆ ತಂದುಕೊಳ್ಳಬಹುದು. ಇಲ್ಲವೇ, ಅವರ ಅಥವಾ ಅಂಥವರ ಹತ್ತಿರಕ್ಕೆ ಹೋದರೆ ಅವುಗಳನ್ನು ಪ್ರತ್ಯಕ್ಷವಾಗಿ ತೋರಿಸುವರು." ಎಂದು ಅದಕ್ಕೆ ಉತ್ತರಕೊಡಬಹುದು. ಹಾಗಾದರೆ ದೇವರವಿಚಾರದಲ್ಲಿ ಬೇಕಾದ ಶ್ರದ್ಧಾಭಕ್ತಿಗಳಿಗೂ ಅದೇ ಉತ್ತರವನ್ನೇ ಹೇಳಿಬಿಟ್ಟರೆ ಸಾಕಾಗಿದೆ.

ಶ್ರೀ ಶ್ರೀ ರಾಮಕೃಷ್ಣಪರಮಹಂಸರವರ ಉಪದೇಶವೆಲ್ಲವನ್ನೂ ಇಲ್ಲಿ ಹೇಳುವುದು ಸಾಧ್ಯವಲ್ಲ. ಆದರೆ ಅವರ ಉಪದೇಶದಲ್ಲಿರತಕ್ಕ ಒಂದು ಅನನ್ಯ ಸಾಮಾನ್ಯವಾದ ವಿಶೇಷವು ಮಾತ್ರ ಅವಶ್ಯಕವಾಗಿ ತಿಳಿಯತಕ್ಕದ್ದಾಗಿದೆ. ಬಹಳ ಕಾಲದಿಂದಲೂ ದೇವರೊಬ್ಬನೇಯೆಂದು ಹೇಳುತ್ತಿದ್ದರೂ "ಏಕಂಸದ್ವಿಪ್ರಾಬಹುಧಾವದಂತಿ" ಎಂದು ಹೇಳುತ್ತಿದ್ದರೂ, "ಸರ್ವದೇವನಮಸ್ಕಾರಃ ಕೇಶವಂಪ್ರತಿ ಗಚ್ಛತಿ" ಎಂದು ಹೇಳುತ್ತಿದ್ದರೂ, ಇದುವರೆಗೆ ಹುಟ್ಟಿದ ಆಚಾರ್ಯ ಪುರುಷರು ಯಾರೂ ಎಲ್ಲಾ ಧರ್ಮಗಳ ಅಥವಾ ಮತಗಳ ಉದ್ದೇಶ್ಯವೂ ಒಂದೇ ಎಂಬುದನ್ನು ತಾವು ಕಾರ್ಯತಃ ಅನುಭವಕ್ಕೆ ತಂದುಕೊಂಡು ಪ್ರಪಂಚಕ್ಕೆ ಅದನ್ನು ಇಷ್ಟು ಘಂಟಾಘೋಷವಾಗಿ ಬೋಧಿಸಿರಲಿಲ್ಲ. ಈ ಸರ್ವಧರ್ಮಸಮನ್ವಯವೇ ಅವರಲ್ಲಿ ವಿಶೇಷ. ಜ್ಞಾನ, ಭಕ್ತಿ, ಯೋಗ, ಕರ್ಮ, ಹಿಂದಿನ ಮತ್ತು ಈಚಿನ ಸಮಸ್ತ ಧರ್ಮಗಳು ಇವೆಲ್ಲವುಗಳ ಒಂದು ಅದೃಷ್ಟಪೂರ್ವವಾದ ಸಾಮಂಜ

ಸ್ಯವೇ ಇವರಲ್ಲಿ ವಿಶೇಷ. ಅವರು ಕಾಮಿನೀಕಾಂಚನಗಳನ್ನು ತ್ಯಾಗಮಾಡಬೇಕೆಂದು ಎಷ್ಟು ಸಾರಿಸಾರಿ ಹೇಳುತ್ತಿದ್ದರೋ ಹಾಗೆಯೇ ಸಾರಿಸಾರಿ "ಎಲ್ಲಾ ಧರ್ಮವೂ ಸತ್ಯ; ಎಷ್ಟು ಮತವೋ ಅಷ್ಟು ಪಥ; ನಮ್ಮ ದೇವರು ಹೆಚ್ಚು ನಿಮ್ಮ ದೇವರು ಕಡಿಮೆ ಎಂದು ಕೀಳುಬುದ್ಧಿಯಿಂದ ಜಗಳವಾಡಬಾರದು* ಯಾರು ಯಾವ ಮಾರ್ಗವನ್ನು ಅನುಸರಿಸಿದ್ದರೆ ಆ ಮಾರ್ಗವನ್ನೇ ಅನುಸರಿಸಲಿ, ಅವರ ಮಾರ್ಗವನ್ನು ಕೆಡಿಸಬೇಡಿ. ಹಿಂದೂ ಮತದಲ್ಲಿಯೂ ದ್ವೈತಾ

---

* ಯಾರಾದರೂ ಕಾಳಿ ಹೆಚ್ಚು—ಕೃಷ್ಣ ಹೆಚ್ಚು ಎಂದು ಜಗಳವಾಡುತ್ತಿದ್ದುದನ್ನು ಕಂಡರೆ ಪರಮಹಂಸರು "ಇದೇನೋ ನಿನ್ನ ಹೀನಬುದ್ಧಿ! ನಿನ್ನ ಇಷ್ಟದೇವತೆಯೇ ಕಾಳಿ ಕೃಷ್ಣ ಎಲ್ಲ ಆಗಿದ್ದಾನೆಂದು ತಿಳಿದುಕೊಂಡಿರು. ಹಾಗೆಂದರೆ ನಿನ್ನ ಇಷ್ಟದೇವತೆಯನ್ನು ಬಿಟ್ಟು ಮತ್ತೊಂದನ್ನು ಪೂಜಿಸಬೇಕೆಂದು ಹೇಳಿದ್ದಲ್ಲ. ದ್ವೇಷಬುದ್ಧಿಯನ್ನು ಬಿಟ್ಟುಬಿಡಬೇಕೆಂದರ್ಥ. ನಿನ್ನ ಇಷ್ಟದೇವತೆಯೇ ಕೃಷ್ಣನೂ, ಗೌರಾಂಗನೂ ಆಗಿದ್ದಾನೆ—ಈ ಜ್ಞಾನವನ್ನು ಒಳಗೆ ನಿಶ್ಚಯಬುದ್ಧಿಯಿಂದ ಇಟ್ಟುಕೊಳ್ಳಬೇಕು. ನೋಡು! ಹೆಂಗಸು ಗಂಡನಮನೆಗೆ ಹೋದರೆ, ಮಾವ, ಅತ್ತೆ, ಅತ್ತಿಗೆ, ಮೈದುನ ಮುಂತಾದವರೆಲ್ಲರಲ್ಲಿಯೂ ಮರ್ಯಾದೆಯಿಂದಲೂ, ಭಕ್ತಿಯಿಂದಲೂ ಯಥಾಯೋಗ್ಯವಾಗಿ ನಡೆದುಕೊಳ್ಳುತ್ತಾಳೆ. ಆದರೆ ತನ್ನ ಮನಸ್ಸಿನಲ್ಲಿದ್ದದ್ದನ್ನೆಲ್ಲಾ ನಿಸ್ಸಂಕೋಚವಾಗಿ ಹೇಳುವುದು ಮಲಗುವುದು ಕೂರುವುದು ಇದೆಲ್ಲ ಕೇವಲ ತನ್ನ ಗಂಡನಸಂಗಡ ಮಾತ್ರ. ತನ್ನ ಗಂಡನಿಂದ ಅತ್ತೆ ಮಾವ ಮುಂತಾದವರೆಲ್ಲರೂ ತನ್ನವರಾಗಿದ್ದಾರೆಂದು ಅವಳಿಗೆ ಗೊತ್ತಿರುತ್ತದೆ. ಅದರಹಾಗೆ ನಿನ್ನ ಇಷ್ಟದೇವತೆಯನ್ನು ಗಂಡನಹಾಗೆ ಸೇವಿಸು. ನಿನ್ನ ಇಷ್ಟದೇವತೆಯೊಡನೆ ಸಂಬಂಧವಿರುವದ್ದರಿಂದಲೇ ಅದರ ಇತರ ರೂಪಗಳೊಡನೆ ಸಂಬಂಧ; ಅವುಗಳಲ್ಲೆಲ್ಲಾ ಏಕರೀತಿಯಾಗಿ ಶ್ರದ್ಧಾಭಕ್ತಿಯನ್ನು ಇಟ್ಟುಕೊಂಡಿರಬೇಕು.—ಹೀಗೆಂದು ತಿಳಿದುಕೊ. ಹೀಗೆ ತಿಳಿದುಕೊಂಡು ದ್ವೇಷಬುದ್ಧಿಯನ್ನು ದೂರಮಾಡು: ಗೌರೀಪಂಡಿತನು ಹೇಳುತ್ತಿದ್ದದ್ದೇನೆಂದರೆ "ಕಾಳೀ ಮತ್ತು ಗೌರಾಂಗ ಇಬ್ಬರೂ ಒಂದೇ ಎಂದು ತಿಳಿದು ಬಿಟ್ಟರೆ ಆಗ ನಿಜವಾದ ಜ್ಞಾನವು ಉತ್ಪನ್ನವಾಯಿತೆಂದು ಹೇಳಬಹುದು"—ಎಂದು ಹೇಳುತ್ತಿದ್ದರು.

ದ್ವೈತ ವಿಶಿಷ್ಟಾದ್ವೈತ ಮತಗಳು ಬೇರೆಬೇರೆಯಲ್ಲ. ಅವೆಲ್ಲವೂ ಒಬ್ಬೊಬ್ಬ ಸಾಧಕನ ಜೀವಮಾನದಲ್ಲಿಯೂ ಒಂದಾದಮೇಲೆ ಒಂದರಂತೆ ಬರತಕ್ಕ ಅವಸ್ಥಾಭೇಧಗಳು*" ಎಂದು ಮುಂತಾಗಿ ಹೇಳುತ್ತಿದ್ದರು. ಅವರ ಆಚರಣೆಯೂ "ಎಷ್ಟು ಮತವೋ ಅಷ್ಟು ಪಥ" ಎಂಬುದಕ್ಕೆ ತಕ್ಕಂತೆಯೇ ಇತ್ತು. ತಲೆಗೆಲ್ಲ ಒಂದೇ ಸೂತ್ರವನ್ನು ಅವರು ಎಂದಿಗೂ ವಿಧಿಸಿದವರಲ್ಲ. ಒಂದು ಜನರಿಗೂ ಮತ್ತೊಂದು ಜನರಿಗೂ ಒಬ್ಬ ಮನುಷ್ಯನಿಗೂ ಮತ್ತೊಬ್ಬಮನುಷ್ಯನಿಗೂ ಸ್ವಭಾವ ಗುಣ, ಮುಂತಾದುವುಗಳಲ್ಲಿ ವ್ಯತ್ಯಾಸವಿರುವತನಕ ಅವರ ಮಾರ್ಗವೂ ಬೇರೆಯಾಗಬೇಕು. ಆದ್ದರಿಂದ ಪರಮಹಂಸರು ಶಿಷ್ಯರ ಯೋಗ್ಯತೆಯನ್ನು ನೋಡಿ ಅವರವರಿಗೆ ತಕ್ಕ ಶಿಕ್ಷಣವನ್ನು ಕೊಡುತ್ತಿದ್ದರು ಸಮರ್ಥನಾದ ವೈದ್ಯನಂತೆ ಬೇಕಾದ ಸಾಧನಸಾಮಗ್ರಿಗಳನ್ನೂ ಅನುಭವವನ್ನೂ ಸಂಪಾದಿಸಿಟ್ಟುಕೊಂಡು ಯಾರು ಬಂದರೂ,

---

* ಈ ಸಂದರ್ಭದಲ್ಲಿ ಮಹಾಜ್ಞಾನಿಯಾದ ಹನುಮಂತನ ಕಥೆಯನ್ನು ಹೇಳುತ್ತಿದ್ದರು. ಒಂದುಸಲ ಶ್ರೀರಾಮಚಂದ್ರನು, ಹನುಮಂತನನ್ನು 'ನೀನು ನನ್ನನ್ನು ಯಾವಭಾವದಲ್ಲಿ ಕಾಣುವೆ? ನನ್ನನ್ನು ಯಾವಭಾವದಿಂದ ಕಂಡುಕೊಂಡು ಪೂಜೆಮಾಡುವೆ?' ಎಂದು ಕೇಳಿದನಂತೆ. ಆಗ ಆಂಜನೇಯನು, "ಹೇರಾಮ! ಯಾವಾಗ ನನಗೆ ಈ ದೇಹಬುದ್ಧಿ ಇರುತ್ತದೆಯೋ, ಅಂದರೆ ನಾನು ದೇಹವೆಂದು ತಿಳಿದುಕೊಂಡಿರುತ್ತೇನೆಯೋ, ಆಗ ನೀನು ಪ್ರಭು, ನಾನು ದಾಸ, ನೀನು ಸೇವ್ಯ ನಾನು ಸೇವಕ, ನೀನು ಪೂಜ್ಯ, ನಾನು ಪೂಜಕ ಎಂದು ತಿಳಿದುಕೊಂಡಿರುತ್ತೇನೆ. ಯಾವಾಗ ನಾನು ಮನಸ್ಸು ಬುದ್ಧಿಗಳಿಂದ ಕೂಡಿದ ಜೀವಾತ್ಮನೆಂಬ ಭಾವವಿರುತ್ತದೆಯೋ ಆಗ ನೀನು ಪೂರ್ಣ, ನಾನು ಅಂಶ ಎಂದು ತಿಳಿದುಕೊಂಡಿರುತ್ತೇನೆ. ಮತ್ತು ಯಾವಾಗ ನಾನು ಉಪಾಧಿರಹಿತವಾದ ಶುದ್ಧವಾದ ಆತ್ಮವೆಂದು ಸಮಾಧಿಯಲ್ಲಿ ಅನುಭವಕ್ಕೆ ತಂದುಕೊಳ್ಳುತ್ತೇನೆಯೋ ಆಗ ನೀನುಯಾರೋ ನಾನು ಅವನೇ. ನೀನೂ ನಾನೂ ಒಂದೇ, ಏನೂ ಭೇದವಿಲ್ಲ, ಎಂದು ತಿಳಿದುಕೊಳ್ಳುತ್ತೇನೆ" ಎಂದು ಉತ್ತರಕೊಟ್ಟನಂತೆ.

ಅವನು ಅದುವರೆಗೂ ಅನುಸರಿಸಿದ ಮಾರ್ಗ ಅವನ ಪ್ರಕೃತ ಸ್ಥಿತಿ, ಅವನು ಮುಂದೆ ಮಾಡಬೇಕಾದ ಕಾರ್ಯ, ಎಲ್ಲವನ್ನೂ ಗ್ರಹಿಸಿ ತಕ್ಕ ಚಿಕಿತ್ಸೆಯನ್ನು ಹೇಳುತ್ತಿದ್ದರು. ಇದರಿಂದ ಅನೇಕ ಸಂಪ್ರದಾಯದ ಸಾಧಕರು ಅವರಲ್ಲಿಗೆ ಬಂದು ಸಕಾಲದಲ್ಲಿ ಅವರ ಅಮೋಘವಾದ ಸಹಾಯವನ್ನು ಪಡೆದು ಕೃತಾರ್ಥರಾದರು. ತಮ್ಮ ಶಿಷ್ಯಮಂಡಲಿಯಲ್ಲಿಯೇ ಸ್ವಾಮಿ ವಿವೇಕಾನಂದರಿಗೆ ಬಲವಂತ ಪಡಿಸಿಯಾದರೂ ಜ್ಞಾನಮಾರ್ಗವನ್ನೂ ಮತ್ತೆಕೆಲವರಿಗೆ ಭಕ್ತಿ ಮಾರ್ಗವನ್ನೂ ಬೋಧಿಸುತ್ತಿದ್ದರು. ಸ್ವಾಮಿ ಅಭೇದಾನಂದರವರು ಭಕ್ತಿಮಾರ್ಗವನ್ನು ಅನುಸರಿಸುತ್ತಿದ್ದಾಗ ಮಧ್ಯೆ ವಿವೇಕಾನಂದ ರವರು ಅವರನ್ನು ಜ್ಞಾನಮಾರ್ಗಕ್ಕೆ ತಿರುಗಿಸಲು, ಪರಮಹಂಸರು ಬಹಳ ಬೇಸರಪಟ್ಟುಕೊಂಡು ದಾರಿತಪ್ಪಿಹೋದ ಸಾಧಕನಿಗೆ ದಾರಿ ತೋರಿಸಿದರು. ಗಿರೀಶ ಚಂದ್ರಘೋಷರಿಗೆ ಇದಾವುದನ್ನೂ ಹೇಳದೇ "ನನಗೆ ವಕಾಲತ್ತುನಾಮೆ ಕೊಟ್ಟುಬಿಡು. ನೀನು ಮಾಡಬೇಕಾದ ದೇವರ ಪೂಜೆ, ಪುರಸ್ಕಾರ, ಧ್ಯಾನ, ಜಪ ಮುಂತಾದ್ದನ್ನೆಲ್ಲಾ ನಾನು ಮಾಡಿಬಿಡುತ್ತೇನೆ, ನೀನು ಮಾಡುವ ಒಳ್ಳೆಯದು ಕೆಟ್ಟದ್ದೆಲ್ಲಾ ನನಗಿರಲಿ" ಎಂದು ಹೇಳಿ ಅವರ ಭಾರವನ್ನೆಲ್ಲ ತಾವು ಹೊತ್ತುಕೊಂಡರು. ಅಘೋರಮಣಿ ಅಥವಾ "ಗೋಪಾಲ ಲೇರಮಾ" (ಗೋಪಾಲನತಾಯಿ) ಎಂಬಾಕೆಗೆ ಭಕ್ತಿಮಾರ್ಗದಲ್ಲಿ ಯೇ ಕೊನೆಯವರೆಗೂ ಶಿಕ್ಷಣವನ್ನು ಕೊಟ್ಟರು. ಯೋಗಾನಂದ ಸ್ವಾಮಿಗಳು ಒಬ್ಬ ಹಠಯೋಗಿಯ ಹತ್ತಿರಕ್ಕೆ ಹೋಗಿಬರುತ್ತಿದ್ದ ದ್ದನ್ನು ಕಂಡುಹಿಡಿದು ಬಲವಂತವಾಗಿ ಅದನ್ನು ಬಿಡಿಸಿ "ನೀನು ಅಲ್ಲಿಗೆ ಏಕೆ ಹೋದದ್ದು? ಅಲ್ಲಿಗೆ ಹೋಗಬೇಡ; ಅದೆಲ್ಲಾ ಕಲಿತುಕೊಂಡರೆ ಶರೀರದಮೇಲೆಯೇ ಮನಸ್ಸು ಹೋಗುತ್ತದೆ; ದೇವರ ಕಡೆಗೆ ತಿರುಗುವುದೇ ಇಲ್ಲ" ಎಂದು ಹೇಳಿ ಹರಿಧ್ಯಾನ ಮಾಡುವ ಹಾಗೆ ಏರ್ಪಾಡುಮಾಡಿದರು. ಒಬ್ಬ ಹೆಂಗಸು ಬಂದು, ಧ್ಯಾನ ಜಪಮಾಡುವುದಕ್ಕೆ ಕುಳಿತುಕೊಂಡಾಗಲೆಲ್ಲಾ ಸಂಸಾರದ ಕಡೆಯೇ

ಮನಸ್ಸು ಹೋಗುವುದೆಂದೂ, ಅವರ ಯೋಚನೆ, ಇವರ ಮುಖ ಇವೇ ಜ್ಞಾಪಕಕ್ಕೆ ಬರುತ್ತಿದ್ದವೆಂದೂ ಮನಸ್ಸಿಗೆ ಸಮಾಧಾನವೇ ಇರುತ್ತಿರಲಿಲ್ಲವೆಂದೂ ಹೇಳಲು, ಆಕೆಗೆ ಯಾರಮೇಲೋ ವಿಶೇಷ ವಾದ ಮಮತೆಯಿದ್ದದ್ದರಿಂದ ಹೀಗಾಗುತ್ತಿತ್ತೆಂದು ತಿಳಿದು, ಆಕೆ ಯನ್ನು ಕುರಿತು "ಯಾರಮುಖ ಜ್ಞಾಪಕಕ್ಕೆ ಬರುತ್ತದಮ್ಮ? ಸಂಸಾರದಲ್ಲಿ ಯಾರಮೇಲೆ ನಿಮಗೆ ವಿಶೇಷ ಅಂತಃಕರಣ, ಹೇಳಿ" ಎಂದು ಕೇಳಿದರು. ಆಕೆಯು ತನ್ನ ಅಣ್ಣನಮಗು ಒಂದು ಇತ್ತೆಂದೂ, ಅದನ್ನು ಸಾಕುತ್ತಿದ್ದಳೆಂದೂ ಅದರಮೇಲೆ ಆಕೆಗೆ ವಿಶೇಷ ಮಮತೆಯೆಂದೂ ಹೇಳಿದಳು. ಅದನ್ನು ಕೇಳಿ ಪರಮಹಂಸರು "ಒಳ್ಳೆಯದು; ಹಾಗಾದರೆ ಇನ್ನುಮೇಲೆ ಆ ಹುಡುಗನಿಗೆ ನೀವು ಏನೇನು ಮಾಡುತ್ತೀರಿ—ಊಟ ಮಾಡಿಸುವುದು ಬಟ್ಟೆ ಹಾಕುವು ದು—ಅದೆಲ್ಲಾ ಸಾಕ್ಷಾತ್ ಗೋಪಾಲನಿಗೆ ಮಾಡುವಹಾಗೆ ಭಾವಿಸಿ ಮಾಡಿ; ಗೋಪಾಲರೂಪಿಯಾದ ಭಗವಂತನೇ ಆ ಹುಡುಗನೊಳ ಗಿರುವಹಾಗೂ, ಅವನಿಗೇ ಊಟ ಮಾಡಿಸುವುದು, ಬಟ್ಟೆ ಹಾಕುವುದು, ಸೇವೆಮಾಡುವುದು ಇವನ್ನೆಲ್ಲಾ ಮಾಡುವಹಾಗೂ ಭಾವಿಸಿಕೊಂಡು ಮಾಡಿ; ಮನುಷ್ಯನಿಗೆ ಮಾಡುತ್ತೇನೆಂದು ಯಾಕಮ್ಮ ಭಾವಿಸಿ ಕೊಳ್ಳಬೇಕು? ಎಂಥ ಭಾವವೋ ಅಂಥ ಲಾಭ!" ಎಂದು ಹೇಳಿ ದರು. ಆ ಕ್ರಮವನ್ನು ಅನುಸರಿಸುತ್ತ ಬರಲು ಆಕೆಗೆ ಶೀಘ್ರ ವಲ್ಲಿಯೇ ವಿಶೇಷವಾದ ಮಾನಸಿಕ ಉನ್ನತಿ ಯುಂಟಾಯಿತಂತೆ. ಮತ್ತೊಬ್ಬಾಕೆಯು ಬಂದು "ಸ್ವಾಮಿ ನನಗೆ ಬಹಳವಾಗಿ ದೇವರ ಧ್ಯಾನ ಮಾಡಬೇಕೆಂದಾಶೆಯಿದೆ. ಮನಸ್ಸನ್ನೆಲ್ಲಾ ಅವನಮೇಲೆ ಇಟ್ಟುಬಿಡಬೇಕೆನ್ನುತ್ತೇನೆ; ಆದರೆ ಏನೇನು ಮಾಡಿದರೂ ಮನಸ್ಸೇ ಬಗ್ಗುವುದಿಲ್ಲವಲ್ಲ! ಏನುಮಾಡಲಿ?" ಎಂದು ಕೇಳಿದಳು. ಅದಕ್ಕೆ ಪರಮಹಂಸರು "ಅವನಮೇಲೆ (ದೇವರಮೇಲೆ) ಭಾರಹಾಕಿ ಬಿಡಬೇಕಮ್ಮ! ಗಾಳಿಗೆ ಸಿಕ್ಕಿದ ಎಂಜಲೆಲೆಯ ಹಾಗಿದ್ದುಬಿಡ ಬೇಕು. ಅದು ಹ್ಯಾಗೆ ಅಂತೀರಿ? ಎಲೆ ಬಿದ್ದಿದೆ. ಅದನ್ನು ಗಾಳಿ

ಎಲ್ಲೆಲ್ಲಿಗೆ ಎತ್ತಿಕೊಂಡುಹೋದರೆ ಅಲ್ಲಲ್ಲಿಗೆ ಹೊರಟುಹೋಗುತ್ತದೆ. ಅದರ ಹಾಗೆ. ಅವನಮೇಲೆ ಭಾರಹಾಕಿದ್ದು ಬಿಡಬೇಕು. ಚೈತನ್ಯವಾಯುವು ಹ್ಯಾಗೆ ಹ್ಯಾಗೆ ಮನಸ್ಸನ್ನು ತಿರುಗಿಸುತ್ತೋ ಹಾಗೆ ಹಾಗೆ ತಿರುಗಬೇಕು—ಇಷ್ಟೇ! ಇನ್ನೇನು?" ಎಂದರು. ಹೀಗೆ ಹೆಂಗಸರು, ಗಂಡಸರು, ಯುವಕರು, ಯುವತಿಯರು, ವೃದ್ಧರು, ವಿಧವೆಯರು, ಸಧವೆಯರು ಯಾರು ಬಂದರೂ ಅವರವರಿಗೆ ತಕ್ಕ ಮಾರ್ಗವನ್ನು ಅವರವರಿಗೆ ತಕ್ಕ ರೀತಿಯಲ್ಲಿ ಬೋಧಿಸುತ್ತಿದ್ದರು. ಮೇಲೆ ಕೊಟ್ಟಿರುವ ಕೆಲವು ಉದಾಹರಣೆಗಳಿಂದ ಒಬ್ಬರಿಗೆ ಹೇಳಿದ ಮಾರ್ಗವು ಮಿಕ್ಕವರಿಗೆ ಎಂದಿಗೂ ಸರಿಹೋಗಲಾರದೆಂದು ಪಾಠಕರೇ ತಿಳಿದುಕೊಳ್ಳಬಹುದು.

ಆದರೆ ಕೆಲವು ಅಸಹ್ಯಕರಗಳಾದ ಕ್ಲೇಶಕರಗಳಾದ ತಾಂತ್ರಿಕ, ಕಾಪಾಲಿಕ ಮುಂತಾದ ಮಾರ್ಗಗಳನ್ನು ಮಾತ್ರ ಯಾರಿಗೂ ಅನುಸರಿಸುವ ಹಾಗೆ ಹೇಳುತ್ತಿರಲಿಲ್ಲ. ಅವೆಲ್ಲ ನಿರುಪಯೋಗವೆಂದಾಗಲಿ ಸುಳ್ಳೆಂದಾಗಲಿ ಅವರ ಅಭಿಪ್ರಾಯವಲ್ಲ. ಆ ವಿಚಾರವಾಗಿ "ಎಲೋ ದ್ವೇಷಬುದ್ಧಿ ಯಾಕೋ? ಅದೂ (ಕಾಪಾಲಿಕ ಅಥವಾ ತಾಂತ್ರಿಕಮಾರ್ಗ) ಒಂದುಮಾರ್ಗ. ಆದರೆ ಕೊಳಕು ಮಾರ್ಗ. ಒಂದು ಮನೆಯೊಳಗೆ ಹೋಗುವುದಕ್ಕೆ ಎಷ್ಟೋ ಬಾಗಿಲುಗಳಿವೆ. ದೊಡ್ಡ ಬೀದಿಯ ಬಾಗಿಲಿದೆ, ಕಿಟಕಿಯ ಬಾಗಿಲಿದೆ. ಗುಡಿಸುವವನು ಬರುವುದಕ್ಕೆ ಹಿತ್ತಿಲುಕಡೆ ಒಂದು ಬಾಗಿಲೂ ಇದೆ. ಎಲ್ಲವನ್ನೂ ಬಿಟ್ಟು ಈ ಹಿತ್ತಿಲಿನ ಕೊಳಕು ಬಾಗಿಲಿಂದ ಏಕೆ ಬರಬೇಕು?" ಎಂದುಹೇಳುತ್ತಿದ್ದರು. ಇದಕ್ಕೆ ಕಾರಣವೇನೆಂದರೆ ಅವರು ನಮ್ಮಂತೆ ಸ್ಥೂಲವಾದ ದೇಹವನ್ನು ನೋಡದೆ ಪ್ರತಿಯೊಬ್ಬರ ಮನಸ್ಸನ್ನೂ ಹೃದಯವನ್ನೂ ನೋಡಬಲ್ಲವರಾಗಿದ್ದರು. ರೋಗಿಯ ಸ್ಥಿತಿಯನ್ನು ತಿಳಿದುಕೊಂಡ ವೈದ್ಯನಂತೆ ಅವರವರ ಮನಸ್ಸು, ಸ್ವಭಾವ, ಸಂಸ್ಕಾರ, ಮುಂತಾದುವುಗಳಿಗೆ ಸರಿಯಾದ ಮಾರ್ಗವನ್ನು ವಿಧಿಸಿ ಅವಶ್ಯವಿದ್ದರೆ ಅವುಗಳನ್ನು ಹೇಗೆ ಬೇಕೋ ಹಾಗೆ ತಿರುಗಿಸುತ್ತಿದ್ದರು!

ಪಾಶ್ಚಿಮಾತ್ಯರೂ, ಅವರ ರೀತಿ ನೀತಿಗಳನ್ನು ಮೆಚ್ಚುತಕ್ಕ ನಮ್ಮ ದೇಶಿಯರೂ "ನಮ್ಮದೇಶದ ಸ್ವಾಮಿಗಳೂ, ಸನ್ಯಾಸಿಗಳೂ, ಮಠಾಧಿಪತಿಗಳೂ, ಎಲ್ಲರೂ ಶುದ್ಧ Selfish (ಸ್ವಾರ್ಥಪರರು): ತಮ್ಮ ಗತಿಯನ್ನು ತಾವು ನೋಡಿಕೊಂಡರೆ ಸರಿ; ಅವರು ನಿಜವಾಗಿಯೂ ಅಂಥ ಮೋಕ್ಷಸಾಧಕವಾದ ವಿಷಯಗಳನ್ನು ತಿಳಿದುಕೊಂಡಿದ್ದರೆ ಊರೂರಿಗೂ ಹೋಗಿ ಲೆಕ್ಚರುಗಳನ್ನು ಕೊಡಲಿ." ಎಂದು ಹೇಳಿರುವುದನ್ನು ಕೇಳಿರಬಹುದು. ಉಪನ್ಯಾಸಗಳನ್ನು ಕೊಡುವುದರಿಂದಲೇ ಪ್ರಪಂಚ ಉದ್ಧಾರವಾಗುವಂತೆ ಈಗಿನ ಕಾಲದಲ್ಲಿ ಜನರು ತಿಳಿದುಕೊಂಡಿರುವ ಹಾಗಿದೆ. ನಿಜವಾದ ಗುರುವು ಉಪನ್ಯಾಸಗಳನ್ನೇ ಕೊಡಬೇಕೆ? ಅವನ ದರ್ಶನ ಮಾತ್ರದಿಂದ ಜನರು ಕೃತಾರ್ಥರಾಗರೆ? ಗುರುವಿನ ಮನಸ್ಸಿನಲ್ಲಿ ಭಕ್ತನಿಗೆ ಜ್ಞಾನೋದಯವಾಗಲಿ ಎಂಬ ಕೋರಿಕೆ ಅಂಕುರಿಸಿದರೆ ಸಾಲದೆ? ಅವರು ಊರಿಂದೂರಿಗೆ ಅಲೆಯುತ್ತಾ ಹೋಗಬೇಕೆ? ಅವರಲ್ಲಿ ಮಹಿಮೆ ಇದ್ದರೆ ಶಿಷ್ಯರೇ ಹುಡುಕಿಕೊಂಡು ಬರುವುದಿಲ್ಲವೇ? ಪರಮಹಂಸರು "ಹೂ ಅರಳಿ ಮಕರಂದದಿಂದ ತುಂಬಿದರೆ ದುಂಬಿಗಳು ತಾವಾಗಿಯೇ ಹುಡುಕಿಕೊಂಡು ಬರುವುವು. ಅವುಗಳಿಗೆ ಯಾರೂ ಮಂತ್ರಾಕ್ಷತೆ ಕೊಟ್ಟು ಕರೆಸಬೇಕಾಗಿಲ್ಲ." ಎಂದು ಹೇಳುತ್ತಿದ್ದರು. ಹಾಗಲ್ಲದೆ ನಿಸ್ಸಾರವಾದ, ಒಣಗಿಹೋದ ನಿರ್ಗಂಧ ಕುಸುಮವು ದುಂಬಿಗಳ ಮೇಲೆ ಹೋಗಿಬಿದ್ದರೆ ತಾನೇ ಆ ದುಂಬಿಗಳಿಗೆ ಆನಂದವುಂಟಾಗುವುದೇ? ಮಧುವಿನಿಂದ ತುಂಬಿ ತುಳುಕುತ್ತಿರುವ ಹೂವಿನಿಂದ, ಅದನ್ನು ಆಸ್ವಾದನೆ ಮಾಡಲು ಶಕ್ತಿಯಿಲ್ಲದ ಹುಳು ಹುಬಟೆಗಳಿಗೆ ತಾನೇ ಪ್ರಯೋಜನವಾಗುವುದೋ? ಆದ್ದರಿಂದ ಒಂದುಕಡೆ ಗುರುವು ಜ್ಞಾನವನ್ನು ಪಡೆದು ಅದನ್ನು ಶೇಖರಿಸಿ ಇತರರಲ್ಲಿ ಧರ್ಮಶಕ್ತಿಯನ್ನು ಎಬ್ಬಿಸಲು ಸಮರ್ಥನಾಗಿರಬೇಕು. ಮತ್ತೊಂದುಕಡೆ ಶಿಷ್ಯನು ನಿಜವಾದ ಶ್ರದ್ಧೆ, ವೈರಾಗ್ಯ, ಪವಿತ್ರತೆ, ಮೋಕ್ಷ ಪಡೆಯುವುದಕ್ಕೆ ಆಶೆ, ಇವೆಲ್ಲವನ್ನೂ

ಉಳ್ಳವನಾಗಿರಬೇಕು. ಹೀಗೆ ಮುಮುಕ್ಷುತ್ವವಿದ್ದರೆ ಮಹಾಪುರುಷ ಸಂಶ್ರಯವೂ ಉಂಟಾಗಿಯೇ ಆಗುವುದು—ಆಗಲೇಬೇಕು. ಆಧ್ಯಾತ್ಮಿಕ ವಿಚಾರಗಳಲ್ಲಿ ಮಾತ್ರ ಇಂದಿಗೂ ನಾಳೆಗೂ, ಹಸಿದು ಬಾಯಾರಿ ಬೇಸತ್ತು ಬಂದು "ದೇಹಿ" ಎಂದರೆ * ಧರ್ಮಭೂಮಿಯಾದ ನಮ್ಮದೇಶದಲ್ಲಿ "ನಾಸ್ತಿ" ಎನ್ನುವಹಾಗಿಲ್ಲ. ನಾವೇ ಸಂಶಯಾತ್ಮರು. ನಮ್ಮಲ್ಲಿಯೇ ನಮಗೆ ನಂಬುಗೆಯಿಲ್ಲ. ದೇವರಲ್ಲಿ ಕೇಳಬೇಕೆ? ಅಲ್ಲದೆ ನಮ್ಮಲ್ಲಿ ತೀವ್ರ ವೈರಾಗ್ಯವು ಹುಟ್ಟಿಬಿಟ್ಟಂತೆ ಕಾಣುತ್ತದೆ. ಆ ವೈರಾಗ್ಯವು ಅಭಾವ ವೈರಾಗ್ಯವೋ ಸ್ಮಶಾನ ವೈರಾಗ್ಯವೋ ಅಥವಾ ನಮ್ಮನಮ್ಮ ಕರ್ತವ್ಯವನ್ನು ಮಾಡುವುದಕ್ಕೆ ಕೈಯಲ್ಲಿ ಹರಿಯದೆ ಹುಟ್ಟಿದ ಸುಳ್ಳು ವೈರಾಗ್ಯವೋ ಹೊರತು ನಿಜವಾದ ವೈರಾಗ್ಯವಲ್ಲ. ಈ ವಿಚಾರದಲ್ಲಿ ನಮ್ಮ ಕಳ್ಳ ಮನಸ್ಸೇ ನಮ್ಮನ್ನು ಮೋಸ ಪಡಿಸುವುದು. ಏಕೆಂದರೆ ಉತ್ತರಕ್ಷಣದಲ್ಲಿಯೇ ಪರಮಹಂಸರು ಆಜೀವನವೂ ಮಾತುಮಾತಿಗೂ ಒತ್ತಿಒತ್ತಿ ಪ್ರಸ್ತಾಪಿಸುತ್ತಿದ್ದ ಕಾಮಿನೀಕಾಂಚನಗಳು ಬಾಧಿಸತೊಡಗುವುವು. (ನಿಜವಾದ ವೈರಾಗ್ಯಕ್ಕೆ ಕಾಮಿನೀಕಾಂಚನಗಳ ಮೇಲಣ ಆಶೆಯು ಪೂರ್ತಿಯಾಗಿ ಹೋಗುವುದೇ ಲಕ್ಷಣ.) ನಿಜವಾದ ವೈರಾಗ್ಯ, ಶ್ರದ್ಧೆ, ಅಭ್ಯಾಸಗಳಿದ್ದು ಕಾಮಿನೀಕಾಂಚನಗಳನ್ನು ತ್ಯಜಿಸಿ ಮೋಕ್ಷವನ್ನು ಸಾಧಿಸಬೇಕೆಂದು ಆಸಕ್ತಿ ಇರುವವನಿಗೆ ಸಕಾಲದಲ್ಲಿ ಗುರುವು ದೊರೆತೇ ದೊರೆಯುವನು. ಅವಶ್ಯವಿದ್ದರೆ ಗುರುವೇ ಶಿಷ್ಯನನ್ನು ಹುಡುಕಿಕೊಂಡು ಹೋಗುವನು. ಪರಮಹಂಸರ ಜೀವನ ಚರಿತ್ರೆಯಿಂದಲೇ ಇದಕ್ಕೆ ಉದಾಹರಣೆಗಳನ್ನು ಕೊಡಬಹುದು.

ಈಗಿನ ಕಾಲದಲ್ಲಿ ಹಿಂದೂಧರ್ಮವು ನಮ್ಮದೇಶದ ಅವನತಿಗೆ ಮುಖ್ಯಕಾರಣವೆಂದೂ, ದೇಶೋನ್ನತಿಗೆ ದೊಡ್ಡ ಅಡಚಣೆ

---

* "Ask, and it shall be given".—Christ.

ಯೆಂದೂ ಕೂಗಿಕೊಳ್ಳುವುದು ರೂಢಿಯಾಗಿದೆ. ಧರ್ಮವು ಎಂದೂ ನಮ್ಮದೇಶದ ಅವನತಿಗೆ ಕಾರಣವಲ್ಲವೇ ಅಲ್ಲ. ಅದಕ್ಕೆ ಕಾರಣ ವನ್ನು ಬೇರೆಕಡೆ ಹುಡುಕಬೇಕು. ಧರ್ಮವೆಂಬ ತಳಹದಿಯ ಮೇಲೆಯೇ ಸಾವಿರಾರು ವರ್ಷಗಳಿಂದ ಭಾರತೀಯರ ಸಮಾಜ ರೀತಿನೀತಿಗಳು ನಿಂತುಕೊಂಡಿವೆ. ಇಷ್ಟು ದಿನಗಳಾದರೂ ಸ್ವಲ್ಪವೂ ಅಲ್ಲಾಡದಿರುವ ಆ ತಳಹದಿಯ ಮೇಲೆಯೇ ಮುಂದಕ್ಕೂ ಕಟ್ಟಡ ವನ್ನು ಕಟ್ಟಿಕೊಂಡು ಹೋಗುವುದೇ ನಮಗೆ ಸುಖಕರ, ಶ್ರೇಯಸ್ಕರ, ಕ್ಷೇಮಕರ. ಇದಕ್ಕೆ ದೇಶವಾತ್ಸಲ್ಯವು ತುಂಬಿತುಳುಕುತ್ತಿದ್ದ ಸ್ವಾಮಿ ವಿವೇಕಾನಂದರೇ ಉದಾಹರಣೆ. ನಮ್ಮ ಈ ಧರ್ಮದ ಸಹಾಯದಿಂದ ಎಲ್ಲರೂ ಸ್ವಾಮಿ ವಿವೇಕಾನಂದರಂತಾದರೆ ಭಾರತ ಭೂಮಿಯ ಪುಣ್ಯಕ್ಕೆ ಎಣೆಯೇನು?

ಇದಂ ತೇ ನಾತಪಸ್ಕಾಯ ನಾಭಕ್ತಾಯ ಕದಾಚನ ।
ನಚಾಶುಶ್ರೂಷವೇ ವಾಚ್ಯಂ ನಚಮಾಂ ಯೋಽಭ್ಯಸೂಯತಿ

## ಹನ್ನೆರಡನೆಯ ಅಧ್ಯಾಯ.

## ಮಹಾಸಮಾಧಿ.

ಹನ್ನೆರಡು ವರ್ಷಗಳ ದಿವಸಮಾಡಿದ ಕಠೋರವಾದ ಸಾಧನದಿಂದ ಕಂಚಿನಂತಿದ್ದ ಪರಮಹಂಸರ ದೇಹವು ಝುರ್ಝುರಿತವಾಗಿ ಹೋಯಿತು. ಆಮಶಂಕೆಯು ಕಾಣಿಸಿಕೊಂಡಿತು. ಅದು ವಾಸಿಯಾದ ಕೂಡಲೆ ಗಂಟಲೆಲ್ಲ ಹುಣ್ಣಾಗಿ ಅನ್ನ ನೀರು ಹೋಗದಂತಾಯಿತು. ಆಗ ಘನವೈದ್ಯರು ಬಂದು ಚಿಕಿತ್ಸೆಮಾಡಿ ಅವರನ್ನು ಕಲ್ಕತ್ತೆಯಿಂದ ಒಳ್ಳೆಯ ಹವ ಇರುವ ಯಾವುದಾದರೊಂದು ಕಡೆಗೆ ಕರೆದುಕೊಂಡು ಹೋಗುವುದು ಉಚಿತವೆಂದು ಸೂಚಿಸಿದರು. ಆದ್ದರಿಂದ ಶಿಷ್ಯರು ಕಲ್ಕತ್ತೆಗೆ ಹತ್ತಿರದಲ್ಲಿರುವ ಕಾಶೀಪುರವೆಂಬ ಗ್ರಾಮಕ್ಕೆ ಸೇರಿದ ಒಂದು ತೋಟದಲ್ಲಿ ಮನೆಯನ್ನು ಗೊತ್ತುಮಾಡಿ ಅಲ್ಲಿಗೆ ಪರಮಹಂಸರನ್ನು ಕರೆದುಕೊಂಡು ಹೋದರು. ಇಷ್ಟು ಹೊತ್ತಿಗೆ ಅವರ ಮಾಹಾತ್ಮ್ಯವು ಎಲ್ಲೆಲ್ಲಿಯೂ ಹರಡಿ ಹೋಗಿದ್ದದ್ದರಿಂದ ಹಗಲೂ ಇರುಳೂ ಭಕ್ತಾದಿಗಳು ಇಲ್ಲಿಗೂ ಬರುವುದಕ್ಕೆ ಮೊದಲು ಮಾಡಿದರು. ವೈದ್ಯರು ಮಾತನಾಡಕೂಡದೆಂದು ಅಡ್ಡಿ ಮಾಡಿದ್ದರೂ ಪರಮಹಂಸರು ಅದಕ್ಕೆ ಲಕ್ಷ್ಯಕೊಡದೆ ತಮ್ಮ ದರ್ಶನಕ್ಕಾಗಿ ಬಂದ ಭಕ್ತರಿಗೆಲ್ಲ ಎಂದಿಗಿಂತಲೂ ಹೆಚ್ಚಾಗಿ ಬೋಧಿಸತೊಡಗಿದರು. ಈ ಕಾಲದಲ್ಲಿಯೇ ಅವರು ತಮ್ಮ ಮುಖ್ಯ ಮುಖ್ಯರಾದ ಶಿಷ್ಯರಿಗೆ ಸನ್ಯಾಸಕೊಟ್ಟು ಆಮೇಲೆ ವಿವೇಕಾನಂದ ಸ್ವಾಮಿಗಳಿಗೆ ತಮ್ಮ ಧರ್ಮಶಕ್ತಿಯನ್ನೆಲ್ಲಾ ಲೋಕಸಂಗ್ರಹಾರ್ಥವಾಗಿ ದಾನಮಾಡಿ, ಮಿಕ್ಕ ಶಿಷ್ಯರ ಯೋಗಕ್ಷೇಮವನ್ನು ಅವರ ವಶಕ್ಕೆ ಒಪ್ಪಿಸಿದರು.

ಯಾವ ಚಿಕಿತ್ಸೆಯಿಂದಲೂ ಉಪಯೋಗವಾಗಲಿಲ್ಲ. ಶಿಷ್ಯರು ನಿದ್ರಾಹಾರಗಳಿಲ್ಲದೆ ಉಪಚಾರ ಮಾಡುತ್ತಿದ್ದರು. ಆದರೂ ರೋಗವು ದಿನದಿನಕ್ಕೆ ಹೆಚ್ಚಾಗಿ ಶ್ರೀ ಶ್ರೀ ಪರಮಹಂಸರವರು (1886 ನೇ ಇಸವಿ ಆಗಸ್ಟು ಹದಿನಾರನೆಯ ತಾರೀಖು ಭಾನುವಾರದಿನ ಪರಂಧಾಮವನ್ನೈದಿದರು.

ಸಂಪೂರ್ಣ.

**ಮಂಗಳಮಸ್ತು.**

# ಶುದ್ಧಿಪತ್ರ.

| ಪಂಕ್ತಿ. | ಅಶುದ್ಧ. | ಶುದ್ಧ. |
| --- | --- | --- |
| ೩ | ಲಕ್ಷ್ಮೀವೂ | ಲಕ್ಷ್ಮೀವು |
| ೨೦ | ಯಾವನ್ಯಾಯು ?,, | ಯಾವನ್ಯಾಯು ?" |
| ೨೦ | ಕಾಮಾರವುರಕ್ಕೂ | ಕಾಮಾರವುಕುರಕ್ಕೂ |
| ೨ | 'ರಾಮಕೃಷ್ಣನ' | ಎಂಬುದನ್ನು ಬಿಟ್ಟುಬಿಡಬೇಕು. |
| ೭ | 'ಈ ಕಾಲದಲ್ಲಿ' ಎಂಬುದಾದಮೇಲೆ 'ನಡೆದ' ಎಂಬ ಶಬ್ದವನ್ನು ಸೇರಿಸಿ ಕೊಳ್ಳಬೇಕು. | |
| ೪ | ರಾಮಕುಮಾರನು ಜಿಂತೆ | ರಾಮಕುಮಾರನ ಜೊತೆ |
| ೩ | ಹೀಗೆ | ಹೇಗೆ |
| ೨೬ | ವಿಗ್ರಹಗಳನ್ನೂ | ವಿಗ್ರಹಗಳನ್ನು |
| ೧೫ | ಪಾರಾಯಣತೆ | ಪರಾಯಣತೆ |
| ೨೪ | ಕೀರ್ಥನೆ | ಕೀರ್ತನೆ |
| ೧೦ | ಚರಿತೆ | ಚರಿತ್ರೆ |
| ೫ | ಸಮಾನವಾದ | ಸಮಾನನಾದ |
| ೪ | ರಾತ್ರಿಯುನ್ನದೆ | ರಾತ್ರಿಯೆನ್ನದೆ |
| ೧೫ | ಹೇಳಿದನು | ಹೇಳಿದರು |
| ೧೭ | ಸಿಟ್ಟಿ | ಸಿದ್ಧಿ |
| ೧೩ | ಒಂದಪೂರ್ವದ | ಒಂದಪೂರ್ವವಾದ |
| ೧೯ | ದೂಳನ್ನು | ಧೂಳನ್ನು |
| ೧೬ | ಮಣ್ಣೂ | ಮಣ್ಣು |